ಶ್ರೀವಿದ್ಯಾ ಉಪಾಸನೆ

ಯಂತ್ರ , ಮಂತ್ರ , ತಂತ್ರ

ಸಾ. ಕೃ. ರಾಮಚಂದ್ರರಾವ್

ಶ್ರೀವಿದ್ಯಾ ಉಪಾಸನೆ

ಯಂತ್ರ, ಮಂತ್ರ, ತಂತ್ರ

ಇಂಗ್ಲೀಷ್ ಮೂಲ

ಎಸ್. ಕೆ. ರಾಮಚಂದ್ರರಾವ್

ಅನುವಾದ

ಲಕ್ಷ್ಮೀಕಾಂತ ಹೆಗಡೆ

ಸಂಪಾದಕ

ರ. ವಿ. ಜಹಾಗೀರದಾರ

ಅರೋನಾದ

ಬೆಂಗಳೂರು

ಪ್ರಕಾಶಕರು :
ಅರೋನಾದ
71/3, ಬಿ2, ಶಾಕಂಬರಿನಗರ,
ಕನಕಪುರ ಮುಖ್ಯರಸ್ತೆ, ಬೆಂಗಳೂರು-560 070.
ದೂರವಾಣಿ : 080-22456315 / 9341233221
ಇಮೇಲ್ : info@vedah.com

© ಕಾದಿರಿಸಲಾಗಿದೆ

ಮೊದಲ ಮುದ್ರಣ : 2010

ಪುಟಗಳು iv + 144

ಬೆಲೆ : **ರೂ. 125/-**

ಬಳಸಿದ ಕಾಗದ : 70 ಜಿ.ಎಸ್.ಎಂ. ಮ್ಯಾಪ್‌ಲಿಥೊ
ಹೊದಿಕೆ : 300 ಜಿ.ಎಸ್.ಎಂ. ಆರ್ಟ್‌ಬೋರ್ಡ್

ಟೈಪ್ ಸೆಟ್ಟಿಂಗ್ : ಜೆ. ಶ್ರೀನಿವಾಸರಾವು, ಬೆಂಗಳೂರು.
ಮೊಬೈಲ್ : 9449110060 / 9741785674

ಮುಖಪುಟ ಕಲೆ : ಟಿ. ವಿ. ಶಂಕರ್

ಮುದ್ರಕರು : ಶ್ರೀರಂಗ ಪ್ರಿಂಟರ್ಸ್ ಪ್ರೈವೇಟ್ ಲಿಮಿಟೆಡ್
ಬೆಂಗಳೂರು-560 050.

SREEVIDYA UPASANE [Kannada], Original in English by Prof. S.K. Ramachandra Rao, Translated by Lakshmikant Hegde, Published by : Auronada, Bangalore-560 070. First Edition 2010; Pages : iv + 141 ; Price : Rs. **125/-**.

ಒಳ ಪುಟಗಳಲ್ಲಿ

ಅಧ್ಯಾಯ - 1 : ಶ್ರೀಚಕ್ರ ಯಂತ್ರ **1**

1. ಶ್ರೀಚಕ್ರದ ಸಂಯೋಜನೆ 1
2. ಶ್ರೀಚಕ್ರದ ರಚನಾಕ್ರಮ 13

ಆಕರ ಸೂಚಿಕೆ 47

ಅಧ್ಯಾಯ - 2 : ಶ್ರೀಚಕ್ರ ಮಂತ್ರ **51**

1. ಶ್ರೀಚಕ್ರದ ಸಾಂಕೇತಿಕತೆ 51
2. ಪಂಚದಶೀ ಮತ್ತು ಷೋಡಶೀ 56
3. ಯಂತ್ರ ಮತ್ತು ಮಂತ್ರಗಳ ಏಕಾತ್ಮತೆ (Identity) 75

ಆಕರ ಸೂಚಿಕೆ 82

ಅಧ್ಯಾಯ - 3 : ಶ್ರೀಚಕ್ರ ತಂತ್ರ **89**

1. ಶ್ರೀವಿದ್ಯಾ 89
2. ಆದಿಮ ಮಾದರಿ (Primal Model) 100
3. ಕಾಮ-ಕಲಾ 107

ಆಕರ ಸೂಚಿಕೆ 126

''ಬಾಲಾ-ತ್ರಿಪುರಾ'' 130

ಶ್ರೀಯಂತ್ರವಿನಿರ್ಮಾಣಮ್ 138

ನಿವ್ಮೊಡನೆ

ಶ್ರೀಚಕ್ರವು ಯಂತ್ರ-ರಾಜ ಎಂದೆನಿಸಿದೆ. ಸಾಂಪ್ರದಾಯಕ ಸಾಹಿತ್ಯ, ಬಳಕೆಯಲ್ಲಿರುವ ಹಲವು ಯಂತ್ರಗಳಲ್ಲಿ ಇದು ಜನಜನಿತವೂ ಬಹುಪರಿಚಿತವೂ ಆಗಿದೆ. ಇಷ್ಟೊಂದು ಪ್ರಚಾರದಲ್ಲಿದ್ದರೂ ಇದರ ಸುತ್ತಲೂ ಒಂದು ನಿಗೂಢತೆ ಕವಿದಿದೆ. ಈ ವಿಷಯವು ಯಾರಿಗೂ ಸಿದ್ಧವಾಗಿ, ಸಮಗ್ರವಾಗಿ ದೊರಕಕೂಡದು ಎಂದು ವಿಚಾರ ಮಾಡುವವರೂ ಇದ್ದಾರೆ.

ಧಾರ್ಮಿಕ, ಆಧ್ಯಾತ್ಮಿಕ ಸಾಹಿತ್ಯವು ಯಾವುದೇ ಕುದೃಷ್ಟಿಗಾಗಲೀ, ಒಣ ಕುತೂಹಲಕ್ಕಾಗಲೀ ಈಡಾಗಕೂಡದು; ಆದರೆ ಶ್ರದ್ಧಾವಂತರಿಗೆ ಇದು ಲಭ್ಯವಾಗುವಂತಿರಬೇಕು. ಶ್ರೀಚಕ್ರ ಕುರಿತ ವಿವರಗಳು ಬಹು ಅಮೂಲ್ಯ ರಹಸ್ಯಗಳು ಎಂದು ಪರಿಗಣಿಸಲಾಗಿದ್ದರೂ, ಶ್ರೀಚಕ್ರದ ಮಹಿಮೆ, ಅದರ ರಚನೆ, ಉಪಾಸನಾ ವಿಧಾನ ಕುರಿತಂತೆ ಸಂಸ್ಕೃತದಲ್ಲಿ ಅಪಾರ ಸಾಹಿತ್ಯ ರಚನೆಯಾಗಿದೆ. ಶ್ರೀಚಕ್ರ ಉಪಾಸನೆಯ ದೀಕ್ಷೆಯನ್ನು ಯೋಗ್ಯ ಗುರುಗಳಿಂದ ಪಡೆದು, ಅದಕ್ಕೆ ನಿಷ್ಠರಾಗಿ ಮುಂದುವರಿಯಬೇಕಾಗುತ್ತದೆ.

ಪ್ರಸ್ತುತ ಪುಸ್ತಕವು ಶ್ರೀಚಕ್ರ ಕುರಿತಂತೆ ಅಧಿಕೃತ ಮಾಹಿತಿ ಹೊಂದಿದೆ. ನಾಡಿನ ಶ್ರೇಷ್ಠ ವಿದ್ವಾಂಸ ಪ್ರೊ॥ ಎಸ್. ಕೆ. ರಾಮಚಂದ್ರರಾವ್ ಅವರ ಈ ಕೃತಿ ಜ್ಞಾನಪಿಪಾಸುಗಳ ಹಾಗೂ ಶ್ರದ್ಧಾಂತರ ಹಂಬಲ ನೀಗಿಸಬಲ್ಲದ್ದಾಗಿದೆ ಎಂಬ ವಿಶ್ವಾಸ ನಮಗಿದೆ.

ಪ್ರಸ್ತುತ ಕನ್ನಡ ಅವತರಣಿಕೆಯನ್ನು ಪ್ರಕಟಿಸಲು ಅನುಮತಿ ನೀಡಿದ ಶ್ರೀಮತಿ ರಾಮಚಂದ್ರರಾವ್ ಹಾಗೂ ಅವರ ಪುತ್ರ ಡಾ॥ ಸುದರ್ಶನ್ ಇವರಿಗೆ ನಾವು ಕೃತಜ್ಞರಾಗಿದ್ದೇವೆ.

ಅತ್ಯಂತ ಶ್ರದ್ಧೆಯಿಂದ, ತುಂಬ ಮುತುವರ್ಜಿ ವಹಿಸಿ ಕನ್ನಡ ಅನುವಾದ ಮಾಡಿದ ಶ್ರೀ ಲಕ್ಷ್ಮೀಕಾಂತ ಹೆಗಡೆಯವರಿಗೆ ಧನ್ಯವಾದ ಸಮರ್ಪಿಸುತ್ತಿದ್ದೇವೆ. ಡಿ.ಟಿ.ಪಿ. ಕಾರ್ಯವನ್ನು ಅಚ್ಚುಕಟ್ಟಾಗಿ, ತಾಳ್ಮೆಯಿಂದ, ಸಕಾಲದಲ್ಲಿ ಮಾಡಿದ ಶ್ರೀ ಶ್ರೀನಿವಾಸರಾವ್ ಅವರಿಗೂ ಧನ್ಯವಾದಗಳು.

- ಪ್ರಕಾಶಕ

ಅಧ್ಯಾಯ - 1

ಶ್ರೀಚಕ್ರ ಯಂತ್ರ

1. ಶ್ರೀಚಕ್ರದ ಸಂಯೋಜನೆ

ಆರಾಧನೆಗಾಗಿ ಯಂತ್ರಗಳನ್ನುಪಯೋಗಿಸುವುದು ವ್ಯಾಪಕವಾಗಿ ಪ್ರಚಲಿತವಿದೆ. ಪ್ರತಿಮೆಗಳನ್ನು ಉಪಯೋಗಿಸುವಾಗ ಕೂಡ, ಅವುಗಳಮುಂದೆ (ಪ್ರತಿಮೆಯು ಸ್ಥಿರವಾಗಿ ಸ್ಥಾಪಿಸಲ್ಪಟ್ಟಿರುವಾಗ) ವಿಶಿಷ್ಟವಾದ ಯುಕ್ತ ರೇಖಾಕೃತಿಗಳನ್ನು ಬರೆದು, ಅವುಗಳ ಮೇಲೆ ಪೂಜಾವಿಧಿಗಳನ್ನು ನಡೆಸಲಾಗುತ್ತದೆ. ಚರಮೂರ್ತಿಯಿದ್ದಾಗ, ಪ್ರತಿಮೆಯನ್ನು, ಬರೆಯಲ್ಪಟ್ಟ ಯಂತ್ರಾಕೃತಿಯ ಮೇಲೆಯೇ ಇಟ್ಟು ಪೂಜೆಯನ್ನು ನಡೆಸಲಾಗುತ್ತದೆ. ಹಾಗೆ ಬರೆದ ಮಂಡಲಾಕೃತಿಯು ಅಥವಾ ಯಂತ್ರವು ದೈವಿಕ ಶಕ್ತಿಗಳು ಕೇಂದ್ರಿತವಾಗುವ ಪವಿತ್ರ ಸ್ಥಳವಾಗಿರುವುದೆಂದು ಅರ್ಥ. ಮಂಡಲ ಅಥವಾ ಯಂತ್ರರಚನೆಯು ಸಾಧಾರಣ ಸ್ಥಳವನ್ನು ಪ್ರಭಾವಯುತ ಸ್ಥಾನವನ್ನಾಗಿ, ಸಾಮಾನ್ಯ ಜಡ ಮೂರ್ತಿಯನ್ನು ಶಕ್ತ್ಯಾವಿಷ್ಟ ಪ್ರತಿಮೆಯನ್ನಾಗಿ, ಮತ್ತು ಭಕ್ತನ ಸಾಮಾನ್ಯ ಮನಸ್ಸನ್ನು ಪೂಜಾವಿಧಿಯನ್ನು ಕೈಗೊಳ್ಳಲು ಸಮರ್ಥ ಉಪಕರಣವನ್ನಾಗಿ ಮಾರ್ಪಡಿಸುವ ಕ್ರಿಯೆಯಾಗಿದೆ. ಯಂತ್ರಕ್ಕೆ ಶಕ್ತಿಪ್ರದಾನ ಮಾಡುವುದು ಪ್ರತಿಮೆಯಲ್ಲ; ನಿಜವಾಗಿ, ಪ್ರತಿಮೆಯೇ ಯಂತ್ರ ಮಧ್ಯದಲ್ಲಿರುವುದರ ಕಾರಣದಿಂದಾಗಿ ಶಕ್ತ್ಯಾವಾಹಿತವಾಗುತ್ತದೆ. ಮತ್ತು ಪಾರಂಪರಿಕ ರೀತಿಯಲ್ಲಿ ವಿಧಿವತ್ತಾಗಿ ಮಾಡುವ ಶಕ್ತಿಪೂರಣ ಕ್ರಮದೊಂದಿಗೆ, ಭಕ್ತನ (ಸಾಧಕನ) ಸಂಕಲ್ಪಶಕ್ತಿಯೇ ಯಂತ್ರವನ್ನು ಶಕ್ತಿಪೂರ್ಣವಾದ ಅನುಕೂಲಕರ ವಸ್ತುವನ್ನಾಗಿ ಮಾಡುತ್ತದೆ.

ಶಾಸ್ತ್ರೀಯವಾಗಿ ಅದನ್ನು ಮಂಡಲ ಎಂದು ಕರೆಯಲಾಗುತ್ತದೆ. ಮಂಡಲವೆಂದರೆ ಆವಶ್ಯಕ ಅಂಶಗಳನ್ನು ಆಕರ್ಷಿಸುವಂಥದು, ಸ್ವೀಕರಿಸಿರುವಂಥದು

(**ಮಂಡಂ ಲಾತಿ**)ಎಂದು ಅರ್ಥ. 'ತಂತ್ರರಾಜ ತಂತ್ರ'ವು ಪೂಜೆಯಲ್ಲಿ ಹಾಗೂ ಧ್ಯಾನದಲ್ಲಿ ಮಂಡಲದ ಉಪಯೋಗವನ್ನೂ, ಮಂಡಲದ ಸ್ವಭಾವವನ್ನೂ ವರ್ಣಿಸುತ್ತದೆ. 'ಮಂಡಲ'ವೆಂಬುದು ಭಕ್ತನು (ಸಾಧಕನು)ತಾನು ಇರುವ ಮತ್ತು ಯಾವುದರಲ್ಲಿದ್ದು ತನ್ನ ಭಕ್ತಿಯನ್ನು, ಸಾಧನೆಯನ್ನು ಸಿದ್ಧಿಸಿಕೊಳ್ಳಲೆಳಸುವನೋ ಆ ಜಗತ್ತಿನ ಸಾರದ ಘನೀಭೂತ ಅಂಶವಾಗಿದೆ; ಆ ಸಾರವು ಭಕ್ತನ ಭಕ್ತಿಯ ಉದ್ದೇಶಕ್ಕೋಸ್ಕರವಾಗಿಯೇ ಇರುವ, ತನ್ನ ಅಸ್ತಿತ್ವ ರಚನೆಯ ಮಹತ್ವಪೂರ್ಣ ಅಂಶವೂ ಆಗಿದೆ, ಅಲ್ಲದೆ, ಭಕ್ತನ ಮತ್ತು ಅವನ ಜಗತ್ತಿನ ನಡುವಣ ಪರಸ್ಪರ ಕ್ರಿಯೆಯ ಅತ್ಯಂತ ಮುಖ್ಯವಾದ ಅಂಶದ ಸಾರವೂ ಆಗಿದೆ. ಸುಸಂಬದ್ಧವಾದ ಎಲ್ಲ ವಿವರವಾದ ಭಾಗಗಳ ಮೇಲೆ ಏಕಾಗ್ರತೆಯನ್ನು ಮಾಡಲು ಅನುವಾಗುವ ಒಂದು ಮಾಧ್ಯಮವೂ ಇದಾಗಿದೆ. ಈ ಅರ್ಥದಲ್ಲಿ ಮಂಡಲವನ್ನು ಒಂದು 'ಶಕ್ತಿ ಸಮೂಹ', ಒಂದು 'ಸಂಕೇತ'ವೆಂದು ವ್ಯಾಖ್ಯೆ ಮಾಡಲಾಗಿದೆ.

ಕೇಂದ್ರವು (ಬಿಂದುವು) ಮಂಡಲದ ಉಗಮಸ್ಥಾನ. ಚದುರಿಹೋದ, ಮತ್ತು ಆ ಕಾರಣದಿಂದಲೇ ದುರ್ಬಲವಾದ ಶಕ್ತಿಗಳು ಎಲ್ಲ ಕಡೆಗಳಿಂದಲೂ ಒಟ್ಟುಗೂಡಿಸಲ್ಪಡುತ್ತವೆ. ಹಾಗೆ ಒಟ್ಟಾಗುವುದರಿಂದಲೇ ಅವು ಬಲಯುತವಾಗುತ್ತವೆ. ಅವುಗಳನ್ನು ಕೇಂದ್ರದಲ್ಲಿ (ಬಿಂದುವಿನಲ್ಲಿ) ಏಕತ್ರವಾಗುವಂತೆ ಮಾಡಲಾಗುತ್ತದೆ. ಆ ಕೇಂದ್ರವೂ, ಭಕ್ತನ ಶರೀರದ (ಅಸ್ತಿತ್ವದ) ಕೇಂದ್ರವೂ ಒಂದೇ. ವಿಶ್ವದ ಶಕ್ತಿಗಳು ಮಂಡಲದಲ್ಲಿ ಕೇಂದ್ರಿತವಾಗಿವೆ. ಅಂತೆಯೇ, ಅದೇ ಸಮಯದಲ್ಲಿ ಸಾಧಕನ ಚೈತ್ತಿಕ ಹಾಗೂ ಮನೋಭೌತಿಕ ಶಕ್ತಿಗಳೂ ಅದೇ ಮಂಡಲದಲ್ಲಿ ಕೇಂದ್ರಿತವಾಗುತ್ತವೆ. 'ಸಮಾಹಾರ' ಅಥವಾ 'ಸಂಹೃತಿ' ಎಂಬ ಸಂಸ್ಕೃತ ಶಬ್ದಗಳಿಂದಲೂ ಇದೇ ಅರ್ಥವು ಸೂಚಿತವಾಗುತ್ತದೆ.

ಕೇಂದ್ರದಿಂದ (ಬಿಂದುವಿನಿಂದ) ಎಲ್ಲ ದಿಕ್ಕುಗಳಲ್ಲಿಯೂ ಆವಶ್ಯಕ ಅಂಗಗಳನ್ನು ವಿಸ್ತರಿಸುವ ಸಾಧ್ಯತೆಯು ಮಂಡಲದಲ್ಲಿ ಒಳಗೊಂಡ ಇನ್ನೊಂದು ಪ್ರಕ್ರಿಯೆ.

ಕೇಂದ್ರವೆಂಬ ಬೀಜದಿಂದ ಆತ್ಮಿಕ ಕ್ರಿಯೆ-ಪ್ರತಿಕ್ರಿಯೆಗಳ ವೃಕ್ಷವು ಮೊಳಕೆಯೊಡೆದು ಎಲ್ಲಕಡೆಗೂ ವಿಸ್ತರಿಸುತ್ತದೆ. ಪರಿವರ್ತನೆಯನ್ನುಂಟುಮಾಡುವ, ಸಮಾಹಿತಗೊಳಿಸುವ ಮತ್ತು ಸಾಮರಸ್ಯವನ್ನುಂಟುಮಾಡುವ, ಸುಪ್ತ ಕೇಂದ್ರ ಶಕ್ತಿಗಳು ಅಲ್ಲಿಂದ ಎಲ್ಲಕಡೆಗೆ ಹೊಮ್ಮಿ, ಪಸರಿಸಿ, ಸಾಧಕನನ್ನೂ ಹಾಗೂ ಅವನು ಜೀವಿಸಿರುವ ಜಗತ್ತನ್ನೂ ವ್ಯಾಪಿಸುತ್ತವೆ. ಮಂಡಲವು ಗೈಯುವ ಈ ಕಾರ್ಯಕ್ಕೆ 'ಸೃಷ್ಟಿ' ಎಂದು ಕರೆಯಲಾಗಿದೆ.

ಹೀಗೆ ಸಾಧಕನ ಒಳಗಿರುವ ಮತ್ತು ಹೊರಗಿರುವ ಶಕ್ತಿಗಳನ್ನು ಕ್ರಿಯಾಶೀಲಗೊಳಿಸುವುದು ಮಂಡಲದ ಉದ್ದೇಶ. ವ್ಯಕ್ತಿಗತ ಪ್ರಜ್ಞೆಯ ಆಕಾಶ (ಚಿತ್ತಾಕಾಶ)ದೊಂದಿಗೆ ಮೂರು ಆಯಾಮಗಳುಳ್ಳ ಬಾಹ್ಯ ಆಕಾಶ (ಮಹಾಕಾಶ)ವನ್ನು ಪ್ರಜ್ಞಾತತ್ವದ ಆಕಾಶ (ಚಿದಾಕಾಶ)ದಲ್ಲಿ ಪರಿಣಾಮಕಾರಿಯಾಗಿ ಸಂಬದ್ಧಗೊಳಿಸುವಂತಹ ಚೈತ್ತಿಕ-ವೈಶ್ವಿಕ ಕ್ರಿಯಾತಂತ್ರವಿದು. ಅದು ಕರ್ತೃ-ಕರ್ಮ (ಧ್ಯಾತೃ-ಧ್ಯೇಯ) ಗಳ ದ್ವೈತವನ್ನು ನಿರಾಕರಿಸುತ್ತದೆ. ಪ್ರಜ್ಞೆಯ ಕ್ರಿಯೋದ್ದಿಷ್ಟ ವಸ್ತುವ್ಯವಸ್ಥೆಯೇ ಜಗತ್ತು-ಅದು 'ಪ್ರಮೇಯ', ಹಾಗೂ ಪ್ರಜ್ಞೆಯು ಕರ್ತೃತ್ವವನ್ನು ತಳೆಯುವ ಸ್ವರೂಪವೇ 'ವ್ಯಕ್ತಿ'. - ಅದು ಪ್ರಮಾತಾ. ಪರಸ್ಪರ ವಿರುದ್ಧ ದಿಕ್ಕಿನಲ್ಲಿರುವ ಇವೆರಡರ ಮಧ್ಯೆ ಘರ್ಷಣೆ, ಅಥವಾ ಒತ್ತಡ ಅನಿವಾರ್ಯ. ಸಾಮರಸ್ಯವನ್ನುಂಟುಮಾಡುವುದರ ಮೂಲಕ, ಈ ಘರ್ಷಣೆ ಮತ್ತು ಒತ್ತಡಗಳನ್ನು ನಿವಾರಿಸುವುದೇ ಮಂಡಲದ ಉದ್ದೇಶ ಮತ್ತು ಪ್ರಯೋಜನ.

ಸಂಪೂರ್ಣ ಆಯಾಮರಹಿತವಾಗಿರುವುದು ಮಂಡಲದ ಕೇಂದ್ರದ ವಿಶೇಷತೆ. 'ಬಿಂದು' ಎಂಬ ಸಂಸ್ಕೃತ ಶಬ್ದದ ಅರ್ಥ 'ಬೀಜ', 'ಜೀವಾಣು' ಅಥವಾ 'ಹನಿ' ಎಂದಾಗುತ್ತದೆ. ಅದು ಕೇಂದ್ರಿತ (ಏಕತ್ರ) ಗೊಳಿಸುವುದಷ್ಟೇ ಅಲ್ಲ, ಅದೊಂದು ಕ್ರಿಯಾಶೀಲ 'ಪ್ರಾರಂಭ-ಬಿಂದು'ವಾಗುವುದು. ಮತ್ತು ಆಂತರಿಕ ಶಕ್ತಿಗಳನ್ನು ವಿಕಸಿಸಲಾರಂಭಿಸುತ್ತದೆ. ಬಾಹ್ಯಾಕಾಶ ಮತ್ತು ಅಂತರಾಕಾಶಗಳು ಸಂಯೋಗವಾಗಿ, ವಿಶ್ರಮಿಸುವ ಸ್ಥಾನವೂ ಇದೇ.

ಹೀಗೆ, 'ಮಂಡಲ'ವು ಒಂದು ಚೈತ್ತಿಕ-ವೈಶ್ವಿಕ-ಆಕೃತಿ; ವ್ಯಕ್ತ ವಿಶ್ವ ಮತ್ತು ಅದನ್ನು ಗ್ರಹಿಸುವ 'ವ್ಯಕ್ತಿ' - ಇವೆರಡರ ಒಂದು ಸಂಕೀರ್ಣ 'ನಕ್ಷೆ'. ಸಂಪೂರ್ಣ ವಿಶ್ವವು ಶಕ್ತಿಗಳ ಪ್ರಕಾರಗಳಾಗಿ ಒಕ್ಕಣಿಸಲ್ಪಟ್ಟು, ಮಂಡಲದ ವಿಸ್ತಾರದಲ್ಲಿ ಸಾಂಕೇತಿಕವಾಗಿ ನಿರೂಪಿಸಲ್ಪಟ್ಟಿದೆ. 'ವ್ಯಕ್ತಿ'ಯನ್ನು ಅದೇ ಮಂಡಲದ ಕ್ರಮ ಮತ್ತು ಪರಿಭಾಷೆಯಲ್ಲಿ ನ್ಯಾಸಗೊಳಿಸಿಕೊಳ್ಳುವುದರಿಂದ, ಮಂಡಲವು, ಕಲ್ಪಿಸಿಕೊಳ್ಳಲು, ಪರಿವರ್ತನಗೊಳ್ಳಲು, ಏಕಾಗ್ರತೆಯನ್ನು ಮಾಡಲು, ಹಾಗೂ ಏಕಾಕಾರಗೊಳ್ಳಲು ಒಂದು ಪ್ರಭಾವಶಾಲಿ ಮಾದರಿ ಯಾಗುತ್ತದೆ. ಈ ರೀತಿ ಪ್ರಸ್ತುತಪಡಿಸಲ್ಪಟ್ಟ 'ಮಾದರಿ'ಯಲ್ಲಿ ವ್ಯಕ್ತಿಯ ಪ್ರಜ್ಞೆಯು ಅಭಿವ್ಯಕ್ತಿಯನ್ನೂ, ವಿಸ್ತಾರವನ್ನೂ ಕಂಡುಕೊಳ್ಳುತ್ತದೆ.

ಮಂಡಲವು ವಸ್ತುತಃ ಅನೇಕ ರೇಖಾಕೃತಿಗಳ ಸಂಕೀರ್ಣ ನಮೂನೆಗಳುಳ್ಳದ್ದಾಗಿರುತ್ತದೆ; ಅವುಗಳಲ್ಲಿ ಪ್ರತಿಯೊಂದಕ್ಕೂ ವಿಶಿಷ್ಟ ಲಕ್ಷಣ ಮತ್ತು ಕಾರ್ಯೋದ್ದೇಶಗಳುಂಟು. ಊರ್ಧ್ವಮುಖಿಯಾದ ತ್ರಿಕೋಣ (ಪುರುಷ ಶಕ್ತಿ), ಅಧೋಮುಖಿ ತ್ರಿಕೋಣ (ಸ್ತ್ರೀ ಶಕ್ತಿ), ವರ್ತುಳ (ಪ್ರಜ್ಞೆಯ ಆವರ್ತನಶೀಲ ಕ್ರಿಯಾತ್ಮಕತೆ) ಸಮಭುಜ ಚತುರ್ಭುಜ (ಪಾಂಚಭೌತಿಕ ಜಗತ್ತು) ಮತ್ತು ದಳಯುಕ್ತವರ್ತುಳ (ಶಕ್ತಿಗಳ ಮತ್ತು ತತ್ವಗಳ ಉಗಮಸ್ಥಾನ) ಇತ್ಯಾದಿ ರೇಖಾಕೃತಿಗಳನ್ನು ಪರಂಪರೆಯಲ್ಲಿ ಸಾಮಾನ್ಯೀಕರಿಸಲಾಗಿದೆ.

ಪ್ರಜ್ಞೆಯ ವ್ಯವಹಾರಾನುಕೂಲಕ್ಕಾಗಿ, ಒಂದು ಆವರಣಯುಕ್ತ ಕ್ಷೇತ್ರದಲ್ಲಿ ವಿಶ್ವವನ್ನು ಪ್ರತಿನಿಧಿಸುವುದು, ಮಂಡಲರಚನೆಯ ಹಿಂದಿರುವ ತತ್ವ (ನಿಯಮ) ವಾಗಿದೆ. ಸಾಮಾನ್ಯವಾಗಿ ಆವರಣಗಳ ಸರಣಿಯೂ ಇರಬಹುದು, ಹೊರಕ್ಕೆ ಮತ್ತು ಒಳಕ್ಕೆ ಚಲಿಸುವುದಕ್ಕೆ ಅವು ಅನುಕೂಲಕರವಾದ ರೀತಿಯಲ್ಲಿರುತ್ತವೆ. ಮತ್ತು ಇಡೀ ಆಕೃತಿಯೇ ಒಂದು ಚತುರ್ಭುಜ ಅಥವಾ ವರ್ತುಳದ ಬಂಧವನ್ನು ಹೊಂದಿರಬಹುದು. (ಅಥವಾ, ಅಗ್ನಿಬಂಧ, 'ಮೇ-ರಿ', - ಎಂದು ಟಿಬೇಟಿನ

ಮಂಡಲದಲ್ಲಿರುವಂತೆ.) ಅದಕ್ಕೆ, ವಿಶಿಷ್ಟ ಮರ್ಮಬಿಂದುಗಳಿಗೆ ಸಮ್ಮುಖವಾಗಿ ದ್ವಾರಗಳು ಇರುವವು. ಇಡೀ ಮಂಡಲವು ಒಂದು 'ಪುರ', 'ಪ್ರಾಸಾದ' ಅಥವಾ 'ದ್ವೀಪ'ವೆಂಬಂತೆ ಪರಿಗಣಿಸಲಾಗುವುದು. ಅತ್ಯಂತ ಮಧ್ಯಬಿಂದುವು, ಆ 'ಪುರ'ವನ್ನಾಳುವ, ಪ್ರಾಸಾದದಲ್ಲಿ ಅಧಿಷ್ಠಿತವಾದ ಅಥವಾ 'ದ್ವೀಪ'ದಲ್ಲಿ ವಿಶ್ರಮಿಸುವ ಮಹಾಶಕ್ತಿಯ ಅಥವಾ ದೇವತೆಯ ನಿವಾಸಸ್ಥಾನವೆಂದು ತಿಳಿಯಲಾಗುತ್ತದೆ. ಮಂಡಲವು ಮನುಷ್ಯ ಶರೀರವನ್ನೇ ಪ್ರತಿನಿಧಿಸುವಂತೆ ಮಾಡಿದಾಗ, ಮಂಡಲದ ವಿವಿಧ ಭಾಗಗಳು ಶರೀರದ ವಿವಿಧ ಅಂಗಗಳಿಗೆ ಸಂವಾದಿಯಾಗಿ ಸಂಬಂಧಿತವಾದಂತೆ ಮಾಡಲಾಗುವುದು. ಮತ್ತು ಹಾಗೆ ಕಲ್ಪಿತವಾದ ಶರೀರಮಂಡಲಕ್ಕೆ ಅಂತರ್ಯದಲ್ಲಿರುವ ಆತ್ಮವೇ ಅಧಿಷ್ಠಾತೃ. ಅಂತರ್ಮುಖಿಯಾಗಿ ಮಾಡುವ ಕಲ್ಪನವು ಮಂಡಲಕ್ಕೆ ಅರ್ಥ ನೀಡುವಲ್ಲಿ ಸಹಾಯಕ.

ಹೆಚ್ಚಿನ ಸಂದರ್ಭಗಳಲ್ಲಿ ಮಂಡಲವು, ರತ್ನಮಯವಾದ (ರತ್ನಸಾನು), ಬಂಗಾರದ ಬೆಟ್ಟ ('ಹೇಮಾದ್ರಿ') 'ಮೇರು' ಪರ್ವತದ ಪ್ರತಿನಿಧಿಯಾಗಿದೆ. ಅದು ದೇವತೆಗಳ ಶೋಭಾಯಮಾನ ಆವಾಸಸ್ಥಾನ. ಅದು ಜಗತ್ತಿನಲ್ಲಿ ಅತ್ಯುನ್ನತವೂ, ಭೂಕೇಂದ್ರವೂ ಆಗಿದ್ದು, ತನ್ನ ಪ್ರಭೆಯಿಂದ ನಾಲ್ಕೂ ದಿಶೆಗಳನ್ನು ಬೆಳಗುತ್ತದೆ.[1] ವಾಸ್ತವವಾಗಿ, ನಮ್ಮ ದೇವಾಲಯಗಳ ಹಾಗೂ ಸ್ತೂಪಗಳ ವಾಸ್ತುರಚನೆಯು ಮೇರುಪರ್ವತದ ಪ್ರತೀಕರೂಪವೇ ಆಗಿದೆ. ತಾಂತ್ರಿಕ ಪರಂಪರೆಯು ಪರ್ವತ-ಸಂಸ್ಕೃತಿಯೊಂದಿಗೆ ಗಾಢವಾಗಿ ಸಂಬಂಧಿಸಿರುವುದು ಇಲ್ಲಿ ಸ್ಮರಣಾರ್ಹ. ಅಲ್ಲದೆ ಮಾತೃದೇವತೆಗೆ ಪರ್ವತವು ವಿಶೇಷ ಪವಿತ್ರಸ್ಥಾನ. ಏರಲು ಕಠಿಣವಾದ ಪರ್ವತಾಗ್ರಗಳು ಅವಳ ಕೋಟೆ (ದುರ್ಗ). ಮನುಷ್ಯ ಶರೀರವೂ ಒಂದು ಮೇರು. ಆತ್ಮದ ಆವಾಸಸ್ಥಾನವಾದ ಸಹಸ್ರದಲ ಕಮಲವೇ ಅದರ ಶಿಖರ. ಒಂದು ಕೋಟೆಯ ಕಲ್ಪನೆಗೆ ಅನುಗುಣವಾಗಿ ಮಂಡಲಕ್ಕೆ ಪ್ರಾಕಾರಗಳೂ, ದ್ವಾರಪಾಲರೂ,

ರಕ್ಷಣಾರೇಖೆಗಳೂ, ದಳ(ರಕ್ಷಣಾ ಸ್ಥಳಗಳು), ಕೋಣ, ತೋರಣ ಮತ್ತು ಅಂಗಣಗಳೂ ಇರಬಹುದು. 'ಮಂಡಲ'ವನ್ನು ಕುರಿತಾದ ಒಂದು ಮಲಯಾಳಿ ಗ್ರಂಥದಲ್ಲಿ 'ಮಂಡ' ಶಬ್ದಕ್ಕೆ 'ಪರಿವೃತವಾದದ್ದು' 'ರಕ್ಷಿತವಾದದ್ದು' ಮತ್ತು 'ಲ'ದ ಅರ್ಥವನ್ನು,'ಯಾವುದು ತನ್ನೊಳಗೆ ಧಾರಣೆ ಮಾಡುವುದೋ' ರಕ್ಷಿಸುವುದೋ, ಹಿಡಿದಿಟ್ಟುಕೊಂಡಿರುವುದೋ ಅದು, ಎಂದು ಅರ್ಥ ಮಾಡಲಾಗಿದೆ.[2]

ಮಂಡಲಕ್ಕೆ ಸಂಬಂಧಿಸಿದ ವಿಧ್ಯುಕ್ತ ಕರ್ಮಾಚರಣೆಯು ಮಂಡಲದ ಹೊರಗೂ, ಒಳಗೂ ಮತ್ತು ಸಾಧಕನ ಶರೀರದಲ್ಲಿಯೂ, ಕುಲದೇವತೆಗಳನ್ನು, ನಾಯಿಕೆಯರನ್ನು, ಹಾಗೂ ಯೋಗಿನಿಯರನ್ನು ಮತ್ತು ಮುದ್ರಾದೇವತೆಗಳನ್ನು ಸಮರ್ಪಕ ಸ್ಥಾನಗಳಲ್ಲಿ ಸಂಸ್ಥಿತಗೊಳಿಸುವುದನ್ನು ಒಳಗೊಂಡಿದೆ. ಅವರ ಸ್ಥಾನಗಳು ತಾಂತ್ರಿಕ ಆದೇಶಗಳಿಗೆ ಅನುಸಾರವಾಗಿ ಹಾಗೂ ಯಾವ ಉದ್ದೇಶಕ್ಕೆ ಬಳಸಲು ಮಂಡಲವನ್ನು ರಚಿಸಲಾಗಿದೆಯೋ ಅದರಿಂದ ನಿರ್ಧರಿತವಾಗಿರುತ್ತದೆ. ಪರಿವಾರ ದೇವತೆಗಳನ್ನು ಅವರವರ ಸ್ಥಾನದಲ್ಲಿ ಸ್ಥಾಪಿಸುವುದರೊಂದಿಗೆ ಕೆಲವೊಮ್ಮೆ ತತ್ಸಂಬಂಧಿ ವರ್ಣಾಕ್ಷರಗಳನ್ನು ಮಂಡಲದ ವಿವಿಧ ಭಾಗಗಳಲ್ಲಿ ಬರೆಯಲಾಗುತ್ತದೆ. ಸಂಸ್ಕೃತದ ವರ್ಣಮಾಲೆಯು ವಿಶ್ವದ ಶಾಬ್ದಿಕ ಸೂಕ್ಷ್ಮರೂಪ(ಸಾರ)ವೆಂದು ಪರಿಗಣಿಸಲಾಗಿದೆ, ಮತ್ತು ಮಂಡಲದಲ್ಲಿ ಸೇರಿಸಲ್ಪಟ್ಟಾಗ ಪ್ರತಿಯೊಂದು ಅಕ್ಷರವೂ ಒಂದು ಶಕ್ತಿಯಾಗಿ ಮಾರ್ಪಡುತ್ತದೆ.

ಬಿಂದು-ತ್ರಿಕೋಣ-ವಸುಕೋಣ-ದಶಾರ-ಯುಗ್ಮ
ಮನ್ವಸ್ರ-ನಾಗದಲಸಂಯುತ-ಷೋಡಶಾರಮ್ ।
ವೃತ್ತ ತ್ರಯಂ ಚ ಧರಣೀ ಸದನತ್ರಯಂ ಚ
ಶ್ರೀಚಕ್ರಮೇತದುದಿತಂ ಪರದೇವತಾಯಾಃ ॥



ಶ್ರೀಚಕ್ರ

ಶ್ರೀಚಕ್ರವು, ದೇವೀ, ತ್ರಿಪುರಸುಂದರೀ, ಲಲಿತಾ, ರಾಜರಾಜೇಶ್ವರೀ, ಮತ್ತು ಪರಾಭಟ್ಟಾರಿಕಾ ಎಂದು ವಿಧವಿಧವಾಗಿ ಕರೆಯಲಾದ ಶ್ರೀಮಾತೆಯ ಶರೀರವೆಂದು ಪರಿಗಣಿಸಲಾಗಿದೆ. ಈ ಯಂತ್ರವು ಸಕಲ ಪರಿವಾರ ದೇವತೆಗಳು, ಸಹಚರ ಯೋಗಿಯರು, ಪಾಲಕ ದೇವತೆಗಳು ಹಾಗೂ, ಪ್ರಾಕಾರ, ಆವರಣಗಳು, ದ್ವಾರಗಳು ಇವುಗಳನೆಲ್ಲ ಒಳಗೊಂಡ, ದೇವಿಯ ಆಸ್ಥಾನವನ್ನೂ ಪ್ರತಿನಿಧಿಸುತ್ತದೆ. ಮುಖ್ಯ ಅಧಿಷ್ಠಾತೃ ದೇವತೆಯಾದ ಶ್ರೀಮಾತೆಯು ಕೇಂದ್ರದಲ್ಲಿರುವ 'ಬಿಂದು'ವಿನಲ್ಲಿ 'ಮಂಚ'ದ ಮೇಲೆ ಆಸೀನಳಾಗಿರುವಳೆಂದು ಕಲ್ಪಿಸಲಾಗಿದೆ. ಆ ಮಂಚಕ್ಕೆ, ಈಶಾನ್ಯದಲ್ಲಿ ಸೃಷ್ಟಿಕರ್ತನಾದ ಬ್ರಹ್ಮನೂ, ಆಗ್ನೇಯದಲ್ಲಿ ಸ್ಥಿತಿಕರ್ತನಾದ ವಿಷ್ಣುವೂ, ನೈಋತ್ಯದಲ್ಲಿ ಲಯಕರ್ತನಾದ ರುದ್ರನೂ ಹಾಗೂ ವಾಯವ್ಯದಲ್ಲಿ 'ಈಶಾನ'ನೂ ಕಾಲುಗಳು. ಸಂಹೃತವಾದ ವಿಶ್ವವನ್ನು ತನ್ನೊಳಗೆ ಸ್ವೀಕರಿಸಿ, ಧಾರಣೆಮಾಡಿ ಹಿಡಿದಿಟ್ಟುಕೊಳ್ಳುವ ತತ್ವವೇ ಅದರ ಹಲಗೆ. ಅದು 'ಸದಾಶಿವ' ಎಂದು ಸಂಕೇತಿಸಲಾದ, ದೇವಿಯ

'ಅನುಗ್ರಹ'ವನ್ನೂ ಸೂಚಿಸುತ್ತದೆ. ಈ ಐದು ತತ್ವಗಳು ಶ್ರೀಮಾತೆಯ ಐದು ಕ್ರಿಯಾಶಕ್ತಿಗಳೆಂದು ವರ್ಣಿಸಲಾಗಿದೆ.[3] ಅವು ಅವಳ ಐದು ರೀತಿಯ ಅಭಿವ್ಯಕ್ತಿಗಳು. ಈ ಐದು 'ಪಂಚಪ್ರೇತ'ಗಳೆಂದು ಕರೆಯಲಾದ ಐದು ಜಡ ಆಯಾಮಗಳೆಂತಲೂ ಮತ್ತು ದೇವಿಯು ಅವುಗಳಮೇಲೆ ಆಸೀನಳಾಗುವುದರಿಂದ ಅವು ಚೈತನ್ಯಯುಕ್ತವಾಗುವುವೆಂದೂ, ಅವುಗಳಲ್ಲಿ ನಾಲ್ಕು ಮಂಚದ ಕಾಲುಗಳಂತೆಯೂ ಹಾಗೂ ಇನ್ನೊಂದು ಅದರ ಹಲಗೆಯಂತೆಯೂ ಇವೆ ಎಂಬ ಇನ್ನೊಂದು ವಿವರಣೆಯೂ ಇದೆ. ಅವಳು ಚೈತನ್ಯದಾತ್ರೀ. ಅವಳಿಲ್ಲದೆ ಶಿವನೂ ಕೂಡ ಶವಸದೃಶನಾಗುತ್ತಾನೆ. ಅವಳ ಚೈತನ್ಯದಿಂದ ಉತ್-ಸ್ಫೂರ್ತನಾದಾಗ ಮಾತ್ರವೇ ಅವನು ಈ ವೈವಿಧ್ಯಮಯ ವಿಶ್ವವನ್ನು ಪ್ರಕಟಿಸಬಲ್ಲನು (ಹೊರತರಬಲ್ಲನು). ಅವಳೊಂದಿಗೆ ಸಂಯೋಗ ಹೊಂದಿ ಅವನು ಕಾಮೇಶ್ವರನೆನ್ನಿಸಿಕೊಳ್ಳುತ್ತಾನೆ, ಅರ್ಥಾತ್ ಕಾಮನೆಗಳ ಒಡೆಯನಾಗುತ್ತಾನೆ.

ಹೀಗೆ, 'ಬಿಂದು'ವು 'ಪುರುಷ' ಹಾಗೂ 'ಪ್ರಕೃತಿ'ಗಳ (ಆತ್ಯಂತಿಕ ಪುರುಷ ಹಾಗೂ ಸ್ತ್ರೀತತ್ವಗಳ) ಸಂಯೋಗವಾಗಿದೆ. ಮೊದಲನೆಯದು (ಪುರುಷ) ಶುದ್ಧಪ್ರಜ್ಞೆ ಅರ್ಥಾತ್ 'ಚಿದ್ರೂಪ' (ಶಿವ), ಹಾಗೂ ಎರಡನೆಯದು 'ಶಕ್ತಿ'. (ನಿಷ್ಕ್ರಿಯಾತ್ಮಕ 'ಪುರುಷತತ್ವ' ಹಾಗೂ ಕ್ರಿಯಾತ್ಮಕ 'ಸ್ತ್ರೀ' ತತ್ವ).[4] ಶೃಂಗವು ಮೇಲುಗಡೆಯುಳ್ಳ ತ್ರಿಕೋನವು ಪುರುಷನ ಸಂಕೇತ. (ಅಂದರೆ ಸಪಾಟಾಗಿ ಹಿಡಿದು ನೋಡಿದಾಗ ನಮ್ಮಿಂದ ದೂರವಿರುವುದು). ತ್ರಿಕೋನದ ಶೃಂಗವು ಅಧೋಮುಖವಿದ್ದಾಗ ಅದು 'ಸ್ತ್ರೀ'-ಸಂಕೇತ. ಮೊದಲನೆಯದು. 'ಶಿವಚಕ್ರ'ವೆಂದೂ, ಎರಡನೆಯದು 'ಶಕ್ತಿ ಚಕ್ರ'ವೆಂದೂ ತಿಳಿಯಲಾಗುತ್ತದೆ.

ಶ್ರೀಚಕ್ರವು ಒಂಭತ್ತು ತ್ರಿಕೋಣಗಳ ಸಂಮಿಶ್ರ ಚಿತ್ರಾಕೃತಿಯಾಗಿದೆ. ಅವುಗಳಲ್ಲಿ ನಾಲ್ಕು ತ್ರಿಕೋನಗಳು 'ಬ್ರಹ್ಮ', 'ರುದ್ರ', 'ಈಶ್ವರ', 'ಸದಾಶಿವ'ರೊಂದಿಗೆ ಏಕಾತ್ಮಕವೆನ್ನಲಾದ, ಪುರುಷತತ್ವ ಸಂಕೇತವುಳ್ಳವು ಹಾಗೂ ಐದು ತ್ರಿಕೋನಗಳು

ಶ್ರೀವಿದ್ಯಾ, ತ್ವರಿತಾ, ರಾಜರಾಜೇಶ್ವರಿ, ತ್ರಿಪುರಾ, ಮತ್ತು 'ಪಂಚಬಾಣೇಶಿ' ಯರೊಂದಿಗೆ ಏಕಾತ್ಮಕವೆನ್ನಲಾದ, ಸ್ತ್ರೀ ಸಂಕೇತ ವುಳ್ಳವು.[5] ಶ್ರೀಚಕ್ರವು, ಹೀಗೆ, 'ನವಯೋನ್ಯಾತ್ಮಕ ಚಕ್ರ' ಅರ್ಥಾತ್ ಒಂಭತ್ತು ರೀತಿಯ 'ಸಂಯೋಗ' ವನ್ನು ರಚಿಸುವ ಆಕೃತಿ. 'ಮೂರು' ಮತ್ತು 'ಒಂಭತ್ತು' - ಈಯೆರಡೂ ಸಂಖ್ಯೆಗಳು ಶ್ರೀಚಕ್ರದಲ್ಲಿ ಮಹತ್ವವುಳ್ಳವಾಗಿವೆ.[6] ತ್ರಿಕೋಣಕ್ಕೆ ಮೂರು ಮೂಲೆ (ಕೋನ) ಗಳು. ಆದ್ದರಿಂದ, ಅದು ಪ್ರತಿನಿಧಿಸುವ ದೇವತೆಗೆ 'ತ್ರಿಪುರಾ' ಎಂದು ಕರೆಯಲಾಗಿದೆ. (ಮೂರು ಕ್ಷೇತ್ರಗಳ ಅಧಿಷ್ಠಾತ್ರಿ). ಇದರ ಸಾಂಕೇತಿಕತೆಯು ಮುಂದೆ ವಿವರಿಸಲ್ಪಡುವುದು. ಆದರೆ, ಅವ್ಯಕ್ತ ಶಿವ-ಶಕ್ತಿ ಸಂಯೋಗವಾದ ಕೇಂದ್ರ 'ಬಿಂದು' ವಿನ ವಿಕಸನವೇ ಅಥವಾ ಪ್ರಕ್ಷೇಪವೇ 'ತ್ರಿಕೋಣ' ವಾಗಿದೆ ಎಂದು ಇಲ್ಲಿ ಹೇಳಬೇಕು. (ತಂತ್ರ-ಅಧ್ಯಾಯವನ್ನು ನೋಡಿರಿ). ಮತ್ತು, ಅಲ್ಲಿ 'ಶಿವ' ನನ್ನು ಪ್ರತಿನಿಧಿಸುವ ನಾಲ್ಕು ಮತ್ತು 'ಶಕ್ತಿ' ಯನ್ನು ಪ್ರತಿನಿಧಿಸುವ ಐದು, ಒಟ್ಟು ಒಂಭತ್ತು ತ್ರಿಕೋಣಗಳಿವೆ; ಅವು, ಅದೇ ಶಿವ-ಶಕ್ತಿ ಸಂಯೋಗವನ್ನು ಬೇರೆ ರೀತಿಯಲ್ಲಿ, ವ್ಯಕ್ತರೂಪದಲ್ಲಿ ತೋರಿಸುತ್ತವೆ. ಒಂದಕ್ಕೊಂದು ತಳಕಾದ ಒಂಭತ್ತು ತ್ರಿಕೋಣಗಳು ಒಟ್ಟು ನಲವತ್ತನಾಲ್ಕು ತ್ರಿಕೋಣಗಳನ್ನುಂಟುಮಾಡುತ್ತವೆ. ಸಾಮಾನ್ಯವಾಗಿ, 'ಬಿಂದು' ವನ್ನೂ ಒಂದು ತ್ರಿಕೋಣವೆಂದೇ ಗಣಿಸಲಾಗುತ್ತದೆ. ಕೆಲವೊಮ್ಮೆ ಅದನ್ನು, ವ್ಯಕ್ತರೂಪದಲ್ಲಿ ತ್ರಿಕೋಣವಲ್ಲವಾದ್ದರಿಂದ, ಬಿಟ್ಟು ಎಣಿಸಲಾಗುತ್ತದೆ. ಆಗ ಒಟ್ಟು ನಲವತ್ತಮೂರು ತ್ರಿಕೋಣಗಳಾಗುವುವು.

ಈ ನಲವತ್ಮೂರು ತ್ರಿಕೋಣಯುಕ್ತ (ಬಿಂದು ಸೇರಿ ನಲವತ್ತನಾಲ್ಕು) ಆಕೃತಿಯು ಶ್ರೀಚಕ್ರದ ಮುಖ್ಯ ವಿನ್ಯಾಸ. ಈ ಆಕೃತಿಯನ್ನು ಸುತ್ತುವರಿದು ಎರಡು ಏಕಕೇಂದ್ರೀಯ ವರ್ತುಲಗಳಿವೆ. ಅವುಗಳಿಗೆ ಕಮಲಗಳೆಂದೂ ಕರೆಯುತ್ತಾರೆ. ಒಳಗಿನ ವರ್ತುಲವು ಅಷ್ಟದಳಗಳುಳ್ಳದ್ದು, ಮತ್ತು ಹೊರಗಿನದು ಷೋಡಶದಳಗಳುಳ್ಳದ್ದು. ಇವುಗಳನ್ನು ಸುತ್ತುವರಿದು ಮೂರು ಏಕಕೇಂದ್ರವರ್ತುಲಗಳು ಇವೆ (ವಲಯ). ಇವನ್ನೂ ಸೇರಿದ

ಒಟ್ಟು ಆಕೃತಿಯನ್ನು 'ಭೂಪುರ'ವೆಂದು ಕರೆಯಲಾದ ಸಮಭುಜಚತುಷ್ಕೋಣದಲ್ಲಿ ಇರಿಸಲಾಗಿದೆ. ಅದು ಮೂರು ರೇಖೆಗಳುಳ್ಳ ಚತುರ್ಭುಜ, ಅವು ಆವರಣಗಳನ್ನು ಸಂಕೇತಿಸುವುವು. ಈ ಚತುರ್ಭುಜದ ನಾಲ್ಕೂ ದಿಕ್ಕಿನಲ್ಲಿ ದ್ವಾರಗಳುಂಟು.

ಹೀಗೆ, ಶ್ರೀಚಕ್ರದ ರಚನೆಯು ಒಂದಾದನಂತರ ಮತ್ತೊಂದರಂತೆ ಒಂಭತ್ತು ಆವರಣಗಳಲ್ಲಿ ವ್ಯವಸ್ಥೆಗೊಳಿಸಿದ ತ್ರಿಕೋಣಗಳಿಂದ ಉಂಟಾಗಿದೆ. ಒಳಗಿಂದ ಹೊರಕ್ಕೆ, ಒಂಭತ್ತು ಆವರಣಗಳು ಹೀಗೆ ಎಣಿಸಲ್ಪಡುತ್ತವೆ – 1) ಕೇಂದ್ರದಲ್ಲಿರುವ 'ಬಿಂದು', ಅದು 'ಶಿವಚಕ್ರ'ವೆಂದು ಹೇಳಲ್ಪಟ್ಟಿದೆ. 2) ಪ್ರಥಮ ತ್ರಿಕೋಣ 3) ಎಂಟುಮೂಲೆಗಳುಳ್ಳ, ಪ್ರಥಮ ತ್ರಿಕೋಣವನ್ನು ಸುತ್ತುವರಿದ ಎಂಟು ಚಿಕ್ಕ ತ್ರಿಕೋಣಗಳ ಆಕೃತಿ. ಅಷ್ಟಕೋಣ ಅಥವಾ 'ವಸು ಕೋಣ'. 4) ಹತ್ತು ಮೂಲೆಗಳನ್ನೂ, ಹತ್ತು ತ್ರಿಕೋಣಗಳನ್ನೂ ಹೊಂದಿ, ಅಷ್ಟಕೋಣವನ್ನು ಸುತ್ತುವರಿದಿರುವ ಆಕೃತಿ – 'ದಶಕೋಣ' ಅಥವಾ 'ದಶಾರ'. 5) ಹತ್ತು ಮೂಲೆಗಳೂ ಹಾಗೂ ಹತ್ತು ತ್ರಿಕೋಣಗಳೂ ಉಳ್ಳ ಮತ್ತೊಂದು ಆಕೃತಿ ಮೇಲಿನ 'ದಶಕೋಣ'ವನ್ನು ಸುತ್ತುವರಿದಿರುವುದು. ಇದಕ್ಕೆ 'ಬಹಿರ್ದಶಾರ'ವೆಂದೂ ಹೆಸರು. (ಇದು ಸುತ್ತುವರಿದಿರುವ ಮೇಲಿನ ದಶಾರಕ್ಕೆ 'ಅಂತರ್ದಶಾರ'ವೆಂದೂ ಕರೆಯುವರು.) 6) ಹದಿನಾಲ್ಕು ಮೂಲೆ ಹಾಗೂ ಹದಿನಾಲ್ಕು ತ್ರಿಕೋಣಗಳುಳ್ಳ ಆಕೃತಿ, ಅಥವಾ 'ಚತುರ್ದಶಾರ'ವಿದು. ಇದು ಮೇಲಿನ 'ಬಹಿರ್ದಶಾರ'ವನ್ನು ಸುತ್ತುವರಿದಿರುವುದು. (2) ರಿಂದ (6)ರವರೆಗಿನ ಐದು 'ಶಕ್ತಿಚಕ್ರ'ಗಳೆಂದು ಪರಿಗಣಿಸಲಾಗಿದೆ. 7) ಮೇಲೆ ಹೇಳಿದ ಶ್ರೀಚಕ್ರದ ಮುಖ್ಯಭಾಗವನ್ನು ಒಳಗೊಳ್ಳುವ ಎಂಟುದಳಗಳುಳ್ಳ ವರ್ತುಲ. ಇದು ಅಷ್ಟದಳ ಪದ್ಮವೆಂದು ಕರೆಯಲ್ಪಡುತ್ತದೆ. 8) ಮತ್ತೊಂದು, ಹದಿನಾರು ದಳಗಳುಳ್ಳ ವರ್ತುಳವು ಮೇಲಿನದೆಲ್ಲವನ್ನು ಸುತ್ತುವರಿದಿದೆ. ಇದು 'ಷೋಡಶದಲ ಕಮಲ ಅಥವಾ 'ಷೋಡಶ ಪತ್ರಕ'. ಮತ್ತು 9) 'ಚತುರಸ್ರ' ಅಥವಾ 'ಭೂಪುರ'ವೆಂಬ ಚತುರ್ಭುಜಾಕಾರದ ಕ್ಷೇತ್ರವು ಈ ಮೇಲಿನದೆಲ್ಲವನ್ನೂ ಒಳಗೊಂಡಿದೆ. ಈ ಮೂರೂ ಅಂದರೆ 7, 8, 9 ಮತ್ತು 'ಬಿಂದು' ಇವು ನಾಲ್ಕು ಪುರುಷ ಕ್ಷೇತ್ರ (ಶಿವಚಕ್ರಗಳು) ಎಂದು ಹೇಳಲ್ಪಡುತ್ತದೆ.

ಶ್ರೀಚಕ್ರದ ಮುಖ್ಯಾಕೃತಿಯಲ್ಲಿ ಸೇರಿಸಲ್ಪಡದಿದ್ದರೂ, ಅದರ ರಚನೆಯಲ್ಲಿರುವ ಏಕಕೇಂದ್ರ ವರ್ತುಳಗಗಳು 8ನೆಯದಾದ ಆವರಣವನ್ನು ಅಂದರೆ ಷೋಡಶಪತ್ರಕವನ್ನು ಸುತ್ತುವರಿದಿದ್ದು, ಅವು 'ತ್ರಿವಲಯ' ಅಥವಾ 'ತ್ರಿವೃತ್ತ'ವೆಂದು ಕರೆಯಲ್ಪಟ್ಟಿವೆ. ಅವು ತ್ರಿಲೋಕಗಳನ್ನು ಪ್ರತಿನಿಧಿಸುತ್ತವೆ. ಅಲ್ಲದೆ, 9ನೆಯ ಆವರಣವಾದ 'ಭೂಪುರ'ವನ್ನು ಮೂರು ರೇಖೆಗಳು ಸುತ್ತುವರಿದಿವೆ. (ತ್ರಿರೇಖಾ).

ಶ್ರೀಚಕ್ರದ ಮುಖ್ಯಭಾಗಗಳಲ್ಲಿ ನಾಲ್ಕು 'ಶಿವ'ನನ್ನೂ, ಐದು 'ಶಕ್ತಿ'ಯನ್ನು ಪ್ರತಿನಿಧಿಸುತ್ತವೆ[7] ಎಂಬುದು ಸಾಮಾನ್ಯವಾಗಿ ಇರುವ ಅಭಿಪ್ರಾಯ.[8] ಇನ್ನೊಂದು ಅಭಿಪ್ರಾಯವೂ ಇದೆ, ಅದೇನೆಂದರೆ, ಒಂಭತ್ತೂ ತ್ರಿಕೋಣಗಳೂ 'ಶಕ್ತಿಚಕ್ರ'ಗಳೇ. ಅವು ದೇವಿಯ ಆವಿರ್ಭಾವಗಳೇ ಆದ ಒಂಭತ್ತು ಸ್ತ್ರೀದೇವತೆಗಳನ್ನು ಪ್ರತಿನಿಧಿಸುತ್ತವೆ. 'ವಾಮಾ', ಜ್ಯೇಷ್ಠಾ, ರೌದ್ರಿ, 'ಅಂಬಿಕಾ', 'ಪರಾಶಕ್ತಿ' ಇವು ಸ್ತ್ರೀ-ತ್ರಿಕೋಣಗಳೆಂದು ಕರೆಯಲಾದವುಗಳಿಂದ ಪ್ರತಿನಿಧಿಸಲ್ಪಟ್ಟಿವೆ. 'ಇಚ್ಛಾ', 'ಜ್ಞಾನಾ', 'ಕ್ರಿಯಾ' ಮತ್ತು 'ಶಾಂತಾ' ಇವು ಪುರುಷ ತ್ರಿಕೋಣಗಳಿಂದ ಪ್ರತಿನಿಧಿಸಲ್ಪಟ್ಟಿವೆ.

ಒಂಭತ್ತು ತ್ರಿಕೋಣಗಳಿಂದ ರಚಿತವಾದ ಶ್ರೀಚಕ್ರದ ಮುಖ್ಯಭಾಗದಲ್ಲಿ ಸಹಜವಾಗಿಯೇ, ಕೋಣಗಳು ಆದ್ಯ ಪ್ರಾಮುಖ್ಯವುಳ್ಳವು. ಅವು ಶಿವ-ಶಕ್ತಿ ಸಂಯೋಗ ಬಿಂದುಗಳನ್ನು ಸೂಚಿಸುವುವು. ದೇವಿಯ 'ಆವಾಸಸ್ಥಾನ'ವನ್ನು ಸೂಚಿಸುವ, 'ಕಾಮಕಲಾ' ಎಂದು ಕರೆಯಲಾದ ಪ್ರಥಮ ತ್ರಿಕೋಣದಿಂದಾವೃತವಾದ ಕೇಂದ್ರ'ಬಿಂದು'ವಿನ ಅಷ್ಟೇ ಸಂಖ್ಯೆಯ ಪ್ರಕ್ಷೇಪಣಗಳೇ ಅವು. ಈ ಕೋಣಗಳಲ್ಲದೆ, ಮುಖ್ಯಾಕೃತಿಯಲ್ಲಿ ಇನ್ನೂ ಎರಡು ತೆರನಾದ, ಪವಿತ್ರವೆಂದು ಗಣಿಸಲಾದ ಬಿಂದುಗಳಿರುತ್ತವೆ : ಎರಡು ರೇಖೆಗಳು ಪರಸ್ಪರ ಛೇದಿಸುವ ಬಿಂದುಗಳು ಅರ್ಥಾತ್ 'ದ್ವಿರೇಖಾ-ಸಂಗಮ ಸ್ಥಾನಗಳು' ಮತ್ತು ಮೂರು ರೇಖೆಗಳು ಸಂಧಿಸುವ ಬಿಂದುಗಳು, 'ಮರ್ಮ ಸ್ಥಾನಗಳು'. ಅಥವಾ 'ತ್ರಿರೇಖಾ ಸಂಗಮಸ್ಥಾನಗಳು. ಒಟ್ಟಿನಲ್ಲಿ ಇಪ್ಪತ್ತನಾಲ್ಕು 'ಸಂಯೋಗ'-ಸ್ಥಾನಗಳೂ, 'ಇಪ್ಪತ್ತೆಂಟು' 'ಸಂಗಮಸ್ಥಾನ'ಗಳೂ ಇವೆ. ಆದರೆ ಅಂಥ

ಕೋಣಗಳು, ಸಂಯೋಗ ಸ್ಥಾನಗಳು ಹಾಗೂ 'ಸಂಗಮಸ್ಥಾನ'ಗಳಲ್ಲಿ ಯಾವುದೂ 'ತ್ರಿವೃತ್ತ'ದಿಂದಾವೃತವಾದ ಮುಖ್ಯಾಕೃತಿಯ ಹೊರಗಡೆ ಇರುವುದಿಲ್ಲ.

ಶಿವ-ಶಕ್ತಿ ಸಂಯೋಗದ ಮೂಲ ಆಶಯವನ್ನು, ಶ್ರೀಚಕ್ರದಲ್ಲಿ ಇನ್ನೂ ಹೆಚ್ಚು ವ್ಯಾಪಕರೀತಿಯಲ್ಲಿ ಆವಾಹಿಸಲು ಯತ್ನಿಸಲಾಗಿದೆ. ವಿವಿಧ ರೇಖಾಕೃತಿಗಳು ಜೋಡಿ-ಜೋಡಿಯಾಗಿಯೇ ಇವೆ: ಕೇಂದ್ರದಲ್ಲಿಯ 'ಬಿಂದು' ಹಾಗೂ ಪ್ರಥಮ ತ್ರಿಕೋಣ; ಎಂಟು ಮೂಲೆಗಳುಳ್ಳ ಆಕೃತಿ, ಅಷ್ಟಾರ ಹಾಗೂ ಹೊರಗಿನ ಅಷ್ಟದಲಪದ್ಮ; ಹತ್ತುಕೋಣಗಳುಳ್ಳ ಎರಡು ಆಕೃತಿಗಳು (ಅಂತರ್ದಶಾರ, ಬಹಿರ್ದಶಾರ); ಹಾಗೂ ಷೋಡಶದಳ ಪದ್ಮ, ಮತ್ತು 'ಭೂಪುರ'ದಿಂದ ಸುತ್ತುವರಿಯಲ್ಪಟ್ಟ ಚತುರ್ದಶಾರ.

ಶಿವ-ಶಕ್ತಿ ಸಂಯೋಗವೇ ಶ್ರೀಚಕ್ರದ ಕೇಂದ್ರೀಯಕಲ್ಪನೆ. ವಾಸ್ತವವಾಗಿ, ಶ್ರೀವಿದ್ಯಾ ತತ್ವದ ಅಡಿಗಲ್ಲೇ ಅದು. ಸಕಲ ಭಾರತೀಯ ತತ್ವಶಾಸ್ತ್ರದ ವಿಚಾರಧಾರೆಗೆ ಸಾಂಖ್ಯರಿಂದ ನೀಡಲ್ಪಟ್ಟ ವ್ಯವಸ್ಥಿತ ಚೌಕಟ್ಟಿಗನುಸಾರವಾಗಿ, ಅಸ್ತಿತ್ವ ಹಾಗೂ ಅನುಭವಗಳಿಗೆ ಮೌಲಿಕವಾದ ಇಪ್ಪತ್ತೈದು (ಚೈತ್ತಿಕ ಹಾಗೂ ಭೌತಿಕ) 'ತತ್ವ'ಗಳಿಂದ ವಿಶ್ವವನ್ನು ಗ್ರಹಿಸುವುದಾದರೆ, 'ಶಿವ-ಶಕ್ತಿ-ಸಂಯೋಗ'ವು ಇಪ್ಪತ್ತಾರನೆಯ 'ತತ್ವ'ವಾಗುತ್ತದೆ. ಅದು ಶ್ರೀಚಕ್ರದ ಸಂಪೂರ್ಣ ವಿನ್ಯಾಸವನ್ನು ವ್ಯಾಪಿಸಿದೆ; ಆದರೆ ಅದು ಒಂದು ತರದ 'ಅವ್ಯಕ್ತ' ರೀತಿಯಲ್ಲಿ.

ಒಂಭತ್ತು ಚಕ್ರಗಳು 'ಅವ್ಯಕ್ತ'ದಿಂದ ಆಗುವ ಆದಿಯ ವಿಶ್ವೋದ್ಭವ (ಸೃಷ್ಟಿ), ಮಧ್ಯಾಂತರದ ಅವಸ್ಥೆ, ಬೆಳೆವಣಿಗೆ, ಸಮತೋಲನ (ಸ್ಥಿತಿ), ಮತ್ತು ಅಂತಿಮ ಪ್ರಲಯ (ನಾಶವಲ್ಲ, ಹಿಂದೆಳೆದುಕೊಳ್ಳುವುದು, ಸಂ-ಹಾರ)ಗಳನ್ನು ಪ್ರತಿನಿಧಿಸುತ್ತವೆ. ಹೊರ ಪರಿಧಿಯಲ್ಲಿರುವ ಮೂರು ಚಕ್ರಗಳು ಅಂದರೆ 'ಭೂಪುರ'-ಚತುರಸ್ರ, ಷೋಡಶದಳಕಮಲ ಮತ್ತು ಅಷ್ಟದಳ ಕಮಲ, ಇವು ಒಟ್ಟುಗೂಡಿ ಸೃಷ್ಟಿ ಚಕ್ರವೆಂದು ತಿಳಿಯಲಾಗಿದೆ. ಮಧ್ಯಾಂತರದಲ್ಲಿರುವ ಎರಡು ಚಕ್ರಗಳು, ಅಂದರೆ ಚತುರ್ದಶಾರ, ಮತ್ತು ಎರಡು ದಶಾರಗಳು (ಅಂತರ್ದಶಾರ ಹಾಗೂ ಬಹಿರ್ದಶಾರ)

ಸ್ಥಿತಿಚಕ್ರಗಳೆಂದು ಪರಿಗಣಿಸಲಾಗಿದೆ. ಅಂತರ್ಭಾಗದ ಮೂರು ಚಕ್ರಗಳು, ಅಂದರೆ ಅಷ್ಟಕೋಣಾಕೃತಿ, ಪ್ರಥಮ ತ್ರಿಕೋಣ ಹಾಗೂ ಮಧ್ಯದ 'ಬಿಂದು' ಇವು ಸಂಹಾರ ಚಕ್ರವೆಂದೆನ್ನಲಾಗಿದೆ. ಮೊದಲಿನ ಕೇಂದ್ರದಲ್ಲಿ 'ಸೋಮ' (ಚಂದ್ರ) ಅಧಿಷ್ಠಾತೃ, ಎರಡನೆಯದರಲ್ಲಿ ಸೂರ್ಯನೂ, ಹಾಗೂ ಮೂರನೆಯದರಲ್ಲಿ ಅಗ್ನಿಯೂ ಅಧಿಷ್ಠಾತೃ. 'ತ್ರಿಪುರ'ದ ಅಂತರಾರ್ಥವನ್ನು ಶ್ರೀಚಕ್ರತಂತ್ರವೆಂಬ ಎರಡನೆಯ ಅಧ್ಯಾಯದಲ್ಲಿ ವಿವರಿಸಲಾಗುವುದು.

2. ಶ್ರೀಚಕ್ರದ ರಚನಾಕ್ರಮ

ನವಾವರಣಗಳನ್ನು ಎಣಿಸುವ ಎರಡು ರೀತಿಗಳಿವೆ : ಒಂದು, 'ಬಿಂದು'ವಿನಿಂದಾರಂಭಿಸಿ ಹೊರಗಡೆಗೆ ಹೋಗುತ್ತ ಇಡೀ ಆಕೃತಿಯನ್ನು ಸುತ್ತುವರಿದಿರುವ ಚತುರಸ್ರ ಅಂದರೆ 'ಭೂಪುರ'ದ ವರೆಗೆ ಹೋಗಿ ಕೊನೆಗೊಳ್ಳುವುದು, ಇನ್ನೊಂದು, ಅತ್ಯಂತ ಹೊರಗಡೆಗಿರುವ ಚತುರಸ್ರದಿಂದ ಆರಂಭಿಸಿ ಮಧ್ಯದ 'ಬಿಂದು'ವನ್ನು ತಲುಪುವುದು. ಈ ರೀತಿಗಳು ಶ್ರೀಚಕ್ರವನ್ನು ರಚಿಸುವ ಹಾಗೂ ಅರ್ಚಿಸುವ ಎರಡು ಪರಂಪರೆಗಳಿಗೆ ಅನುಸಾರವಾಗಿ ಇರುವುವು.

ಶ್ರೀಚಕ್ರವನ್ನು ರಚಿಸುವ 'ಕೌಲ' ಪದ್ಧತಿಯು 'ಲಯ' ಪದ್ಧತಿಯನ್ನು, ಅಂದರೆ 'ಸಂಹಾರಕ್ರಮ'ವನ್ನು ಅನುಸರಿಸುತ್ತದೆ. ಮತ್ತು ಇದನ್ನು, ಸೌಂದರ್ಯಲಹರಿಯ ಹನ್ನೊಂದನೆಯ ಶ್ಲೋಕಕ್ಕೆ ಲಕ್ಷ್ಮೀಧರನು ಬರೆದ ವ್ಯಾಖ್ಯಾನದಲ್ಲಿ ಉಲ್ಲೇಖಿಸಲಾಗಿದೆ :

1) ಒಂದು ವರ್ತುಲವನ್ನು ಮೊದಲು ರಚಿಸಿ, ಅದರಲ್ಲಿ ಒಂಭತ್ತು ಸಮಾಂತರ ರೇಖೆಗಳನ್ನು, ತಳದಿಂದ ಆರಂಭಿಸಿ ಮೇಲಕ್ಕೆ ಹೋಗುತ್ತ, ಎಳೆಯಲಾಗುವುದು; ಅವುಗಳಲ್ಲಿ ಮೂರು ಮಧ್ಯದಲ್ಲಿ ಇರುವ ರೇಖೆಗಳು ಕಿರಿದಾಗಿಯೂ, ಮತ್ತು ಇವುಗಳ ಪಕ್ಕದ ರೇಖೆಗಳು ವರ್ತುಳದ ಪರಿಘವನ್ನು ಮುಟ್ಟುವಂತೆಯೂ ಇರಬೇಕು. ಈ ಎರಡು ರೇಖೆಗಳಿಂದಾಚೆಗೆ ಇರುವ ಎರಡೆರಡು ರೇಖೆಗಳು ಉದ್ದದಲ್ಲಿ

ಕಡಿಮೆಯಾಗುತ್ತ ಹೋಗುವಂಥವು. ಈ ಒಂಭತ್ತು ರೇಖೆಗಳು ಶ್ರೀಚಕ್ರದ ಒಂಭತ್ತು ತ್ರಿಕೋಣಗಳ ತಳಭುಜಗಳಾಗಿ ಸಲ್ಲುವುವು. ಈ ರೇಖೆಗಳು ನವಗ್ರಹಗಳಾದ ರವಿ, ಚಂದ್ರ, ಅಂಗಾರಕ, ಬುಧ, ಬೃಹಸ್ಪತಿ, ಶುಕ್ರ, ಶನಿ, ರಾಹು ಮತ್ತು ಕೇತುಗಳನ್ನು ಪ್ರತಿನಿಧಿಸುವುವು. ಮೊದಲ ನಾಲ್ಕು ರೇಖೆಗಳು ಶಿವಾಂಶವನ್ನೂ, ಉಳಿದ ಐದು ಶಕ್ತ್ಯಂಶವನ್ನೂ ಪ್ರತಿನಿಧಿಸುತ್ತವೆ. (ಚಿತ್ರ 2)



(ಚಿತ್ರ 2)

2) ತದನಂತರದಲ್ಲಿ, ಅತ್ಯಂತ ಮೇಲುಗಡೆ ಇರುವ ರೇಖೆಯ ಎರಡೂ ತುದಿಗಳಿಂದ, ಅಲ್ಲಿಂದ ಕೆಳಗಡೆಯ ಆರನೇ ರೇಖೆಯ ಮಧ್ಯಬಿಂದುವಿಗೆ ರೇಖೆಗಳನ್ನೆಳೆದು, ಶೃಂಗವು ಅಧೋಮುಖವಾಗಿರುವಂತೆ ತ್ರಿಕೋಣವನ್ನು ರಚಿಸಬೇಕು. ಹಾಗೂ, ಅತ್ಯಂತ ಬುಡದ ರೇಖೆಯ ತುದಿಯ ಬಿಂದುಗಳಿಂದ, ಅಲ್ಲಿಂದ ಮೇಲುಗಡೆಯ ಏಳನೇ ರೇಖೆಯ ಮಧ್ಯ ಬಿಂದುವಿಗೆ ಜೋಡಿಸಿ, ಶೃಂಗವು ಊರ್ಧ್ವಮುಖವಾಗಿರುವ ತ್ರಿಕೋಣವನ್ನು ರಚಿಸಬೇಕು. ಈ ಎರಡೂ ತ್ರಿಕೋಣಗಳು ಒಂದನ್ನೊಂದು ಭೇದಿಸುತ್ತವೆ. ಈ ಪ್ರಕ್ರಿಯೆಯಲ್ಲಿ ಶ್ರೀಚಕ್ರದ ಆದ್ಯತ್ರಿಕೋಣವು

(ತಾನಾಗಿಯೇ) ನಿರ್ಮಿತವಾಗುತ್ತದೆ. ಆದರಲ್ಲಿ ಕೇಂದ್ರದ 'ಬಿಂದು'ವನ್ನು ಸೇರಿಸಲಾಗುವುದು. (ಚಿತ್ರ 3)



(ಚಿತ್ರ 3)

3) ಆಮೇಲೆ, ಮೇಲಿನಿಂದ ಎರಡನೆಯ ರೇಖೆಯ ತುದಿಯ ಬಿಂದುಗಳಿಂದ, ಅದರಿಂದ ಕೆಳಕ್ಕೆ ಎಂಟನೆಯ (ಅಂದರೆ ಅತ್ಯಂತ ಬುಡದ)ರೇಖೆಯ ಮಧ್ಯಬಿಂದುವಿಗೆ ರೇಖೆಗಳನ್ನೆಳೆದು ಜೋಡಿಸಬೇಕು. ನಂತರ, ಬುಡದಿಂದ ಎರಡನೆಯ ರೇಖೆಯ ತುದಿಯ ಬಿಂದುಗಳಿಂದ, ಅತ್ಯಂತ ಮೇಲುಗಡೆಯಿರುವ ರೇಖೆಯ ಮಧ್ಯಬಿಂದುವಿಗೆ ಜೋಡಿಸಬೇಕು. ಹೀಗೆ, ಪರಸ್ಪರ ಛೇದಿಸುವ ತ್ರಿಕೋಣಗಳ ಇನ್ನೊಂದು ಜೋಡಿಯು ಸಿದ್ಧವಾಗುವುದು. (ಚಿತ್ರ 4)



(ಚಿತ್ರ 4)

4) ಈಗ, ವರ್ತುಳದ ಪರಿಧಿಯನ್ನು ಸ್ಪರ್ಶಿಸುವ ಎರಡು ಉದ್ದರೇಖೆಗಳನ್ನು ತೆಗೆದುಕೊಂಡು, ಅವುಗಳ ತುದಿಯ ಬಿಂದುಗಳಿಂದ ರೇಖೆಗಳನ್ನೆಳೆದು, ಶೃಂಗಾಗ್ರವು ಎದುರುಗಡೆಯ ಪರಿಧಿಯ ಮಧ್ಯಬಿಂದುವಿನಲ್ಲಿ ಬರುವಂತೆ ತ್ರಿಕೋಣಗಳನ್ನು ರಚಿಸಬೇಕು. ಈ ಎರಡೂ ಪರಸ್ಪರ ಛೇದಿಸುವ ತ್ರಿಕೋಣಗಳು ಒಂದು ಷಟ್ಕೋಣವನ್ನು ಉಂಟುಮಾಡುತ್ತವೆ. (ಚಿತ್ರ 5)



(ಚಿತ್ರ 5)

5) ಮಧ್ಯಭಾಗದಲ್ಲಿರುವ ಮೂರು ರೇಖೆಗಳಲ್ಲಿ ಉದ್ದವಿರುವ ಎರಡು ರೇಖೆಗಳನ್ನೆತ್ತಿಕೊಂಡು (ಅಂದರೆ, ಅತ್ಯಂತ ಮಧ್ಯದ ಚಿಕ್ಕ ರೇಖೆಯನ್ನು ಬಿಟ್ಟು), ಅವುಗಳಲ್ಲಿ, ಮೇಲಿನದಾದ ರೇಖೆಯ ತುದಿಯ ಬಿಂದುಗಳಿಂದ, ಆ ರೇಖೆಯಿಂದ ಎಣಿಸಿ ಕೆಳಗಿನ ಐದನೆಯ ರೇಖೆಯ ಮಧ್ಯಬಿಂದುವಿಗೆ ಜೋಡಿಸಬೇಕು, ಹಾಗೂ,



(ಚಿತ್ರ 6)

ಮತ್ತೊಂದು ರೇಖೆಯ ತುದಿಯ ಬಿಂದುಗಳಿಂದ, ಆ ರೇಖೆಯಿಂದೆಣಿಸಿ ಮೇಲಿನ ಐದನೆಯ ರೇಖೆಯ ಮಧ್ಯಬಿಂದುವಿಗೆ ರೇಖೆಗಳನ್ನೆಳೆಯಬೇಕು. ಈ ರೀತಿಯಲ್ಲಿ, ಪರಸ್ಪರ ಭೇದಿಸುವ ಇನ್ನೆರಡು ತ್ರಿಕೋಣಗಳು ಸಿಗುತ್ತವೆ. (ಚಿತ್ರ 6)

6) ಈಗ ಅತ್ಯಂತ ಚಿಕ್ಕದಾದ, ಮಧ್ಯದಲ್ಲಿರುವ ರೇಖೆಯ ತುದಿಯ ಬಿಂದುಗಳಿಂದ, ಆ ರೇಖೆಯಿಂದ ಕೆಳಗಡೆಗೆ ಮೂರನೆಯ ರೇಖೆಯ (ಅದು ತಳದಿಂದ ಎಣಿಸಿದರೂ ಮೂರನೆಯದೇ.)ಮಧ್ಯಬಿಂದುವಿಗೆ ಸೇರಿಸಬೇಕು. (ಚಿತ್ರ 7)

(ಚಿತ್ರ 7)

ಶ್ರೀಚಕ್ರವನ್ನು ರಚಿಸುವ 'ಸಮಯಾಚಾರ' ಪದ್ಧತಿಯು ಸೃಷ್ಟ್ಯುದ್ಭವದ ರೀತಿಯನ್ನು ಅನುಸರಿಸುತ್ತದೆ. ಇದನ್ನು 'ಜ್ಞಾನಾರ್ಣವ ತಂತ್ರ'ದಲ್ಲಿ ವಿವರಿಸಲಾಗಿದೆ. (ಅದನ್ನೇ 'ಶ್ರೀವಿದ್ಯಾರ್ಣವ ತಂತ್ರ'ದಲ್ಲಿಯೂ ಹೇಳಲಾಗಿದೆ - 1, 8, 10-33). 'ಬಿಂದು'ವನ್ನು ಒಳಗೊಳ್ಳುವ ತ್ರಿಕೋಣ ರಚನೆಯಿಂದ ಇದು ಆರಂಭವಾಗುತ್ತದೆ. ತ್ರಿಕೋಣದ ಶಿಖರವು ಮೇಲುಗಡೆ ಇರಬೇಕು(ಸಾಧಕನಿಂದ ದೂರ, ಪಶ್ಚಿಮಕ್ಕೆ). ಬಿಂದುವಿನ ಮೇಲುಗಡೆಗೆ, ಈ ತ್ರಿಕೋಣವನ್ನು ಭೇದಿಸುವ ಹಾಗೆ ಶಿಖರವು ಕೆಳಮುಖವಾಗಿರುವಂತೆ (ಸಾಧಕನ ಕಡೆಗೆ) ಮತ್ತೊಂದು ತ್ರಿಕೋಣವನ್ನು ರಚಿಸಬೇಕು. ಮೊದಲನೆಯ ತ್ರಿಕೋಣದ ಶಿಖರ ಬಿಂದುವಿನ ಮೂಲಕ ಹಾಯುವ ತಲರೇಖೆಯನ್ನು

ರಚಿಸಿ, ಶಿಖರವು ಮೇಲ್ಮುಖವಾಗುವಂತೆ ಇನ್ನೊಂದು ತ್ರಿಕೋಣವನ್ನು ರಚಿಸಬೇಕು. ಈ ರೀತಿ ರಚಿತವಾದ ಆಕೃತಿಯು ಅಷ್ಟಕೋಣವಾಗುತ್ತದೆ. ಇದನ್ನು ಆಧಾರವಾಗಿಟ್ಟು, ಹತ್ತು ಒಳಗಿನ ತ್ರಿಕೋಣಗಳನ್ನುಳ್ಳ 'ಅಂತರ್ದಶಾರ'ವನ್ನೂ, ಹತ್ತು ತ್ರಿಕೋಣಗಳನ್ನುಳ್ಳ 'ಬಹಿರ್ದಶಾರ'ವನ್ನೂ ರಚಿಸಲಾಗುತ್ತದೆ. ಮತ್ತು ನಂತರ, 'ಚತುರ್ದಶಾರ'ವನ್ನೂ ರಚಿಸಲಾಗುತ್ತದೆ. ರೇಖೆಗಳ ವಿಸ್ತರಣವನ್ನು ಒಂದಾದ ಮೇಲೊಂದರಂತೆ ಮಾಡುವುದೇ ಈ ಪದ್ಧತಿಯಲ್ಲಿ ಅನುಸರಿಸುವ ಮುಖ್ಯ ರೀತಿ; ಮತ್ತು ಇದರ ಹಿಂದಿರುವ ನಿಯಮವೇನೆಂದರೆ, ತ್ರಿಕೋಣಗಳ ಸಂಖ್ಯೆಯು, ಒಂದರಿಂದ ಮೂರು, ಮೂರರಿಂದ ಎಂಟು, ಎಂಟರಿಂದ ಹತ್ತು ಹೀಗೆ ಹೆಚ್ಚುತ್ತ ಹೋಗುವುದು. ಮತ್ತು ರೇಖೆಗಳು ಒಂದಕ್ಕೊಂದು ಛೇದಿಸಿ ಉಂಟಾಗುವ 'ಸಂಧಿಸ್ಥಾನ' ಮತ್ತು 'ಮರ್ಮಸ್ಥಾನ'ಗಳನ್ನು ಗುರುತಿಸಿ, ಅದರಮೂಲಕ, ಬಹಿರ್ದಶಾರದ ಆಧಾರದಮೇಲೆ ಹದಿನಾಲ್ಕು ತ್ರಿಕೋಣವನ್ನು (ಚತುರ್ದಶಾರವನ್ನು) ರಚಿಸುವುದಾಗಿದೆ.

ಹೀಗೆ, ಒಟ್ಟು ಒಂಭತ್ತು ತ್ರಿಕೋನಗಳಿವೆ. ಅವುಗಳಲ್ಲಿ ನಾಲ್ಕು ಊರ್ಧ್ವಮುಖವಾಗಿ (ಸಾಧಕನಿಂದ ದೂರದತ್ತ) ಇದ್ದು 'ಶಿವ' ಹಾಗೂ 'ಅಗ್ನಿ'ಕ್ಷೇತ್ರಗಳನ್ನು ಸೂಚಿಸುವಂಥವೂ ಮತ್ತು ಐದು ತ್ರಿಕೋಣಗಳು ಅಧೋಮುಖವಾಗಿದ್ದು ಶಕ್ತಿಕ್ಷೇತ್ರಗಳನ್ನು ಸೂಚಿಸುವಂಥವೂ ಇರುತ್ತವೆ. ಇವಲ್ಲದೆ, ನಲವತ್ತಮೂರು ಕೋಣಗಳೂ, ಇಪ್ಪತ್ತನಾಲ್ಕು 'ಸಂಧಿ'ಗಳೂ, ಮತ್ತು ಇಪ್ಪತ್ತನಾಲ್ಕು (ಅಥವಾ, ಲಕ್ಷ್ಮೀಧರನ ಪ್ರಕಾರ ಇಪ್ಪತ್ತೆಂಟು) ಮರ್ಮಸ್ಥಾನಗಳೂ (ಮೂರು ರೇಖೆಗಳು ಸಂಧಿಸುವ ಸ್ಥಾನ), ಇರುತ್ತವೆ.

ಈಯೆರಡೂ ಪದ್ಧತಿಗಳಲ್ಲಿರುವ ಭೇದವು, ಪ್ರಥಮತ್ರಿಕೋಣ ಮತ್ತು 'ಬಿಂದು'ಗಳನ್ನು ಇಡುವ ರೀತಿಯಲ್ಲಿದೆ. 'ಕೌಲ'ಪದ್ಧತಿಯಲ್ಲಿ ಪ್ರಥಮ ತ್ರಿಕೋಣವು ಅಧೋಮುಖವಾಗಿ, ಅಂದರೆ ಶಕ್ತಿಕ್ಷೇತ್ರವನ್ನು ಸೂಚಿಸುವ ರೀತಿಯಲ್ಲಿರುತ್ತದೆ, ಮತ್ತು 'ಬಿಂದು'ವು ಅತ್ಯಂತ ಮಧ್ಯದಲ್ಲಿರುತ್ತದೆ. 'ಸಮಯಾಚಾರ' ಪದ್ಧತಿಯಲ್ಲಿ ಪ್ರಥಮ

ತ್ರಿಕೋಣವು ಊರ್ಧ್ವಮುಖವಾಗಿ, ಶಿವ ಮತ್ತು ಅಗ್ನಿ ಕ್ಷೇತ್ರಗಳನ್ನುಂಟುಮಾಡುವ ರೀತಿಯಲ್ಲಿರುತ್ತದೆ. ಮತ್ತು ಬಿಂದುವು ಪ್ರಥಮತ್ರಿಕೋಣವನ್ನೊಳಗೊಂಡ ಷಟ್ಕೋನಾಕೃತಿಯಿಂದಾವೃತವಾದ ಪ್ರದೇಶದ ಅತ್ಯಂತ ಮಧ್ಯದಲ್ಲಿರುತ್ತದೆ. 'ಕೌಲ' ಪದ್ಧತಿಯು ಕೋಣಗಳ ಸಂಖ್ಯೆಯನ್ನು ಕಡೆಗಣಿಸುತ್ತದೆ, ಮತ್ತು ಒಂಭತ್ತು ತ್ರಿಕೋಣಗಳಿಂದುಂಟಾಗುವ, (ಮೂರು ರೇಖೆಗಳು ಕೂಡುವಂಥ) 'ಮರ್ಮಸ್ಥಾನ'ಗಳನ್ನು ಹೆಚ್ಚು ಮುಖ್ಯವೆಂದು ಪರಿಗಣಿಸುತ್ತದೆ.

ಈ ಪ್ರಧಾನ ಭಾಗವನ್ನು ಸುತ್ತುವರಿದಿರುವ 'ಅಷ್ಟದಳಪದ್ಮ' ಮತ್ತು 'ಷೋಡಶದಳ ಪದ್ಮ' ಹಾಗೂ, ಇವೆಲ್ಲನ್ನೂ ಒಳಗೊಳ್ಳುವ ಮೂರು ರೇಖೆಗಳನ್ನು ಎಲ್ಲ ದಿಕ್ಕುಗಳಲ್ಲಿಯೂ ರಚಿಸುವುದು, ಇವನ್ನು ಕೊನೆಯಲ್ಲಿ ಮಾಡಲಾಗುತ್ತದೆ. ಇದು ಎರಡೂ ಪದ್ಧತಿಗಳಲ್ಲಿ ಸಮಾನವಾಗಿದೆ. ವಾಸ್ತವದಲ್ಲಿ, ಈ ವಿವರಗಳು ಅಮುಖ್ಯವೆಂದು ಗಣಿಸಲಾಗಿದೆಯಲ್ಲದೆ, ಕೆಲವು ಸಂಪ್ರದಾಯಗಳಲ್ಲಿ (ಉದಾ: ಹಯಗ್ರೀವ ಸಂಪ್ರದಾಯ) ಪೂರ್ತಿಯಾಗಿ ಬಿಟ್ಟುಬಿಡಲಾಗಿದೆ. ಇನ್ನು ಕೆಲವು ಬೇರೆ ಸಂಪ್ರದಾಯಗಳಲ್ಲಿ ಇವುಗಳನ್ನು ಆಲಂಕಾರಿಕ ವಿವರಗಳೆಂಬಂತೆ ರಚಿಸುತ್ತಾರೆ. ಆದರೆ, ಅರ್ಚನಾ ವಿಧಿಯಲ್ಲಿ ಇವು ಸೇರಿರುವುದಿಲ್ಲ (ಉದಾ: ಆನಂದಭೈರವ ಸಂಪ್ರದಾಯ). 'ದಕ್ಷಿಣಾಮೂರ್ತಿ' ಸಂಪ್ರದಾಯದಲ್ಲಿ ಮಾತ್ರ ಈ ಬಹಿಃಪರಿಧಿಯ ವಿವರಗಳನ್ನು ಒಳಗಿನ 'ನವತ್ರಿಕೋಣಾಕೃತಿ'ಯಷ್ಟೇ ಮಹತ್ವದ್ದೆಂದು ಪರಿಗಣಿಸಲಾಗಿದೆ.

ಶ್ರೀಚಕ್ರಕ್ಕೆ ಸಂಬಂಧಪಟ್ಟ ಎರಡು ವಿಧದ 'ಯಂತ್ರ'ಗಳಿವೆ. ಮೊದಲನೆಯದು ಸಾಮಾನ್ಯವಾಗಿ ಕಾಣಸಿಗುವ ರೇಖಾಕೃತಿಯ ಯಂತ್ರ. ಶ್ರೀಗಂಧ, ಅರಿಷಿಣ, ಕುಂಕುಮ, ಗೋರೋಚನ ಅಥವಾ ಬಣ್ಣದ ಸ್ಯಾಯಿಯಿಂದ ವಿಶೇಷವಾಗಿ ತಯಾರಿಸಿದ ನೆಲದಮೇಲೆ, ಅಥವಾ ಮರದ ಮಣೆಯಮೇಲೆ, ಅಥವಾ ಸಮತಟ್ಟಾಗಿಮಾಡಿದ ಸ್ವೀಕಾರಾರ್ಹವಾದ ಮರದ ತೊಗಟೆಯ ಮೇಲೆ, ಭೂರ್ಜಪತ್ರದಮೇಲೆ ಅಥವಾ ಕಾಗದದ ಮೇಲೆ ಒಂದು ಲೇಖಣಿಯಿಂದ

ಬರೆಯಲಾಗುತ್ತದೆ. ಪರ್ಯಾಯವಾಗಿ, ಅನುಕೂಲಕ್ಕೆ ತಕ್ಕಂತೆ, ಬಂಗಾರದ, ಬೆಳ್ಳಿಯ ಅಥವಾ ತಾಮ್ರದ ಫಲಕದ ಮೇಲೆ ಕೊರೆದು ರಚಿಸಬಹುದು. ಯಂತ್ರದ ಸಾಮರ್ಥ್ಯವು, ಬಂಗಾರದ್ದಿದ್ದರೆ ಅದಿರುವ ಕಾಲದ ತನಕವೆಂದೂ, ಬೆಳ್ಳಿಯದು ಮೂವತ್ತೆರಡು ವರ್ಷಗಳೆಂದೂ, ಮತ್ತು ತಾಮ್ರದ್ದು ಹನ್ನೆರಡು ವರ್ಷಗಳೆಂದೂ ('ರತ್ನಸಾಗರ'ದಲ್ಲಿ) ಹೇಳಲಾಗಿದೆ. ಬಂಗಾರದ ಯಂತ್ರವು ಐಹಿಕ ಪ್ರತಿಷ್ಠೆಯನ್ನು ಹೆಚ್ಚಿಸುವುದೆಂದೂ, ಬೆಳ್ಳಿಯಯಂತ್ರವು ಆರೋಗ್ಯ ಹಾಗೂ ದೀರ್ಘಾಯುಷ್ಯವೃದ್ಧಿಗೆಂದೂ, ತಾಮ್ರಯಂತ್ರವು ಸಂಪದಭಿವೃದ್ಧಿಗೆಂತಲೂ ಹಾಗೂ ಈ ಮೂರೂ ಧಾತುಗಳ ಮಿಶ್ರಣದಿಂದ ಮಾಡಿದ ಯಂತ್ರವು ಸರ್ವಸಿದ್ಧಿಗೋಸ್ಕರವೆಂದೂ ಹೇಳಲಾಗಿದೆ. ಕಬ್ಬಿಣ, ಸೀಸ, ಝಿಂಕ್ ಇತ್ಯಾದಿಗಳು ಯಂತ್ರರಚಿಸಲು ತಕ್ಕವುಗಳಲ್ಲ. ಯಂತ್ರವನ್ನು ರಚಿಸಲು (ಕೊರೆಯಲು) ರತ್ನಸ್ಫಟಿಕಗಳು ಶ್ರೇಷ್ಠವೆಂದು ಸೂಚಿಸಲಾಗಿದೆ. ಆದರೆ, ಏನೇ ಇದ್ದರೂ, ಗೋಡೆ, ಪರದೆ ಅಥವಾ ಕಂಬಗಳ ಮೇಲೆ ಯಂತ್ರವನ್ನು ಬರೆಯಕೂಡದು. ಅಥವಾ ತೂಗುಹಾಕಬಾರದು. ಯಂತ್ರವನ್ನು ಭೂಸಮಾಂತವಾಗಿ ಇಟ್ಟೇ ಪೂಜೆ, ಅರ್ಚನೆಗಳನ್ನು ನಡೆಸಬೇಕು. ಮತ್ತು ಆಗ ಪ್ರಥಮ ತ್ರಿಕೋಣವು ಸಾಧಕನಿಗೆ ಸಂಮುಖವಾಗಿರಬೇಕು.

ಎರಡನೆಯ ಮಾದರಿಯು ಮೂರು ಆಯಾಮಗಳುಳ್ಳದ್ದು. ಇದು ಒಂದು ಪರ್ವತದ ರೂಪದಲ್ಲಿರುವುದರಿಂದ, 'ಮೇರುಚಕ್ರ'ವೆಂದು ಹೆಸರು. ತಗ್ಗಾದ ಪರ್ವತದಂತಿದ್ದರೆ 'ಅರ್ಧಮೇರು'ವೆಂದು ಕರೆಯಲಾಗುತ್ತದೆ. ಇದನ್ನು ಶಿಲೆಯಲ್ಲಿ, ಸ್ಫಟಿಕದಲ್ಲಿ, ರತ್ನಶಿಲೆಗಳಲ್ಲಿ, ಅರ್ಧರತ್ನಶಿಲೆಗಳಲ್ಲಿ ಕೊರೆದು ರಚಿಸಬಹುದು, ಅಥವಾ ಮೇಲೆ ಹೇಳಿದಂತೆ, ಬಂಗಾರ, ಬೆಳ್ಳಿ, ತಾಮ್ರ ಈ ಧಾತುಗಳನ್ನು ಎರಕ ಹೊಯ್ದೂ ರಚಿಸಬಹುದು. ಎಲ್ಲ ಚಕ್ರಗಳೂ ಒಂದೇ ಪಾತಳಿಯಲ್ಲಿರುವ ರೇಖಾಕೃತಿಯ ಮಾದರಿಗಿಂತ ಭಿನ್ನವಾಗಿ, ಈ ಮಾದರಿಯಲ್ಲಿ, ಚಕ್ರಗಳು ಬೇರೆ ಬೇರೆ ಪಾತಳಿಯ ಎತ್ತರದಲ್ಲಿರುತ್ತವೆ. ಇದರಲ್ಲಿ ಮೂರು ಉಪ ಪ್ರಕಾರಗಳುಂಟು. ಹೊರಗಿನ ಮೂರು ಚಕ್ರಗಳು ಅಂದರೆ ಸೃಷ್ಟಿಚಕ್ರಗಳು ತಳದ ಪಾತಳಿಯಲ್ಲಿರುತ್ತವೆ. ಮಧ್ಯದ ಅಂದರೆ

ಸ್ಥಿತಿಚಕ್ರಗಳು ಮಧ್ಯಪಾತಳಿಯಲ್ಲಿಯೂ ಹಾಗೂ ಮೂರು ಒಳಗಿನ ಚಕ್ರಗಳು ಅಂದರೆ 'ಸಂಹಾರಚಕ್ರಗಳು' ಎಲ್ಲವುಗಳಲ್ಲಿ ಅತಿ ಎತ್ತರದ ಪಾತಳಿಯಲ್ಲಿಯೂ ಇರುವುವು.

(ಬ) ಹೊರಗಿನ ಚತುರಸ್ರವು (ಭೂಪುರ) ಬುಡದ ಪಾತಳಿಯಲ್ಲಿ, ಷೋಡಶಾರ ಮತ್ತು ಅಷ್ಟದಳ ಪದ್ಮಗಳು ಮಧ್ಯಪಾತಳಿಯಲ್ಲಿ, ಹಾಗೂ, ಪ್ರಧಾನಭಾಗವು (ಒಂಭತ್ತು ಪರಸ್ಪರ ಭೇದಿಸುವ ತ್ರಿಕೋನಗಳು) ಅತಿ ಎತ್ತರದ ಒಂದೇ ಪಾತಳಿಯಲ್ಲಿ (ಕೊರೆದು ಅಥವಾ ಉಬ್ಬು ಚಿತ್ರದಂತೆ) ಇರುವುವು.

(ಕ) ಇದರಲ್ಲಿ ಒಂಭತ್ತು ಚಕ್ರಗಳು ಬೇರೆ ಪಾತಳಿಯಲ್ಲಿರುವುವು. ಮತ್ತು ಮೇರುವು ಕ್ರಮವಾಗಿ ಭೂಪುರದಿಂದ ಬಿಂದುವಿನವರೆಗೆ ಏರುವ ಪರ್ವತಾಗ್ರದಂತೆ ತೋರುವುದು. ಬಿಂದುವು ಚೂಪಾಗಿರುವುದು. ಉಳಿದ ಚಕ್ರಗಳು ಆರೋಹಣ ಕ್ರಮದಲ್ಲಿರುವುವು.

ಶ್ರೀಚಕ್ರದ ವಿನ್ಯಾಸ ಪ್ರಸ್ತಾರವು ಮೂರು ಪ್ರಕಾರದ್ದು. ಕೇಂದ್ರಬಿಂದುವಿನಿಂದ ವ್ಯಕ್ತ ವಿಶ್ವದ ಉದ್ಭವವು (ಸೃಷ್ಟಿ) ಪ್ರಧಾನಕ್ಷೇತ್ರವಾಗಿರುವಾಗ, ಚಕ್ರಗಳು ಒಂದು ಪರ್ವತರೂಪದಲ್ಲಿ ವ್ಯವಸ್ಥಿತಗೊಂಡು ಇರುವವು ಮತ್ತು ಹದಿನಾರು 'ನಿತ್ಯದೇವತೆ'ಗಳೊಂದಿಗೆ ಐಕ್ಯಗೊಳಿಸಲಾಗುವುದು. ಹೀಗಿದ್ದಾಗ ಅದಕ್ಕೆ 'ಮೇರುಪ್ರಸ್ತಾರ'ವೆಂಬ ಹೆಸರು. ಇದನ್ನು ಬ್ರಹ್ಮಚಾರಿಗಳಿಗೆ ಮತ್ತು ನಿಮ್ನ ಪ್ರಗತಿಹೊಂದಿದ ಸಾಧಕರಿಗೆ ವಿಧಿಸಲಾಗಿದೆ. ('ತಂತ್ರ' ಕುರಿತ ಅಧ್ಯಾಯವನ್ನು ನೋಡಿ). ವಿಶ್ವದ 'ಸ್ಥಿತಿ'ಯು ಪ್ರಧಾನ ಕಲ್ಪನೆಯಾಗಿದ್ದಾಗ, ಎಲ್ಲ ಚಕ್ರಗಳನ್ನೂ ಒಂದೇ ಪಾತಳಿಯಲ್ಲಿಡಲಾಗುವುದು. ಮತ್ತು 'ವಶಿನೀ-ವಾಗ್ದೇವತೆಗಳೊಂದಿಗೆ' ಐಕ್ಯಗೊಳಿಸಲಾಗುವುದು.

ಇದಕ್ಕೆ 'ಭೂ-ಪ್ರಸ್ತಾರ'ವೆಂದು ಹೆಸರು. ಮತ್ತು ಇದನ್ನು ಗೃಹಸ್ಥರಿಗೆ ವಿಧಿಸಲಾಗಿದೆ. 'ಲಯ'ವು ಪ್ರಧಾನ ಕಲ್ಪನೆಯಾಗಿರುವಾಗ, 'ಬಿಂದು'ವು ಪ್ರಮುಖವಾಗಿ ನಿಲ್ಲುತ್ತದೆ. ಮತ್ತು ಉಳಿದ ಚಕ್ರಗಳು, ಒಂದು ಅಥವಾ ಎರಡು ಅಥವಾ ಮೂರು ಪಾತಳಿಗಳಲ್ಲಿರುತ್ತವೆ. ಮತ್ತು 'ಮಾತೃಕಾದೇವತೆ'ಗಳೊಂದಿಗೆ ಐಕ್ಯಗೊಳಿಸಲಾಗುವುದು. ಇದಕ್ಕೆ 'ಕೈಲಾಸ ಪ್ರಸ್ತಾರ'ವೆಂದು ಹೆಸರು, ಇದನ್ನು ವಿರಕ್ತರಿಗೆ ಮತ್ತು ಸಂನ್ಯಾಸಿಗಳಿಗೆ ವಿಧಿಸಲಾಗಿದೆ. ('ತಂತ್ರ'-ಅಧ್ಯಾಯವನ್ನು ನೋಡಿ).[10]

ಶ್ರೀಚಕ್ರವನ್ನು ವರ್ಗೀಕರಿಸುವ ಇನ್ನೊಂದು, ಈ ಮೇಲಿನದಕ್ಕಿಂತ ಸುಲಭವಾದ ವಿಧಾನವಿದೆ. ಪರಿಪೂರ್ಣ ಆಕೃತಿಯು ಒಂದು ಸಮಪಾತಳಿಯಲ್ಲಿ ನೆಲಕ್ಕೆ ಹತ್ತಿದಂತೆ ಬರೆಯಲ್ಪಟ್ಟಾಗ, ಅಥವಾ ಉಬ್ಬುಶಿಲ್ಪದಂತೆ ರಚಿತವಾದಾಗ ಅದಕ್ಕೆ 'ಭೂಪೃಷ್ಠ'ವೆಂದು ಹೆಸರು. ಕೊರೆದು ಮಾಡಿದ, ಉಬ್ಬು ಶಿಲ್ಪಮಾದರಿಯ ಅಥವಾ ಲಿಖಿತವಾದ ಆಕೃತಿಯು ಒಂದು ಕುಬ್ಜ ವೇದಿಕೆಮೇಲೆ, ಒಂದು ಆಮೆಯ ಬೆನ್ನಿನ ಮೇಲೆಂಬಂತೆ ಇಡಲ್ಪಟ್ಟಾಗ ಅದಕ್ಕೆ 'ಕಚ್ಛಪ ಪೃಷ್ಠ'ವೆಂದು ಹೆಸರು. ಮೇಲೆ ಹೇಳಿದಂತೆ ರಚಿತವಾದ ಆಕೃತಿಯು ಒಂದು ಎತ್ತರವಾದ ವೇದಿಕೆಯಮೇಲೆ ಇಡಲ್ಪಟ್ಟಾಗ ಅಥವಾ ವಿನ್ಯಾಸವು

ಚಕ್ರಗಳು ಬೇರೆಬೇರೆ ಎತ್ತರದ ಪಾತಳಿಯಲ್ಲಿ ಪರ್ವತಾಕಾರದಲ್ಲಿರುವಾಗ, ಅದಕ್ಕೆ 'ಮೇರು ಪೃಷ್ಠ'ವೆಂದು ಕರೆಯಲಾಗುವುದು.

ಮುಂದೆ, ಶ್ರೀಚಕ್ರ ಯಂತ್ರಗಳನ್ನು, ಅವುಗಳನ್ನುಪಯೋಗಿಸುವ ರೀತಿಗಳಿಗನುಸಾರ ಮೂರು ಗುಂಪುಗಳಾಗಿ ಮಾಡಬಹುದು. ಒಂದು ಶಿಲೆಯಮೇಲೆ ಕೊರೆದ, ಅಥವಾ ಧಾತುಫಲಕದಮೇಲೆ ರಚಿಸಿದ, ಅಥವಾ ಎರಕ ಹುಯ್ದು ಮಾಡಿದ ಮತ್ತು ನೆಲದಲ್ಲಿ ಸ್ಥಿರವಾಗಿ, ಪ್ರತಿಷ್ಠಾಪಿತವಾಗಿದ್ದರೆ ಅದಕ್ಕೆ 'ಅಚರ'ವೆಂದು ಹೆಸರು. ಒಮ್ಮೆ ಸ್ಥಾಪಿತಗೊಂಡು, ವಿಧ್ಯುಕ್ತ ಪ್ರತಿಷ್ಠಾಪಿತವಾಗಿದ್ದರೆ, ಅದು ಶಾಶ್ವತವಾಗಿ ಪೂಜೆಗೆ ಯೋಗ್ಯವಾಗಿರುವುದು. ಅದನ್ನು ಕಾಲ ಕಾಲಕ್ಕೆ ಪುನರ್ನವೀಕರಿಸುವುದು ಬೇಕಿಲ್ಲ. ಅದೇ, ಒಂದು ಮಣ್ಣಿನ ಹಲಗೆಯ ಮೇಲೆ, ಮರದ ಹಲಗೆಯಮೇಲೆ ಅಥವಾ ಭೂರ್ಜಪತ್ರದಮೇಲೆ, ಕಾಗದದ ಮೇಲೆ ರಚಿಸಿದ್ದಿದ್ದರೆ, ಅಥವಾ ಧಾತುಫಲಕದಮೇಲೆ ರಚಿಸಿದ್ದು ವೇದಿಕೆಯಮೇಲೆ ಸ್ಥಾಪಿಸಲ್ಪಟ್ಟಿರದಿದ್ದರೆ, ಅದರ ಸಾಮರ್ಥ್ಯವು, ಪೂಜೆಗೆ ಮುನ್ನ ಅದನ್ನು ಶುದ್ಧೀಕರಿಸುವುದರ ಮೇಲೆ ಅವಲಂಬಿತವಾಗಿರುತ್ತದೆ. ಮತ್ತು ಒಮ್ಮೆ ಉಪಯೋಗಿಸಿದ ನಂತರ ಅದು ಮತ್ತೆ ಪದೇ ಪದೇ ಅರ್ಚನೆಗೊಳ್ಳಲು ಯೋಗ್ಯವಾಗಿರುವುದಿಲ್ಲ. ಪೂಜೆಯನ್ನು ಮಾಡುವ ಪ್ರತಿಸಲವೂ ಅದನ್ನು ಹೊಸತಾಗಿ ರಚಿಸಿ ಶುದ್ಧೀಕರಿಸಬೇಕು. ನೆಲದಮೇಲೆ ಪ್ರತಿಷ್ಠಾಪಿತವಾಗದೆ, ಸ್ಥಳಾಂತರಿಸಲು ಬರುವುದಾದ್ದರಿಂದ ಇದಕ್ಕೆ 'ಚರ' ಯಂತ್ರವೆಂದು ಕರೆಯುವರು. ಮೂರನೆಯ ಗುಂಪಿನವೆಂದರೆ, ಧಾತುವಿನ, ಸ್ಫಟಿಕದ ಅಥವಾ ರತ್ನಗಳಮೇಲೆ ಬರೆದಿದ್ದು, ಪದಕ, ಉಂಗುರ ಅಥವಾ ತಾಯಿತದ ರೂಪದಲ್ಲಿ ಶರೀರದಮೇಲೆ ಧರಿಸಲು ಬರುವಂಥವುಗಳು. ಆದ್ದರಿಂದ ಯಾವುದೇ ರೀತಿಯಲ್ಲಿ ಅವು ಶುದ್ಧೀಕರಣಗೊಂಡು, ಆವಾಹಿತವಾಗಿರುವುದಿಲ್ಲ. ಇವು 'ಧಾರಣಯೋಗ್ಯ ಯಂತ್ರಗಳು'. ಓರ್ವ ಮಹಾತ್ಮನಿಂದ ನೀಡಲ್ಪಟ್ಟಾಗ ಮಾತ್ರ ಇವು ಶಕ್ತಿಯುತವಾಗಿರುವುವು. ಪೇಟೆಯಲ್ಲಿ ಖರೀದಿಸಿದ್ದರೆ ಅದರಿಂದ ಯಾವ ಪ್ರಯೋಜನವಿಲ್ಲ.

3. ನವಾವರಣಗಳು

'ಶ್ರೀಚಕ್ರ'ವು ಒಂದು ವಿಶಾಲ ಭವನವೆಂದೂ, ಅದರ ಅಂತಃಪುರದಲ್ಲಿ ದೇವಿಯು ತನ್ನೆಲ್ಲ ಮಹಿಮೆ, ವೈಭವಗಳೊಂದಿಗೆ ವಿರಾಜಮಾನಳಾಗಿರುವಳೆಂದೂ ಕಲ್ಪಿಸಲಾಗಿದೆ. ಆದರೆ ಆ ಭವನಕ್ಕೆ ಆವರಣಗಳ ಒಂದು ಶ್ರೇಣಿಯಿದೆ; ಅವುಗಳನ್ನು ದಾಟಿ ನಾವು ಅದರ ಗರ್ಭಗೃಹವನ್ನು ತಲುಪುವೆವು. ಪ್ರತಿಯೊಂದು ಆವರಣವೂ ದೇವಿಯ ಸಾನ್ನಿಧ್ಯವನ್ನು ದೃಗ್ಗೋಚರ ಭೌತ ಪ್ರಕ್ಷೇಪ ಹಾಗೂ ತೋರುವಿಕೆಗಳಿಂದ ಮರೆಮಾಡುತ್ತದೆ; ಆದರೂ ಆ ಸಾನ್ನಿಧ್ಯವು ಅವುಗಳಲ್ಲಿ, ಒಳಗಿನಿಂದ ಹರಡಿ ವ್ಯಾಪಿಸಿಕೊಂಡಿದೆ. ಅದು ಭಕ್ತನ ಮಾರ್ಗವನ್ನು ಬೆಳಗಬಲ್ಲದು. ಆ ಕಾರಣದಿಂದ, ಪ್ರತಿಯೊಂದು ಆವರಣವೂ ನಮ್ಮ ಆಧ್ಯಾತ್ಮಿಕ ಪ್ರಗತಿಯ ಯಾತ್ರೆಯಲ್ಲಿ ಮಧ್ಯದಲ್ಲಿರುವ ನಿಲ್ದಾಣಗಳಂತೆ, ನಮ್ಮ ಯಾತ್ರೆಯ ಒಂದೊಂದು ಹಂತವೆಂದು ತಿಳಿಯಲಾಗಿದೆ.

ಅರ್ಥಪೂರ್ಣವಾಗಿಯೇ 'ಭೂಪುರ'ವೆಂದು ಕರೆಯಲಾದ ಹೊರಗಿಂದ ಸುತ್ತುವರಿದಿರುವ ಚತುರಸ್ರದಿಂದ ಆರಂಭವಾಗಿ, ಅತ್ಯಂತ ಮಧ್ಯದ ಕೇಂದ್ರವಾದ 'ಬಿಂದು'ವಿನ ವರೆಗೆ ಒಟ್ಟು ಒಂಭತ್ತು ಆವರಣಗಳಿವೆ. (ವೃ-ಧಾತುವಿನಿಂದ, ಮುಚ್ಚು, ಮರೆಯಾಗಿಸು ಎಂಬ ಅರ್ಥ). ಅದುವೇ ದೇವಿಯ ಸಹಜ ವಾಸಸ್ಥಾನ. ಇವುಗಳಲ್ಲಿ ಪ್ರತಿಯೊಂದಕ್ಕೂ ಅದರದೇ ಆದ ಹೆಸರು, ಭೌತರೂಪ ಮತ್ತು ಆಧ್ಯಾತ್ಮಿಕ ಅಂತರಾರ್ಥ, ಆದರದೇ ಆದ ಬಣ್ಣ (ಸ್ವಭಾವಸೂಚಕ), ಅದರ ಅಧಿಷ್ಠಾತೃ-ದೇವತೆಗಳುಂಟು. (ಚಕ್ರನಾಯಿಕಾ ಅಥವಾ ಚಕ್ರೇಶ್ವರಿ). ಇವರು ಬಿಂದುವಿನಲ್ಲಿ ನೆಲೆಸಿರುವ ದೇವಿಯ ವಿವಿಧ ಅಂಶಗಳನ್ನು ಪ್ರತಿನಿಧಿಸುವ ಪರ್ಯಾಯ ರೂಪಗಳೇ ಮತ್ತು ಆಧ್ಯಾತ್ಮಿಕಯಾತ್ರೆಯಲ್ಲಿ ಸಹಾಯಕರಾಗುವ ಒಂದು ವಿಶಿಷ್ಟದೇವತಾವರ್ಗ (ಯೋಗಿನಿಯರು). ಹಾಗೂ ಪ್ರತಿಯೊಂದಕ್ಕೂ ಒಂದು ವಿಶಿಷ್ಟ ರಕ್ಷಾದೇವತೆ (ಮುದ್ರಾದೇವತೆ) ಉಂಟು. ಮುದ್ರಾದೇವತೆಯೆಂದರೆ ಭಕ್ತನನ್ನು ಸ್ವಾಗತಿಸಿ, ಶುದ್ಧಿಗೊಳಿಸಿ, ಆನಂದವನ್ನುಂಟುಮಾಡುವ (ಮುದಂ ರಾತಿ) ದೇವತೆ ಎಂದರ್ಥ.

ಆಧ್ಯಾತ್ಮಿಕ ಸಹಾಯಕರಾದ ಯೋಗಿನಿಯರ ಸಂಖ್ಯೆ ಒಟ್ಟು ಅರುವತ್ತನಾಲ್ಕು ಕೋಟಿ; ಅವರು ದೇವಿಯ ಪರಿವಾರಕ್ಕೆ ಸೇರಿದವರು. (ಮಹಾಚತುಃಷಷ್ಠಿಕೋಟಿ ಯೋಗಿನೀಗಣ ಸೇವಿತಾ).

ಹೀಗೆ ಶ್ರೀಚಕ್ರವು ನಿಜಕ್ಕೂ ದೇವಿಯ ಶರೀರವೆ; ಅವಳದೇ ಸ್ವರೂಪ.[11] ನವಾವರಣಗಳು ಅವಳ ನಿಜಸ್ವರೂಪವನ್ನು ಭಕ್ತನಿಗೆ ಪ್ರಕಟಗೊಳಿಸುತ್ತವೆ ಮತ್ತು ಹಾಗಾಗಿ ಭಕ್ತನು ಇವುಗಳಲ್ಲಿ ಪ್ರತಿಯೊಂದರ ಅರ್ಚನೆಯನ್ನು ಮಾಡಬೇಕೆಂದು ವಿಧಿಸಲಾಗಿದೆ. ಪೂಜಾ (ಅರ್ಚನಾ) ವಿಧಿಯು ಮೇಲೆ ಹೇಳಿದ ಅಧಿಷ್ಠಾತೃದೇವತೆಗಳ, ಯೋಗಿನಿಯರ ಮತ್ತು ಮಾತೃಕಾ ದೇವತೆಗಳ ಪೂಜೆಯನ್ನೊಳಗೊಂಡಿದೆ. ಪೂಜಾಕ್ರಮವು ಅತ್ಯಂತ ಹೊರಗಿನದಾದ 'ಭೂಪುರ'ದಿಂದ ಆರಂಭವಾಗಿ ಮಧ್ಯದ'ಬಿಂದು'ವಿನಲ್ಲಿ ಸಂಪೂರ್ಣವಾಗುತ್ತದೆ.

(1) ಪ್ರಥಮಾವರಣ : 'ತ್ರೈಲೋಕ್ಯಮೋಹನಾ ಆವರಣ :

ಇದು ಎಲ್ಲವನ್ನೂ ಒಳಗೊಂಡಿರುವ ಆಕೃತಿ-'ಸರ್ವಾಂತ ಚತುರಸ್ರ'. (ಚಿತ್ರ 1) ಇದರ ವಿಶಾಲ ಕ್ಷೇತ್ರದಲ್ಲಿ ಯಂತ್ರವು ಇಡಲ್ಪಟ್ಟಿದೆ. ಇದರ ಹೊರಗಣ ಅಂಚಿನಲ್ಲಿ ಮೂರು ರೇಖೆಗಳ ಕೋಟೆ(ಪ್ರಾಕಾರ) ಇರುವುದು. ಅವು ಒಂದರೊಳಗೊಂದು



(ಚಿತ್ರ 1)

ಇದ್ದು, ಕ್ರಮವಾಗಿ ಬಿಳಿ, ಕೆಂಪು ಹಾಗೂ ಹಳದಿ ವರ್ಣದ್ದಿರುತ್ತವೆ. ಈ ಕ್ಷೇತ್ರದ ಒಳಗಿನ ಅಂಚು ಮೂರು ಏಕಕೇಂದ್ರ ವೃತ್ತಗಳಿಂದಾಗಿದೆ (ತ್ರಿವೃತ್ತ). ಅದು ಷೋಡಶದಳಪದ್ಮವನ್ನು ಸುತ್ತುವರಿದಿದೆ.

ಈ ಚತುರಸ್ರದ ನಾಲ್ಕೂ 'ಆಮ್ನಾಯ' (ದಿಕ್ಕು) (ಪೂರ್ವ, ದಕ್ಷಿಣ, ಪಶ್ಚಿಮ ಮತ್ತು ಉತ್ತರ)ಗಳಲ್ಲಿ ದ್ವಾರಗಳಿವೆ. ಈ ಚತುರಸ್ರದ ಅತ್ಯಂತ ಹೊರಗಿನ ರೇಖೆಯಲ್ಲಿ ಹತ್ತು 'ಸಿದ್ಧಿಗಳು' ನೆಲೆಸಿವೆ. ಅವುಗಳಲ್ಲಿ ನಾಲ್ಕು ಸಿದ್ಧಿಗಳು ನಾಲ್ಕು ದ್ವಾರಗಳಲ್ಲಿ, ಮತ್ತೆ ನಾಲ್ಕು ನಾಲ್ಕು ಮೂಲೆಗಳಲ್ಲಿ, ಒಂದು ಕೆಳಗಡೆ ಹಾಗೂ ಒಂದು ಮೇಲುಗಡೆಗೆ. ಈ ಶಕ್ತಿಗಳು ಅರ್ಥಾತ್ ಸಿದ್ಧಿಗಳು ಈ ಕೆಳಗಿನ ಸಾಮರ್ಥ್ಯಗಳನ್ನು ಪ್ರತಿನಿಧಿಸುತ್ತವೆ : (1) ಅತ್ಯಂತ ಚಿಕ್ಕದಾಗುವುದು 'ಅಣಿಮಾ' (2) ಆಕಾರದಲ್ಲಿ ದೊಡ್ಡದಾಗುವುದು - 'ಮಹಿಮಾ', (3) ಹಗುರಾಗಿ ಆಗುವುದು - 'ಲಘಿಮಾ' (4) ಭಾರವಾಗುವುದು - 'ಗರಿಮಾ' (5) ಪ್ರಭುತ್ವವನ್ನು ಹೊಂದುವುದು - 'ಈಶಿತ್ವ' (6) ಬೇಕಾದುದನ್ನು ಬಯಸುವುದು - 'ಇಚ್ಛಾ' (7) ಅಧೀನಪಡಿಸಿಕೊಳ್ಳುವುದು - 'ವಶಿತ್ವ' (8) ಇಚ್ಛಿತ ವಸ್ತುವನ್ನು ಪಡೆಯುವುದು - 'ಪ್ರಾಕಾಮ್ಯ' (9) ಸುಖವನ್ನು ಪಡೆಯುವುದು - 'ಭುಕ್ತಿ' ಹಾಗೂ (10) ಸಕಲ ಬಯಕೆಗಳನ್ನು ಸಾಕಾರಗೊಳಿಸಿಕೊಳ್ಳುವುದು - 'ಸರ್ವ-ಕಾಮ-ಸಿದ್ಧಿ'. ಸಾಧಕನು ತನ್ನ ಆಧ್ಯಾತ್ಮಿಕ ಯಾತ್ರೆಯಲ್ಲಿ ಆತ್ಮರಕ್ಷಣೆಗೋಸ್ಕರ ಈ ಶಕ್ತಿಗಳನ್ನು ಪಡೆದಿರಬೇಕು. (ಚಿತ್ರ 2)



(ಚಿತ್ರ 2)

ಈ ಚತುರಸ್ರದ ಎರಡನೆಯ ರೇಖೆಯು ಎಂಟು ಮಾತೃಕಾದೇವತೆಗಳನ್ನು ಪ್ರತಿನಿಧಿಸುತ್ತದೆ. ಅವರು ನಾಲ್ಕು ದ್ವಾರಗಳಲ್ಲಿ ಹಾಗೂ ನಾಲ್ಕು ಮೂಲೆಗಳಲ್ಲಿ ಸ್ಥಿತರಾಗಿದ್ದಾರೆ. ಅವುಗಳಲ್ಲಿ (1) ತೀಕ್ಷ್ಣ ಅಭೀಪ್ಸೆಯಿಂದ 'ಬ್ರಾಹ್ಮೀ', (2) ತೀಕ್ಷ್ಣಕ್ರೋಧದಿಂದ 'ಮಾಹೇಶ್ವರೀ' (3) ಜುಗುಪ್ಸೆಯಿಂದ 'ಕೌಮಾರೀ' (4) ಜಗತ್ತಿನ ಮೋಹದಿಂದ 'ವೈಷ್ಣವೀ' (5) ಹಠದಿಂದ 'ವಾರಾಹಿ' (6) ಅಸೂಯೆಯಿಂದ 'ಇಂದ್ರಾಣೀ (7) ಪಾಪಯುಕ್ತ ಕ್ಷೋಭೆಯಿಂದ 'ಚಾಮುಂಡಾ' (8) ಮಂಗಳಕರ ಪುಣ್ಯಸ್ಫೂರ್ತಿಯಿಂದ 'ಮಹಾಲಕ್ಷ್ಮಿ' ಇವು ಉದ್ಭೂತವಾದವು. ಅವುಗಳಿಗೆ, ಪತಿರೂಪದಲ್ಲಿರುದ 'ಭೈರವ'ರುಂಟು. : ಕ್ರಮವಾಗಿ, ಕಪ್ಪುದೇಹದ 'ಅಸಿತಾಂಗ', ಕ್ರೋಧಿತನಾದ 'ರುರು', ಭಯಂಕರನಾದ 'ಚಂಡ', ವಿಚಾರರಿಕ್ತ 'ಕ್ರೋಧ', ಅಭಿಮಾನಿಯಾದ 'ಉನ್ಮತ್ತ', ಈರ್ಷ್ಯಾಯುಕ್ತ 'ಕಪಾಲ' ಅತಿ ಭಯಂಕರನಾದ 'ಭೀಷಣ' ಮತ್ತು ಲಯಕಾರಿಯಾದ 'ಸಂಹಾರ'.

ಚತುರಸ್ರದ ಅತ್ಯಂತ ಒಳಗಿನ (ಮೂರನೆಯ)ರೇಖೆಯು 'ಮುದ್ರಾಶಕ್ತಿ'ಗಳೆಂದೆನಿಸಿದ ಅಥವಾ 'ದಿಕ್ಪಾಲ'ರೆನಿಸಿದ, ದಿಕ್ಕುಗಳ ಪಾಲಕ ದೇವತೆಗಳನ್ನು ಪ್ರತಿನಿಧಿಸುತ್ತದೆ : ಸರ್ವಸಂಕ್ಷೋಭಿಣಿ, ಪಶ್ಚಿಮದಲ್ಲಿ, 'ಸರ್ವವಿದ್ರಾವಿಣಿ'ಯು ಉತ್ತರದಲ್ಲಿ, 'ಸರ್ವಾಕರ್ಷಿಣಿಯು ಪೂರ್ವದಲ್ಲಿ, ಮತ್ತು 'ಸರ್ವವಶಂಕರಿ'ಯು ದಕ್ಷಿಣದಲ್ಲಿ, ಸರ್ವೋನ್ಮಾದಿನಿಯು ವಾಯವ್ಯದಲ್ಲಿ, 'ಸರ್ವಾಂಕುಶಾ'-ಈಶಾನ್ಯದಲ್ಲಿ 'ಖೇಚರಿ'ಯು ಆಗ್ನೇಯದಲ್ಲಿ, 'ಸರ್ವಬೀಜಾ' ನೈಋತ್ಯದಲ್ಲಿ ಮತ್ತು 'ಮಹಾಯೋನಿ'ಯು (ಸಕಲ ವಸ್ತುಗಳ ಉಗಮಸ್ಥಾನ) ಕೆಳಗಡೆಗೆ ಮತ್ತು 'ಸರ್ವೇಶ್ವರಿ'ಯು ಮೇಲುಭಾಗದಲ್ಲಿ ಸ್ಥಿತರಾಗಿದ್ದಾರೆ.

ಇದರಲ್ಲಿ ಮೊದಲ ಒಂಭತ್ತು ಶಕ್ತಿಗಳು ಒಂಭತ್ತು ಚಕ್ರಗಳಿಗೆ (ಒಂದಕ್ಕೆ-ಒಂದರಂತೆ) ಸೇರಿದವಾಗಿವೆ. ಕೊನೆಯದು ('ತ್ರಿಚಂಡಿಕಾ' ಎಂಬ ಹೆಸರೂ ಇದಕ್ಕಿದೆ), ಎಲ್ಲ ಭಾಗಗಳನ್ನೂ ವ್ಯಾಪಿಸಿ ಇಡೀ ಶ್ರೀ ಚಕ್ರಸಂಕೀರ್ಣಕ್ಕೆ ಸೇರಿದ

ದೇವತಾ ಶಕ್ತಿ.[12] ಪ್ರಚಲಿತವಿರುವ ಇನ್ನೊಂದು ಸಾಂಕೇತಿಕತೆಯ ಪ್ರಕಾರ, ಈ ಒಂಭತ್ತು ಪಾಲಕ ಶಕ್ತಿಗಳು ಶರೀರದಲ್ಲಿರುವ ಆರು ಚಕ್ರಗಳನ್ನೂ (ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧ ಮತ್ತು ಆಜ್ಞಾ), ಸಹಸ್ರಾರ, ಲಂಬಿಕಾಗ್ರ (ದೃಷ್ಟಿಕೇಂದ್ರ) ಮತ್ತು 'ನಾಸಾಬಂಧ'ವನ್ನೂ ಆಳುತ್ತವೆ.

ಈ ಚತುರಸ್ರದ ಮೂರು ರೇಖೆಗಳು, ಪ್ರತ್ಯೇಕ ದೇವತೆಗಳೆಂದು ಪರಿಗಣಿಸಿ ಶ್ರೀಚಕ್ರದ, ಪಾದ, ಮೊಣಕಾಲು ಹಾಗೂ ತೊಡೆಗಳನ್ನು ಪ್ರತಿನಿಧಿಸುತ್ತವೆಂದು ತಿಳಿಯಲಾಗಿದೆ. ಈ ಆವರಣದ ಅಧಿಷ್ಠಾತೃದೇವತೆಯು 'ತ್ರಿಪುರಾ'(ಚಕ್ರೇಶ್ವರಿ) ಮತ್ತು ದೇವಿಯ, ಇಲ್ಲಿ ನೆಲೆಸಿದ ಸಹಚರ ದೇವತೆಗಳೆಲ್ಲರೂ ವ್ಯಕ್ತರೂಪವುಳ್ಳವರು (ಪ್ರಕಟಯೋಗಿನಿ). ಈ ಆವರಣವು ಸೃಷ್ಟಿಯ ಮೊದಲ ಭಾಗವನ್ನು ಸಂಕೇತಿಸುತ್ತದೆ, ಅರ್ಥಾತ್ 'ಸೃಷ್ಟಿ-ಸೃಷ್ಟಿ'ಯನ್ನು ಸೂಚಿಸುವುದಾಗಿದೆ.

(2) ದ್ವಿತೀಯಾವರಣ : ''ಸರ್ವಾಶಾ ಪರಿಪೂರಕ'' ಆವರಣ :

ಇದರ ರೂಪವು ಷೋಡಶದಳಪದ್ಮದಂತೆ ಇದೆ. (ಚಿತ್ರ 3) ಇದು ಮೂರು ಏಕಕೇಂದ್ರವೃತ್ತದ (ತ್ರಿವೃತ್ತ) ಒಳಗಡೆಗೆ ಹಾಗೂ 'ಅಷ್ಟದಳ ಪದ್ಮ'ದ ಹೊರಗಡೆ ಇರುವುದು. ಇದನ್ನು ರಚಿಸುವಾಗ ನಿಯಮವೇನೆಂದರೆ ದಳಗಳ ನಡುವೆ ಖಾಲಿಯಾದ ಸ್ಥಳವಿರಕೂಡದು. ಖಾಲಿ ಸ್ಥಳಕ್ಕೆ ಶಾಸ್ತ್ರೀಯವಾಗಿ 'ಕೇಸರ'ವೆಂದು ಹೆಸರು. 'ದಳದ್ವಯ



(ಚಿತ್ರ 3)

ಮಧ್ಯಮಾವಕಾಶ'ವೆಂದು ಇದರ ವ್ಯಾಖ್ಯೆ. ಇದು ಕೇಡನ್ನುಂಟುಮಾಡುವುದೆಂದು ಭಾವಿಸಲಾಗಿದೆ.

ಈ ಆವರಣದ ಅಧಿಷ್ಠಾತೃದೇವತೆ 'ತ್ರಿಪುರೇಶಿ' ಎಂದು ವರ್ಣಿಸಲ್ಪಟ್ಟಿದ್ದಾಳೆ. ಅವಳ ಅನುಚರ ಸಹಾಯಕ ದೇವತೆಗಳು 'ಗುಪ್ತ'ವಾಗಿರುವರು. ಅರ್ಥಾತ್ 'ಗುಪ್ತಯೋಗಿನಿ'ಯರು. ಈ ಆವರಣವನ್ನು ನಿಯಂತ್ರಿಸುವ ಶಕ್ತಿಗಳು ಹದಿನಾರು. ಅವರು ಹದಿನಾರು ದಳಗಳಿಂದ ಪ್ರತಿನಿಧಿಸಲ್ಪಟ್ಟಿದ್ದಾರೆ. (ಚಿತ್ರ 4) ಪೂರ್ವ ದಿಕ್ಕಿನಿಂದ ಅಪ್ರದಕ್ಷಿಣಾಕಾರವಾಗಿ ಅವರು ಈ ಕ್ರಮದಲ್ಲಿ ನೆಲೆಸಿರುವರು; ಕಾಮಾಕರ್ಷಿಣಿ (ಕಾಮನೆಗಳನ್ನು ಸಂಬಂಧಿಸಿದ ಆಕರ್ಷಣೆ), ಬುದ್ಧ್ಯಾಕರ್ಷಿಣಿ, 'ಅಹಂಕಾರ', ಶಬ್ದಾ, ಸ್ಪರ್ಶಾ, ರೂಪಾ, ರಸಾ, ಗಂಧಾ, ಚಿತ್ತಾ, ಧೈರ್ಯಾ, ಸ್ಮೃತ್ಯಾ, ನಾಮಾ, ಬೀಜಾ, ಆತ್ಮಾ, ಅಮೃತಾ, ಶರೀರಾ ಎಂಬ ಇವರು ಹದಿನಾರು 'ಸ್ವರ'ಗಳಿಂದ ಸೂಚಿತರಾಗಿದ್ದಾರೆ. ಪೂರ್ವದಿಕ್ಕಿನಿಂದ ಪ್ರದಕ್ಷಿಣ ಕ್ರಮದಲ್ಲಿ ದಳಗಳಮೇಲೆ ಅವುಗಳನ್ನು ಬರೆಯಲಾಗುವುದು.



(ಚಿತ್ರ 4)

ಮಾನವ ಶರೀರದಲ್ಲಿ, ಈ ಆವರಣಕ್ಕೆ ಸಂವಾದಿಯಾದ (ಸಂಬಂಧಿಸಿದ) ಕೇಂದ್ರವು ಮೂಲಾಧಾರ ಚಕ್ರ.

ಈ ಆವರಣವು ಸೃಷ್ಟಿಯ ಎರಡನೆಯ ಭಾಗವನ್ನು 'ಸೃಷ್ಟಿ-ಸ್ಥಿತಿ'ಯನ್ನು ಸಂಕೇತಿಸುತ್ತದೆ.

(3) ತೃತೀಯ ಆವರಣ : ''ಸರ್ವ ಸಂಕ್ಷೋಭಿಣಿ''.

ಇದು ಅಷ್ಟದಳಪದ್ಮದ ರೂಪದಲ್ಲಿ, ಮೇಲೆ ಹೇಳಿದ ದ್ವಿತೀಯಾವರಣದ ಒಳಗೆ ಹಾಗೂ ಯಂತ್ರದ ಪ್ರಧಾನಭಾಗದ ಹೊರಗೆ ಇರುತ್ತದೆ. (ಪ್ರಧಾನ ಭಾಗವೆಂದರೆ ಪರಸ್ಪರ ಛೇದಿಸುವ ತ್ರಿಕೋಣಗಳಿಂದ ರಚಿತವಾದ ಭಾಗ).

ಈ ಆವರಣದ ಅಧಿಷ್ಠಾತೃದೇವತೆ 'ತ್ರಿಪುರಸುಂದರಿ', ಹಿಂದಿನ ಆವರಣದ ಯೋಗಿನಿಯರಿಗಿಂತಲೂ ಹೆಚ್ಚು ಗುಪ್ತವಾಗಿರುವ 'ಗುಪ್ತತರಯೋಗಿನಿ'ಯರಿಂದ ಪರಿವೃತಳಾಗಿದ್ದಾಳೆ. ಪದ್ಮದ ಅಷ್ಟದಳಗಳು 'ಚಿದ್ಭೌತಿಕ ಶಕ್ತಿಗಳನ್ನು ಪ್ರತಿನಿಧಿಸುತ್ತವೆ. ('ಅನಂಗ'ವೆಂದರೆ ಪೂರ್ತಿಯಾಗಿ ಭೌತಿಕವಲ್ಲದ್ದು ಎಂದು ಅರ್ಥ). ಆ ಎಂಟು ಶಕ್ತಿಗಳು : ಅನಂಗ ಕುಸುಮಾ (ಮಾತು, ಅಭಿವ್ಯಕ್ತಿ ವಚನ) ಪೂರ್ವದಲ್ಲಿ, ಅನಂಗ ಮೇಖಲಾ (ಗ್ರಹಣ, ಸ್ವೀಕಾರ, ಆದಾನ) ದಕ್ಷಿಣದಲ್ಲಿ, ಅನಂಗ ಮದನಾ (ಚಲನೆ, ಗಮನ) ಪಶ್ಚಿಮದಲ್ಲಿ, ಅನಂಗಮದನಾತುರಾ (ದೈಹಿಕ ಒತ್ತಡಗಳು, ವಿಸರ್ಜನ) ಉತ್ತರದಲ್ಲಿ, ಅನಂಗರೇಖಾ (ಸಂತೋಷ, ಸುಖ, ಆನಂದ) ಆಗ್ನೇಯದಲ್ಲಿ,



(ಚಿತ್ರ 5–ಎ)



(ಚಿತ್ರ 5–ಬಿ)

ಅನಂಗವೇಗಿನೀ (ನಿರಾಕರಣ, ಪ್ರತಿಕ್ರಿಯೆ,) ನೈಋತ್ಯದಲ್ಲಿ, ಅನಂಗ ಮದನಾಂಕುಶಾ (ಲಕ್ಷ್ಯ, ಉಪಾದಾನ) ವಾಯವ್ಯದಲ್ಲಿ, ಮತ್ತು ಅನಂಗಮಾಲಿನಿ (ನಿಸ್ಪೃಹತೆ, ಉಪೇಕ್ಷಾ) ಈಶಾನ್ಯದಲ್ಲಿ. ಅವರು ಕ್ರಮವಾಗಿ 'ಕ' ದಿಂದ ಆರಂಭವಾಗುವ ಎಂಟು ವ್ಯಂಜನಾಕ್ಷರಗಳಿಂದ ಸೂಚಿಸಲ್ಪಡುತ್ತಾರೆ.

ಇದಕ್ಕೆ ಸಂವಾದಿಯಾದ, (ಸಂಬಂಧಿಸಿದ) ಮಾನವ ಶರೀರದಲ್ಲಿಯ ಕೇಂದ್ರವು 'ನಾಭಿ' ಅಥವಾ 'ಕಟಿ'.

ಈ ಆವರಣವು ಸೃಷ್ಟಿ ಚಕ್ರದ ಮೂರನೆಯ ಹಾಗೂ ಕೊನೆಯ ಭಾಗ, ಅಂದರೆ 'ಸೃಷ್ಟಿ-ಸಂಹಾರ'ವನ್ನು ಸಂಕೇತಿಸುತ್ತದೆ. (ಚಿತ್ರ 5–ಬಿ)

(4) ಚತುರ್ಥಾವರಣ : 'ಸರ್ವಸೌಭಾಗ್ಯದಾಯಕ' ಆವರಣ :

ಈ ಆವರಣವು ಹದಿನಾಲ್ಕು ಮೂಲೆಗಳುಳ್ಳ ಆಕೃತಿ (ಚತುರ್ದಶಾರ ಅಥವಾ, ಹದಿನಾಲ್ಕು ಲೋಕಗಳನ್ನು ಪ್ರತಿನಿಧಿಸುವ 'ಭುವನ' ಅಥವಾ ಕಲ್ಪಾವಧಿಯಲ್ಲಿ ಆಗಿಹೋಗುವ ಮಾನವ ಕುಲದ ಆದಿಪುರುಷರಾದ 'ಮನು'ಗಳನ್ನು ಸೂಚಿಸುತ್ತದೆ).

(ಚಿತ್ರ 6) ಇದು ಶ್ರೀಚಕ್ರದ ಪ್ರಧಾನಭಾಗದಲ್ಲಿಯ ಮೊದಲನೇ ಆವರಣ. (ಪರಸ್ಪರ ಭೇದಿಸುವ ಒಂಭತ್ತು ತ್ರಿಕೋಣಗಳಿಂದ ಇದು ಉಂಟಾಗುವುದು).



(ಚಿತ್ರ 6)

'ಸಂಪ್ರದಾಯಬದ್ಧ' ಯೋಗಿನಿ (ಸಂಪ್ರದಾಯಯೋಗಿನಿ) ಯರಿಂದ ಪರಿವೃತಳಾಗಿರುವ 'ತ್ರಿಪುರವಾಸಿನಿ'ಯು ಇದರ ಅಧಿಷ್ಠಾತ್ರ ದೇವತೆ.



(ಚಿತ್ರ 7)

ಈ ಆವರಣದ ಹದಿನಾಲ್ಕು ಕೋನಗಳು (ಮೂಲೆಗಳು)ಶರೀರದಲ್ಲಿರುವ ಹದಿನಾಲ್ಕು 'ನಾಡಿ'ಗಳನ್ನು ಪ್ರತಿನಿಧಿಸುತ್ತದೆ. ಅವು, ಪೂರ್ವದಿಕ್ಕಿನಿಂದ 'ಅಪ್ರದಕ್ಷಿಣ ಕ್ರಮದಲ್ಲಿ ಇಂತಿವೆ : ಸರ್ವಸಂಕ್ಷೋಭಿಣೀ (ಅಲಂಕುಶ ನಾಡಿ), ಸರ್ವವಿದ್ರಾವಿಣೀ (ಕುಹೂ, ಅಥವಾ ಎಲ್ಲವನ್ನೂ ಬೆನ್ನಟ್ಟಿ ಓಡಿಸುವವಳು), ಸರ್ವಾಕರ್ಷಿಣೀ (ವಿಶ್ವೋದರಾ), ಸರ್ವಾಹ್ಲಾದಕಾರಿಣೀ (ವರಣಾ), ಸರ್ವ ಸಂಮೋಹಿನೀ (ಹಸ್ತಿಜಿಹ್ವಾ), ಸರ್ವಸ್ತಂಭಿನೀ (ಯಶೋವತೀ), ಸರ್ವಜೃಂಭಿನೀ (ಪಯಸ್ವಿನಿ, ಎಲ್ಲರನ್ನೂ ಬಿಡುಗಡೆ ಮಾಡುವವಳು), ಸರ್ವವಶಂಕರೀ (ಎಲ್ಲವನ್ನೂ ನಿಯಂತ್ರಿಸುವವಳು, ಗಾಂಧಾರಿ, ಪರ್ಯಾಯವಾಗಿ, ಸರ್ವಾಕರ್ಷಿಣೀ ಎಂದೂ ಕರೆಯಲಾಗಿದೆ). ಸರ್ವ ರಂಜನೀ (ಪೂಷಾ), ಸರ್ವೋನ್ಮಾದಿನೀ (ಶಂಖಿನೀ), ಸರ್ವಸಾಧನೀ (ಸರಸ್ವತೀ), ಸರ್ವಸಂಪತ್ತಿ ಪೂರಣೀ (ಇಡಾ), ಸರ್ವಮಂತ್ರಮಯೀ (ಪಿಂಗಳಾ), ಮತ್ತು ಸರ್ವದ್ವಂದ್ವ ಕ್ಷಯಂಕರೀ (ಸರ್ವಮಯೀ, ವ್ಯಕ್ತವಿಶ್ವದ ಎಲ್ಲ ದ್ವಂದ್ವಗಳನ್ನು ಒಳಗೊಂಡಿರುವವಳು, ಎಲ್ಲ ದ್ವಂದ್ವಗಳನ್ನು ನಾಶಮಾಡುವವಳು - ಸುಷುಮ್ನಾ). ವರ್ಣಮಾಲೆಯ ಮೊದಲ ಹದಿನಾಲ್ಕು ಅಕ್ಷರಗಳಿಂದ ಇವರನ್ನು ಸಂಕೇತಿಸಲಾಗಿದೆ. (ಚಿತ್ರ 7)

ಮಾನವ ಶರೀರದಲ್ಲಿ ಇದಕ್ಕೆ ಸಂವಾದಿಯಾದ (ಸಂಬಂಧಿಸಿದ) ಚಕ್ರವು ಹೃದಯ ಭಾಗದಲ್ಲಿರುವ 'ಅನಾಹತ ಚಕ್ರ'.

ಈ ಆವರಣವು ಸ್ಥಿತಿಚಕ್ರದ ಮೊದಲಭಾಗವನ್ನು (ಸ್ಥಿತಿ-ಸೃಷ್ಟಿಯನ್ನು ಸೂಚಿಸುತ್ತದೆ).

(5) ಪಂಚಮಾವರಣ : "ಸರ್ವಾರ್ಥಸಾಧಕ" ಆವರಣ (ಚಿತ್ರ 8 ಎ, ಬಿ):

ಇದು ಹತ್ತು ಮೂಲೆಗಳುಳ್ಳ ರೂಪದಲ್ಲಿದ್ದು, (ಈ ಮೇಲಿನ ಆವರಣದಿಂದ ಪರಿವೃತವಾಗಿದೆ. ಇದು ಹತ್ತು ಮೂಲೆಗಳ ಆಕೃತಿ, ಹೊರಭಾಗದಲ್ಲಿರುವುದಾದ್ದರಿಂದ



(ಚಿತ್ರ 8–ಎ)

'ಬಹಿರ್ದಶಾರ'ವೆಂದು ವಿಶೇಷವಾಗಿ ಕರೆಯಲ್ಪಟ್ಟಿರುವುದು ಯಾಕೆಂದರೆ, ಹತ್ತು ಮೂಲೆಗಳುಳ್ಳ ಇನ್ನೊಂದು ಆಕೃತಿಯೂ ಇದೆ; ಅದನ್ನು ಇದು ಸುತ್ತುವರಿದಿದೆ.

ಈ ಕೇಂದ್ರದ ಅಧಿಷ್ಠಾತೃ ದೇವತೆಯು 'ತ್ರಿಪುರಾ-ಶ್ರೀ'. ಐಂದ್ರಿಯಕ ಗ್ರಹಿಕೆಗೆ ಅತೀತರಾದ, 'ಕುಲೋತ್ತೀರ್ಣ ಯೋಗಿನಿ'ಯರು, ಅವಳನ್ನು ಸುತ್ತುವರಿದಿರುವ ಪರಿವಾರ ದೇವತೆಗಳು.



(ಚಿತ್ರ 8–ಬಿ)

ಈ ಹತ್ತೂ ಮೂಲೆಗಳು ಹತ್ತು ಮಂಗಳಕಾರಕ ದೇವತೆಗಳಿಗೆ ನಿವಾಸಸ್ಥಾನಗಳಾಗಿವೆ. ಪೂರ್ವದಿಂದ, ಅಪ್ರದಕ್ಷಿಣ ಕ್ರಮದಲ್ಲಿ ಅವರ ಹೆಸರುಗಳು ಈ ರೀತಿ ಇವೆ : ಸರ್ವಸಿದ್ಧಿಪ್ರದಾ, ಸರ್ವಸಂಪತ್ಪ್ರದಾ, ಸರ್ವಪ್ರಿಯಂಕರೀ; ಸರ್ವಮಂಗಲಕಾರಿಣೀ, ಸರ್ವಕಾಮಪ್ರದಾ, ಸರ್ವದುಃಖವಿಮೋಚನೀ, ಸರ್ವಮೃತ್ಯು ಪ್ರಶಮನೀ, ಸರ್ವವಿಘ್ನನಿವಾರಿಣೀ, ಸರ್ವಾಂಗಸುಂದರೀ, ಮತ್ತು ಸರ್ವ ಸೌಭಾಗ್ಯದಾಯಿನೀ. ಇವರು 'ಕ'-ದಿಂದಾರಂಭಿಸಿ ಐದು, ಹಾಗೂ 'ಚ' ದಿಂದಾರಂಭಿಸಿ ಐದು ವ್ಯಂಜನಾಕ್ಷರಗಳಿಂದ ಸಂಕೇತಿಸಲ್ಪಟ್ಟಿದ್ದಾರೆ : ಹತ್ತರ ಸಂಖ್ಯೆಯು, ಜಗತ್ತಿನ ಕ್ಷೇಮಕಾರಕನಾದ ವಿಷ್ಣುವಿನ ಹತ್ತು ಅವತಾರಗಳನ್ನೂ ಸಂಕೇತಿಸುತ್ತದೆ. (ಚಿತ್ರ 9).



(ಚಿತ್ರ 9)

ಮಾನವ ಶರೀರದಲ್ಲಿ ಈ ಆವರಣಕ್ಕೆ ಸಂವಾದಿಯಾಗಿರುವ ಚಕ್ರವು 'ವಿಶುದ್ಧ ಚಕ್ರ', ಕಂಠಸ್ಥಾನದಲ್ಲಿರುವುದು.

ಈ ಆವರಣವು ಜಗತ್ತಿನ ಸ್ಥಿತಿ-ಚಕ್ರದ ಎರಡನೆಯ ಭಾಗವನ್ನು ಅಂದರೆ, 'ಸ್ಥಿತಿ-ಸ್ಥಿತಿ' ಯನ್ನು ಸೂಚಿಸುವುದಾಗಿದೆ.

(6) ಷಷ್ಠಾವರಣ : ಸರ್ವರಕ್ಷಾಕರ ಆವರಣ (ಚಿತ್ರ 10) :

ಇದೂ, ಹತ್ತು ಮೂಲೆಗಳುಳ್ಳ ಆಕೃತಿ. ಮೇಲಿನ ಆವರಣದ ಹತ್ತಿರ ಒಳಗಡೆ ಇದೆ. ಇದು ಒಳಗಿನ, ಹತ್ತು ಮೂಲೆಗಳುಳ್ಳದ್ದಾದ್ದರಿಂದ 'ಅಂತರ್ದಶಾರ'ವೆಂದು ಹೆಸರು.

(ಚಿತ್ರ 10)

ಈ ಚಕ್ರದ ಅಧಿಷ್ಠಾತೃದೇವತೆಯು ತ್ರಿಪುರಮಾಲಿನೀ. ಗರ್ಭರೂಪದಲ್ಲಿರುವ ಹತ್ತು ಯೋಗಿನಿಯರು ಇವಳನ್ನು ಸೇವಿಸುತ್ತಾರೆ. ಅವರಿಗೆ 'ನಿಗರ್ಭಾಯೋಗಿನಿ'ಯರೆಂದು ಕರೆಯುತ್ತಾರೆ. ಈ ಹತ್ತು ಮೂಲೆಗಳು ಪ್ರಾಣಮಯ ಅಗ್ನಿಯ ಹತ್ತು ಶಕ್ತಿಗಳನ್ನು ಪ್ರತಿನಿಧಿಸುತ್ತವೆ. (ವಹ್ನಿಕಲಾ). ಅವು ಯಾವವೆಂದರೆ - ಸರ್ವಜ್ಞಾ, (ಎಲ್ಲವನ್ನೂ ತಿಳಿದವಳು, ರೇಚಕ ಸಂಬಂಧಿತ), ಸರ್ವಶಕ್ತಿಪ್ರದಾ (ಪಾಚಕ-ಸಂಬಂಧಿತ), ಸರ್ವೈಶ್ವರ್ಯಪ್ರದಾ (ಶೋಷಣ, ಜಠರಾಗ್ನಿಯ ದೋಷಗಳನ್ನು ನಿವಾರಿಸುವುದು), ಸರ್ವಜ್ಞಾನಮಯಿ (ದಾಹಕ-ಸಂಬಂಧಿತ), ಸರ್ವವ್ಯಾಧಿವಿನಾಶಿನಿ (ಎಲ್ಲ ರೋಗಗಳನ್ನು ದೂರಮಾಡುವ, ಪ್ಲಾವಕ, ಜೀರ್ಣಕಾರಿ ರಸಸ್ರಾವಕ). ಸರ್ವಾಧಾರಸ್ವರೂಪಾ (ಎಲ್ಲವನ್ನೂ ಆಧರಿಸಿದ, ಕ್ಷಾರಕ, ಪಿತ್ತರಸಸ್ರಾವಕ), ಸರ್ವಪಾಪಹರಾ (ಎಲ್ಲ ದುಃಖಗಳನ್ನು ನಿವಾರಿಸುವ, ಕ್ಷೋಭಕ, ಆಹಾರವನ್ನು ಕಡೆಯುವ), ಸರ್ವರಕ್ಷಾಸ್ವರೂಪಿಣಿ (ಎಲ್ಲವನ್ನೂ ರಕ್ಷಿಸುವ, ಜೃಂಭಕ, ಆಕಳಿಸುವ), ಮತ್ತು 'ಸರ್ವೇಪ್ಸಿತ ಫಲಪ್ರದಾ (ಬಯಸಿದ ಫಲಗಳನ್ನು ನೀಡುವ, ಮೋಹಕ, ಮೂರ್ಛಾಕಾರಕ). ಈ ಶಕ್ತಿಗಳು, ಪೂರ್ವದಿಂದಾರಂಭಿಸಿ ಅಪ್ರದಕ್ಷಿಣವಾಗಿ, ಒಂದೊಂದು ಮೂಲೆಯಲ್ಲಿ ನಿಹಿತವಾಗಿವೆ. ಮತ್ತು 'ಟ'ವರ್ಗದ ಐದು, ಹಾಗೂ 'ತ'-ವರ್ಗದ ಐದು ವ್ಯಂಜನಗಳಿಂದ ಸಂಕೇತಿಸಲ್ಪಟ್ಟಿವೆ.

ಈ ಆವರಣದ ಆಕೃತಿಯು ಅಗ್ನಿ-ಸ್ವಭಾವವುಳ್ಳದ್ದೆಂದು ವರ್ಣಿತವಾಗಿದೆ. ಮತ್ತು ಇದು 'ಸ್ಥಿತಿಚಕ್ರ'ದ ಮೂರನೆಯ ಭಾಗವನ್ನು ಅಂದರೆ 'ಸ್ಥಿತಿ-ಸಂಹಾರ'ವನ್ನು ಸೂಚಿಸುತ್ತದೆ. (ಚಿತ್ರ 11-ಎ, ಬಿ)



(ಚಿತ್ರ 11–ಎ)

ಮಾನವ ಶರೀರದಲ್ಲಿ 'ಮಣಿಪೂರ ಚಕ್ರ'ವು ಇದಕ್ಕೆ ಸಂಬಂಧಿಸಿದುದಾಗಿದೆ, ಆದರೆ ಇದು ಭ್ರೂಮಧ್ಯದಲ್ಲಿರುವುದೆಂದು ಹೇಳಲಾಗಿದೆ.



(ಚಿತ್ರ 11–ಬಿ)

(7) ಸಪ್ತಮಾವರಣ : ''ಸರ್ವರೋಗ ಹರಾ'' ಆವರಣ (ಚಿತ್ರ 12) :

ಇದಕ್ಕೆ ಎಂಟು ಮೂಲೆಗಳಿದ್ದು, 'ಅಷ್ಟಕೋಣ' ಅಥವಾ 'ವಸುಕೋಣ'ವೆಂದು ಕರೆಯಲಾಗಿದೆ. (ಯಾಕೆಂದರೆ 'ವಸುಗಳ ಸಂಖ್ಯೆ ಎಂಟು). ಇದು ಈ ಮೇಲಿನ ಆವರಣದ ಒಳಗಡೆ ಹಾಗೂ ಆದ್ಯ ತ್ರಿಕೋನದ ಹೊರಗಡೆ ಇದೆ.

(ಚಿತ್ರ 12)

'ರಹಸ್ಯಯೋಗಿನಿ'ಯರೆಂಬ ಅನುಚರದೇವತೆಗಳಿಂದ ಸೇವಿತಳಾದ 'ತ್ರಿಪುರಾಸಿದ್ಧಾ' ದೇವಿಯು ಇದರ ಅಧಿಷ್ಠಾತೃ ದೇವತೆ.

ಇದರ ಎಂಟು ಮೂಲೆಗಳು ಎಂಟು ಮೌಲಿಕ ಪ್ರೇರಕ ಶಕ್ತಿಗಳಿಗೆ ಕಾರಕಗಳು ಅಥವಾ ಅವುಗಳ ಅಭಿವ್ಯಕ್ತಿಗಳು : ವಶಿನೀ (ಅಧೀನದಲ್ಲಿಟ್ಟುಕೊಳ್ಳುವುದು, 'ಶೀತ್'-ಸಂಬಂಧಿತ), ಕಾಮೇಶೀ (ಆಶೆಗಳನ್ನು ಅಧೀನದಲ್ಲಿಟ್ಟುಕೊಳ್ಳುವುದು, ಊಷ್ಣಾ ಅಥವಾ ಉಷ್ಣ ಸಂಬಂಧಿತ), ಮೋದಿನೀ (ಭ್ರಮೆಯನ್ನುಂಟುಮಾಡುವುದು, ಅಥವಾ, ಸಂತೋಷವನ್ನುಂಟುಮಾಡುವುದು), ವಿಮಲಾ (ಪವಿತ್ರಗೋಳಿಸುವುದು, ದುಃಖಸಂಬಂಧಿತ), ಆರುಣಾ (ಕೆಂಪುರತ್ನದವರ್ಣದ್ದು, ಇಚ್ಛಾ ಸಂಬಂಧಿತ), ಜಯಿನೀ (ವಿಜಯವನ್ನು ಸಾಧಿಸುವುದು, ಸತ್ತ್ವ, ವಿವೇಕ ಸಂಬಂಧಿತ) ಸರ್ವೇಶೀ (ಎಲ್ಲದರ ಮೇಲೆ ಒಡೆತನ, ರಜಸ್, ಕ್ರಿಯಾಶೀಲತೆ), ಮತ್ತು ಕೌಲಿನೀ (ಕುಲಸಂಬಂಧಿತ, ತಮಸ್, ಜಡತೆ). ಈ ಯೋಗಿನಿಯರು, ಪೂರ್ವದಿಂದ ಅಪ್ರದಕ್ಷಿಣ ರೀತಿಯಲ್ಲಿ ಆವರಣದ ಎಂಟು ಮೂಲೆಗಳಲ್ಲಿ ನಿಹಿತರಾಗಿರುತ್ತಾರೆ.

ಈ ದೇವತೆಗಳು ವಾಗ್ದೇವತೆಗಳೆಂದೂ ವರ್ಣಿಸಲ್ಪಟ್ಟಿರುತ್ತಾರೆ. ಮತ್ತು 'ಲಲಿತಾ'ಮಾತೆಯ ಅತ್ಯಂತ ಸಾಮಿಪ್ಯದಲ್ಲಿರುತ್ತಾರೆ. ಎಂಟರ ಸಂಖ್ಯೆಯು ಶಿವನು ಧಾರಣೆ ಮಾಡುವ ಎಂಟು ರೂಪಗಳನ್ನು ಸಂಕೇತಿಸುತ್ತದೆ. (ರುದ್ರ, ಭವ, ಶರ್ವ, ಈಶಾನ, ಪಶುಪತಿ, ಭೀಮ, ಉಗ್ರ, ಮತ್ತು ಮಹಾದೇವ). ಇವರು 'ಪ' ವರ್ಗದ ಐದು ಅಕ್ಷರಗಳು ಹಾಗೂ 'ಶ', 'ಷ', 'ಸ'ಗಳಿಂದ ಪ್ರತಿನಿಧಿಸಲ್ಪಟ್ಟಿದ್ದಾರೆ.

ಈ ಆವರಣವು ಮೂರನೆಯದಾದ 'ಸಂಹಾರ-ಚಕ್ರ'ದ ಮೊದಲ ಭಾಗವನ್ನೂ ಸಂಕೇತಿಸುತ್ತದೆ. ಅಂದರೆ 'ಸಂಹಾರ-ಸೃಷ್ಟಿ' - ಸೂಚಕ. ಇದಕ್ಕೆ ಸಂಬಂಧಿಸಿದ ಮಾನವಶರೀರಭಾಗವು 'ಲಲಾಟ' (ಹಣೆ) ಅಥವಾ ಪರ್ಯಾಯವಾಗಿ ಸ್ವಾಧಿಷ್ಠಾನ ಚಕ್ರ.



ಈ ಆಕೃತಿ ಮತ್ತು ಪ್ರಥಮ ತ್ರಿಕೋಣಗಳ ನಡುವೆ, ನಾಲ್ಕು 'ಆಯುಧ ದೇವತೆಗಳು', ನಾಲ್ಕು ದಿಕ್ಕುಗಳಲ್ಲಿ ಪ್ರಥಮ ತ್ರಿಕೋಣದ ರಕ್ಷಣೆ ಮಾಡುವುದಕ್ಕೋಸ್ಕರ ನೆಲೆಸಿದ್ದಾರೆ : ಬಾಣಿನೀ, ಚಾಪಿನೀ, ಪಾಶಿನೀ, ಮತ್ತು ಅಂಕುಶಿನೀ - ಎಂಬವು.

(8) ಅಷ್ಟಮಾವರಣ : ''ಸರ್ವಸಿದ್ಧಿಪ್ರದಾ'' ಆವರಣ :

ಇದು ತ್ರಿಕೋಣಾಕೃತಿಯಲ್ಲಿ, ಶೃಂಗವು ಪೂರ್ವಾಭಿಮುಖವಾಗಿ (ಸಾಧಕನಿಗೆದುರಾಗುವಂತೆ)ಇದೆ. ಅಥವಾ, ಕಾಗದದ ಮೇಲೆ ರಚಿಸಿದ್ದಾದರೆ, ಶೃಂಗವು ಕೆಳಮುಖವಾಗಿರುತ್ತದೆ. ಇದು ಆದ್ಯ ತ್ರಿಕೋನ; ಕೇಂದ್ರದಲ್ಲಿ ಸ್ಥಿತವಾದದ್ದು. ಇಡೀ ಯಂತ್ರ ವಿನ್ಯಾಸದಲ್ಲಿ ಸ್ವತಂತ್ರವಾಗಿ ಇರುವುದು. ಇದಕ್ಕೆ 'ಕಾಮ-ಕಲಾ' ಎಂದು ಕರೆಯುತ್ತಾರೆ. 'ಬಿಂದು'ವಿನ ಪ್ರಥಮ ವಿಕಾಸ ರೂಪವಿದು.

ಇದರ ಅಧಿಷ್ಠಾತ್ರ ದೇವತೆ 'ತ್ರಿಪುರಾಂಬಾ', 'ಅತಿರಹಸ್ಯಯೋಗಿನಿ'ಯರಿಂದ ಸೇವಿಸಲ್ಪಡುತ್ತಾಳೆ.



ಇದರ ಮೂರು ಮೂಲೆಗಳು, ದೇವಿ 'ಕಾಮೇಶ್ವರಿ'ಯ ಮೂರು ರೂಪಗಳನ್ನು ಪ್ರತಿನಿಧಿಸುತ್ತವೆ. (ಕಾಮೇಶ್ವರಿಯು ಕಾಮರೂಪಪೀಠದ ಅಧಿಷ್ಠಾತೃದೇವತೆ. ಚಂದ್ರನನ್ನು ಸಂಕೇತಿಸುವಳು. ಅವಳು 'ವಾಮಾ' ಅಥವಾ ಅಭಿವ್ಯಕ್ತಿ ಶಕ್ತಿಯನ್ನು ಹೊರಗೆಡಹುವವಳು. ಅರ್ಥಾತ್, ಬ್ರಹ್ಮನ ಸೃಷ್ಟಿ-ಶಕ್ತಿ ಮತ್ತು 'ಅವ್ಯಕ್ತ ಪ್ರಕೃತಿ'ಯನ್ನು ಪ್ರತಿನಿಧಿಸುವವಳು). ಪೂರ್ವದಿಶೆಯಲ್ಲಿ 'ವಜ್ರೇಶ್ವರಿ' 'ಪೂರ್ಣಗಿರಿಪೀಠ'ದ ಅಧಿಷ್ಠಾತೃದೇವತೆ. ಸೂರ್ಯನನ್ನು ಸಂಕೇತಿಸುವವಳು. 'ಜ್ಯೇಷ್ಠಾ' (ಪ್ರಥಮಜಾ) ವಿಷ್ಣುವಿನ ಸ್ಥಿತಿ-ಶಕ್ತಿಯನ್ನು ಹಾಗೂ ಮಹತ್ ತತ್ತ್ವವನ್ನು, ಪ್ರಜ್ಞೆಯನ್ನು ಪ್ರತಿನಿಧಿಸುತ್ತಾಳೆ. ಇವಳು ಬಲಭಾಗದಲ್ಲಿ ನೆಲೆಸಿರುವಳು, ಹಾಗೂ, 'ಭಗಮಾಲಿನಿ'ಯು ಜಾಲಂಧರ ಪೀಠದ ಅಧಿಷ್ಠಾತೃದೇವತೆ, ಅಗ್ನಿಯನ್ನು ಸಂಕೇತಿಸುವವಳು. ರುದ್ರನ ಲಯ (ಸಂಹಾರ) ಶಕ್ತಿಯನ್ನು ಅಂದರೆ ರೌದ್ರಿಯನ್ನು

ಪ್ರತಿನಿಧಿಸುತ್ತಾಳೆ.ಮತ್ತು 'ಅಹಂಕಾರ'ಕ್ಕೆ ಪರ್ಯಾಯವಾಗಿರುವಳು, ಇವಳು ಎಡಭಾಗದಲ್ಲಿ ನೆಲೆಸಿರುವಳು.



ತ್ರಿಕೋನದ ಮೂರು ಮೂಲೆಗಳು 'ವಾಕ್ಕಿನ' ಮೂರು ರೂಪಗಳನ್ನು ಅಂದರೆ, ಪಶ್ಯಂತೀ, ಮಧ್ಯಮಾ, ಮತ್ತು ವೈಖರೀ ರೂಪಗಳನ್ನು ಪ್ರತಿನಿಧಿಸುತ್ತವೆ. ಆದ್ದರಿಂದ ಈ ತ್ರಿಕೋಣಕ್ಕೆ 'ವಾಗ್ಭವ' ('ವಾಕ್ಕಿ'ನಿಂದ ಉದ್ಭವವಾಗಿರುವುದು) ಎಂದೂ ಕರೆಯಲಾಗಿದೆ. ಶಿವ-ಶಕ್ತಿ ಸಂಯೋಗವನ್ನು ಪ್ರತಿನಿಧಿಸುವ ತ್ರಿಕೋಣದ ರೂಪವು ಸಂಸ್ಕೃತದಲ್ಲಿ **ए** (ಏ) ಎಂಬ ಸಂಯುಕ್ತಸ್ವರವನ್ನು ಬರೆಯುವ ರೀತಿಯಲ್ಲಿ ಸೂಚಿತವಾಗಿದೆ. 'ಅ' ಮತು 'ಇ' ಎಂಬೆರಡು ಸ್ವರಗಳನ್ನು ಸಂಯುಕ್ತಗೊಳಿಸಿ 'ಏ' ಎಂಬ ಸ್ವರವು ರೂಪಿತವಾಗಿದೆ. 'ಅ' ಎಂಬುದು 'ಶಿವ' ಸಂಕೇತ, ಈ ಎಂಬುದು ಶಕ್ತಿ ಸಂಕೇತ.[13] ಟಿಬೇಟಿನ 'ವಜ್ರಯಾನ' ಪಂಥದ 'ಗುಹ್ಯಸಮಾಜ' ಪರಂಪರೆಯಲ್ಲಿಕೂಡ, 'ಏ' ಎಂಬ ಅಕ್ಷರವು, ತ್ರಿವಿಧ ಮುಕ್ತಿಗಳಾದ ಶೂನ್ಯತೆ, ನಿರೀಹತೆ, ಮತ್ತು ನಿರಂಜನತ್ವಗಳನ್ನು(Signless) ಒಳಗೊಳ್ಳುವ 'ವಿದ್ಯಾ-ತ್ರಿಕೋಣ'ವನ್ನು ಸಂಕೇತಿಸುವುದೆಂಬುದು ಕುತೂಹಲಕರ ಸಂಗತಿ.



ತ್ರಿಕೋನವು 'ಶೃಂಗಾತ'' ಅಂದರೆ 'ಶೃಂಗಗಳನಡುವೆ ವಿಹರಿಸುವುದು' (ಚಲಿಸುವುದು) ಎಂದೂ ಕರೆಯಲ್ಪಡುತ್ತದೆ. ಪೂರ್ವದಿಶೆಯ (ಉಪಾಸಕನಿಗೆ ಸಂಮುಖವಾಗಿರುವ) ಶೃಂಗದಲ್ಲಿ ಕೂಡುವ ರೇಖೆಗಳಲ್ಲಿರುವ ಎರಡು ಶೃಂಗಗಳು ಮತ್ತು ಅವೆರಡನ್ನೂ ಮೇಲುಗಡೆಯಲ್ಲಿ ಸ್ಪರ್ಶಿಸುವ ಅಡ್ಡರೇಖೆಯು (ಭೂಸಮಾಂತರ ರೇಖೆಯು) ಅವೆರಡರ ನಡುವಿನ ಚಲನವನ್ನು ಸೂಚಿಸುತ್ತದೆ.

ದೇವಿಯ ಮಸ್ತಕವೆಂದು ಪರಿಗಣಿಸಲಾದ ಈ ಆಕೃತಿಯು ಮಾನವ ಶರೀರದಲ್ಲಿಯ ಸಹಸ್ರಾರಕ್ಕೆ ತತ್ಸಮವಾಗಿದೆ. ನಡುವಣ ಅವಕಾಶವು ಅತ್ಯಂತ

ಪ್ರಮುಖ ತಾಂತ್ರಿಕ ಪೀಠವಾದ ಉಡ್ಡೀಯಾನ ಪೀಠವೆಂದು ಕಲ್ಪಿಸಲಾಗಿದೆ. ಈ ರೀತಿ, ದೇವಿಯು ಮೂರು ತೆರನಾಗಿ 'ತನ್ನ ನಿವಾಸದಲ್ಲಿ ನೆಲೆಸಿರುವಂತೆ' (ಕಾಮರೂಪ, 'ಪೂರ್ಣಗಿರಿ, ಮತ್ತು 'ಜಾಲಂಧರ', ಇವು, ತ್ರಿಕೋನದ ಮೂರುಬಿಂದುಗಳಿಂದ ಒಂದು ತ್ರಿಕೋಣವನ್ನು ಸೂಚಿಸುವ ಹಾಗೆ) ಮತ್ತು ಈ ಮೂರರಿಂದ ಆವೃತವಾದ ಖಾಲಿ ಅವಕಾಶದಲ್ಲಿ ಅವಳ ಅವ್ಯಕ್ತ ಆವಾಸಸ್ಥಾನವಾದ 'ಉಡ್ಡೀಯಾನ'ವನ್ನು ಪ್ರತಿನಿಧಿಸಲಾಗಿದೆ. ಕಾಮರೂಪವು ಅವಳ ಎಡಕಣ್ಣು, ಪೂರ್ಣಗಿರಿಯು ಬಲಗಣ್ಣು, ಜಾಲಂಧರವು ಭ್ರೂಮಧ್ಯ ಬಿಂದು. ಈ ಮೂರು ಅಂಗಗಳು (ಅಂಶಗಳು) ಅಸ್ತಿತ್ವದ ಮೂರು ಮೌಲಿಕ ಪ್ರವೃತ್ತಿಗಳಾದ ಇಚ್ಛಾ, ಜ್ಞಾನ ಮತ್ತು ಕ್ರಿಯಾಶಕ್ತಿಗಳನ್ನು ಸಂಕೇತಿಸುತ್ತವೆ. 'ತ್ರಿಪುರ'ವು ಕೇವಲ 'ಸಂಯುಕ್ತ' ಸ್ವಭಾವವನ್ನಷ್ಟೇ ಅಲ್ಲ, ಏಕತ್ವವುಳ್ಳ ಆಧಾರತಳವನ್ನೂ ಸೂಚಿಸುತ್ತದೆ.

ಈ ಕೇಂದ್ರವು 'ಲಯ'ವೆಂಬ ಮೂರನೆಯ ಚಕ್ರದ ಎರಡನೆಯ ಭಾಗವನ್ನು ಅಂದರೆ, 'ಸಂಹಾರ-ಸ್ಥಿತಿ'ಯನ್ನು ಸೂಚಿಸುತ್ತದೆ.

ಆದ್ಯತ್ರಿಕೋನವು ಶ್ರೀಲಲಿತೆಯ (ರಾಜರಾಜೇಶ್ವರಿಯ)ಮೂರ್ತ ರೂಪವನ್ನು ಪ್ರತಿನಿಧಿಸುವುದು. ಈ ತ್ರಿಕೋಣವನ್ನು ಸುತ್ತುವರಿದಿದ್ದ ಅಷ್ಟಕೋಣಾಕೃತಿಯು ಪಂಚ ತನ್ಮಾತ್ರೆಗಳನ್ನು (ಪೃಥ್ವಿ, ಅಪ್, ತೇಜಸ್, ವಾಯು, ಆಕಾಶ), ಪಂಚಬಾಣಗಳನ್ನೂ, ಸೂಚಿಸುತ್ತದೆ. ಪುಷ್ಪಬಾಣಗಳು ಐದು. (ಇವು ಕಾಮದ ಸಂಕೇತವೂ ಹೌದು). 'ಪಾಶ'ವು 'ರಾಗ'ವನ್ನೂ, ಅಂಕುಶವು ಕ್ರೋಧ ಅಥವಾ ದ್ವೇಷವನ್ನೂ, ಇಕ್ಷುದಂಡವು ಮನಸ್ಸನ್ನೂ ಸೂಚಿಸುತ್ತವೆ. ಇವುಗಳು ದೇವಿಯು ಧರಿಸಿದ ಆಯುಧಗಳು.

ಈ ಆದ್ಯ ತ್ರಿಕೋಣವು 'ಸತ್ತ್ವ'ವನ್ನು ಸೂಚಿಸುವ ಬಿಳಿಯ ಬಣ್ಣವುಳ್ಳದ್ದಾಗಿದೆ.

(9) ನವಮಾವರಣ : ''ಸರ್ವಾನಂದಮಯ'' ಆವರಣ :

ಇದನ್ನು ಒಂಭತ್ತನೆ 'ಆವರಣ'ವೆಂದು ಕರೆಯಲಾಗಿದೆಯಾದರೂ, ಇದು, ಆದ್ಯ ತ್ರಿಕೋಣದ (ಮತ್ತು ಇಡೀ ಶ್ರೀಚಕ್ರವಿನ್ಯಾಸದ) ಕೇಂದ್ರದ 'ಬಿಂದು'ವಾಗಿದೆ. ವಾಸ್ತವವಾಗಿ ಆದ್ಯತ್ರಿಕೋಣವು ಈ ಬಿಂದುವಿನ ವ್ಯಕ್ತರೂಪ. ದೇವಿಯ ನಿವಾಸವಾದ ಅವ್ಯಕ್ತ 'ಉದ್ಯಾನ ಪೀಠ' ಅಥವಾ 'ಮಂಡಲ'ವೆಂದರೆ ನಿಜವಾಗಿಯೂ ಈ 'ಬಿಂದು'ವೇ. (ಬಿಂದುಮಂಡಲವಾಸಿನೀ, ಮಹೋದ್ಯಾನ ಪೀಠಸ್ಥಾ).



ಬಿಂದುವಿನಲ್ಲಿ (ಬೈಂದವಸ್ಥಾನದಲ್ಲಿ) ಅಧಿಷ್ಠಾನಗೊಂಡ ದೇವತೆಯು 'ತ್ರಿಪುರಸುಂದರಿ, ಲಲಿತಾ, ಕಾಮಕಲಾ, ಪರಾಭಟ್ಟಾರಿಕಾ, ಮಹಾಕಾಮೇಶ್ವರೀ, ಅಥವಾ ಶ್ರೀವಿದ್ಯಾ. ಅವಳೇ 'ಶ್ರೀಚಕ್ರ'ದ ಸಂಪೂರ್ಣ ಸಾಮ್ರಾಜ್ಯದ ಸಾಮ್ರಾಜ್ಞಿ. - (ಶ್ರೀಚಕ್ರ ರಾಜರಾಜೇಶ್ವರೀ). ಇಲ್ಲಿ ಅವಳ ಸೇವೆಯಲ್ಲಿ ಇರುವವರು ರಹಸ್ಯಾತಿರಹಸ್ಯ ('ಪರಾಪರಾರಹಸ್ಯ') ಯೋಗಿನಿಯರು. ಕೇಂದ್ರವು ಕೆಂಪುವರ್ಣದ್ದಾಗಿದೆ; ಕಾರಣವೆಂದರೆ, ಇದು 'ಶಕ್ತಿ'ಯ ವಿಮರ್ಶಾ ರೂಪವನ್ನು ಪ್ರತಿನಿಧಿಸುತ್ತದೆ; ಅದು, ಶುದ್ಧಚೇತನವಾದ 'ಶಿವ' (ಪ್ರಕಾಶ)ವೆಂಬ ಆಧಾರತತ್ವದ ಮೇಲೆ 'ಶಕ್ತಿ'ಯು

ಪ್ರಪ್ರಥಮವಾಗಿ ಚಿಮ್ಮುವುದರ (ರಜೋಗುಣ, ಕ್ರಿಯಾಶೀಲತೆಯ) ಸಂಕೇತವಾಗಿದೆ.[14] ('ತಂತ್ರ'ದ ಕುರಿತ ಅಧ್ಯಾಯ ನೋಡಿ). ಹೀಗೆ ಕೇಂದ್ರವು, ಅನುಭವದ (ವೇದನೆಯ)ಅವಿಭಾಜ್ಯ ಆವಶ್ಯಕಗಳಾದ 'ನಾನು' (ಅಹಂ) ಮತ್ತು 'ಇದು', ('ಅದು'), ಎಂಬ ಕರ್ತೃ (ವೇದಕ), ಮತ್ತು ಭೋಕ್ತೃ, ವಸ್ತು (ವೇದ್ಯ) ಇವುಗಳ ಅರ್ಥಾತ್ 'ಶಿವ' ಮತ್ತು 'ಶಕ್ತಿ' ಇವುಗಳು ಒಂದಾಗಿರುವ ''ವಿಮರ್ಶಾ ಭೂಮಿ''ಯಾಗಿದೆ.[15]

ವಾಸ್ತವದಲ್ಲಿ, ಕೇಂದ್ರದ 'ಬಿಂದುವು' ಮೂರು ಚುಕ್ಕೆಗಳಿಂದ ಉಂಟಾದುದು. (ಬಿಂದುತ್ರಯ). ಅವು (ಅ) ಸೋಮ, ಕೆಂಪುಬಣ್ಣದ್ದು, 'ಇಡಾ'ನಾಡಿಯನ್ನು (ಮಾನವ ಶರೀರದಲ್ಲಿ ಎಡಮೂಗಿನ ಹೊರಳೆ); (ಬ) ಸೂರ್ಯ, ಬಿಳಿಬಣ್ಣದ್ದು, ಪಿಂಗಳಾನಾಡಿಯನ್ನು (ಬಲ ಹೊರಳೆ); (ಕ) ಅಗ್ನಿ, ಮಿಶ್ರ ಬಣ್ಣದ್ದು, ಸುಷುಮ್ನಾ ನಾಡಿಯನ್ನು ಪ್ರತಿನಿಧಿಸುತ್ತವೆ.[16] ಈ ಮೂರು ಚುಕ್ಕೆಗಳು ಒಂದು ತ್ರಿಕೋಣಾಕೃತಿಯಾಗುವಂತೆ ವ್ಯವಸ್ಥಿತವಾಗಿವೆ.

ಮೇಲಿನ ಚುಕ್ಕೆಯು ದೇವಿಯ ಮಸ್ತಕವನ್ನೂ, ಸಂಸ್ಕೃತ ವರ್ಣಮಾಲೆಯ 'ಅ(ಂ)ಎಂಬ ಅವಿಕಾರಿ ಅನುಸ್ವಾರವನ್ನೂ ಸೂಚಿಸುತ್ತದೆ. ಮತ್ತು ಬುಡದ ಎರಡು ಚುಕ್ಕೆಗಳು ದೇವಿಯ ಸ್ತನಗಳನ್ನು ಸೂಚಿಸುವುವು ಮತ್ತು ವಿಸರ್ಗ(ಃ)ವನ್ನು ಸೂಚಿಸುವುದು. ವಿಸರ್ಗವೆಂದರೆ ಸೃಷ್ಟಿ, ಹೊರಹೊಮ್ಮಿಸುವುದು, ಪ್ರಕ್ಷೇಪ ಎಂಬ ಅರ್ಥವೂ ಇದೆ. ಇವೆರಡೂ ಧ್ವನಿಗಳು ಕುತೂಹಲಕರವಾದಂಥವು. ಅನುಸ್ವಾರವನ್ನು ಉಚ್ಚರಿಸುವಾಗ ನಾವು ಎರಡೂ ತುಟಿಗಳನ್ನು ಮುಚ್ಚುತ್ತೇವೆ. ಹಾಗೂ ಧ್ವನಿಯು ಒಳಗಡೆ ಹೋಗುತ್ತದೆ. ವಿಸರ್ಗ(ಃ)ವನ್ನು ಉಚ್ಚರಿಸುವಾಗ ತುಟಿಗಳು ತೆರೆಯಲ್ಪಟ್ಟು, ಧ್ವನಿಯು ಹೊರಗಡೆ ಬರುತ್ತದೆ. ಮೊದಲನೆಯದು 'ಸಂಹಾರ' ಅಂದರೆ 'ಒಳಗೆಳೆದುಕೊಳ್ಳುವ' ಕ್ರಿಯೆಯನ್ನೂ, ಎರಡನೆಯದು 'ಸೃಷ್ಟಿ' ಅಂದರೆ 'ಹೊರಹೊಮ್ಮಿಸುವ' ಕ್ರಿಯೆಯನ್ನೂ ಉದಾಹರಿಸುತ್ತವೆ.

ಕೇಂದ್ರವು ಮೂರನೆಯ ಚಕ್ರದ (ಸಂಹಾರ ಚಕ್ರದ) ಕೊನೆಯ ಭಾಗವನ್ನು ಸಂಕೇತಿಸುತ್ತದೆ. - 'ಸಂಹಾರ-ಸಂಹಾರ'. ದೇವಿಯು ಸಕಲ ವ್ಯಕ್ತ ವಿಶ್ವವನ್ನೂ ತನ್ನೊಳಗೆ ಸಂಪೂರ್ಣವಾಗಿ ಒಳಗೆಳೆದು ಲೀನಗೊಳಿಸಿಕೊಂಡಿರುವ ಮತ್ತು ದ್ವೈತಭಾವದಿಂದ ಸಂಪೂರ್ಣ ಬಿಡುಗಡೆಯಾಗಿರುವ ಕಾರಣದಿಂದ, ಇದಕ್ಕೆ 'ಸರ್ವಾನಂದಮಯ'ವೆಂದು ಹೆಸರು.[18] 'ಆನಂದ'ವೆಂದರೆ ತನ್ನ ನೈಜ ಸ್ವರೂಪದಲ್ಲಿ ನೆಲೆಸಿರುವುದು (ಸ್ವರೂಪ ಪ್ರತಿಷ್ಠಾ) ಎಂದು ವ್ಯಾಖ್ಯೆ. ಮಾನವ ಶರೀರದಲ್ಲಿ ಇದು ಸಹಸ್ರಾರ ಚಕ್ರದಲ್ಲಿರುವ 'ಬ್ರಹ್ಮರಂಧ್ರ'ವನ್ನು ಸಂಬಂಧಿಸಿದೆ.

ಸಂಪೂರ್ಣ ಲಯಗೊಳಿಸಿಕೊಂಡಿರುವ ಸ್ಥಿತಿಗೆ 'ಸಮಷ್ಟಿ' (ಸಮಸ್ತಾ) ಎಂಬ ಇನ್ನೊಂದು ಪದವೂ ಇರುವುದು. ಈ ಕಾರಣದಿಂದಲೇ ಈ ಕೇಂದ್ರ 'ಬಿಂದು' ವಿನಲ್ಲಿರುವ ದೇವತೆಯ ಮಂತ್ರವು ಈ ರೀತಿ ಇದೆ :

ಹೂಂ ಶ್ರೀ ಸಮಸ್ತಾಂ ಮೂಲ ವಿದ್ಯಾಂ ಔಡ್ಡೀಯಾನ ಪೀಠೇ ಶ್ರೀ ಮಹಾತ್ರಿಪುರ ಸುಂದರೀ ದೇವಿ ಶ್ರೀಪಾದುಕಾಂ ಪೂಜಯಾಮಿ ನಮಃ ।

ಆಕರ ಸೂಚಿಕೆ

1. **ಮಿನೋಮಿ ಕ್ಷಿಪತಿ ಉಚ್ಚತ್ವಾತ್ ಇತಿ ಮೇರುಃ ।**
2. 'ದುರ್ಗತಿ ಪರಿಶೋಧನವೃತ್ತಿ'ಯ ಮೇಲೆ ಬುದ್ಧಗುಹ್ಯದ ಟಿಪ್ಪಣಿ ಮತ್ತು ಸಮಾಜ-ತಂತ್ರ, ಹೇವಜ್ರತಂತ್ರ ಹಾಗೂ ಕಾಲಚಕ್ರತಂತ್ರ ನೋಡಿ.
3. ಸೌಂದರ್ಯಲಹರಿಯ ಮೇಲೆ ಡಿಂಡಿಮಭಾಷ್ಯ - 24.
   ಸೃಷ್ಟಿಕರ್ತ್ರೀ ಬ್ರಹ್ಮರೂಪಾ ಗೋಪ್ತ್ರೀ ಗೋವಿಂದ ರೂಪಿಣೀ ।
   ಸದಾಶಿವಾನುಗ್ರಹದಾ ಪಂಚಕೃತ್ಯ ಪರಾಯಣಾ । ಮತ್ತು

ಸೃಷ್ಟಿ-ಸ್ಥಿತ್ಯುಪಸಂಹಾರ ವಿಧಾನಾನುಗ್ರಹಾತ್ಮಕಃ ಕೃತ್ಯಂ ಪಂಚವಿಧಂ ಯಸ್ಯ ತನ್ನುಮಃ ಶಾಶ್ವತಂ ಶಿವಮ್ ॥

(ಶಾಂಭವೀ ದಿಪಿಕಾ).

4. ಶ್ರೀ ಚಕ್ರಂ ಶಿವಯೋರ್ವಪುಃ (ಲಲಿತಾ ತ್ರಿಶತೀ)

5. ಚತುರ್ಭಿ ಶಿವ ಚಕ್ರೈಃ ಶಕ್ತಿಚಕ್ರಶ್ಚ ಪಂಚಭಿಃ ।
ನವ ಚಕ್ರೈಶ್ಚಸಂಸಿದ್ಧಂ ಶ್ರೀ ಚಕ್ರಂ ಶಿವಯೋರ್ವಪುಃ ॥
(ಲಲಿತಾ ತ್ರಿಶತೀ) ಮತ್ತು ಸೌಂದರ್ಯ ಲಹರೀ 1.1;, ಮತ್ತು
ಪಂಚಶಕ್ತಿ ಚತುರ್ವಹ್ನಿ ಸಂಯೋಗಾಚ್ಚಕ್ರ ಸಂಭವಃ (ಸಂಕೇತಪದ್ಧತಿ).

6. ತ್ರಿಧಾ ಚೈವ ನವಧಾ ಚೈವ ಚಕ್ರ ಸಂಕೇತಕಂ ಪುನಃ (ಯೋಗಿನೀ ಹೃದಯ 1-73)
ಮತ್ತು, ತ್ರಿಕೋಣಂ ಮಂಡಲಂ ಚಾಸ್ಯಾ ಭೂಪುರಂ ಚ ತ್ರಿರೇಖಕಮ್ ।
ಮಂತ್ರೋಽಪಿ ತ್ರ್ಯಕ್ಷರಃ ಪ್ರೋಕ್ತಃ ತಥಾರೂಪತ್ರಯಂ ಪುನಃ ॥

ತ್ರಿವಿಧಾ ಕುಂಡಲೀ ಶಕ್ತಿಃ ತ್ರಿದೇವಾನಾಂಚ ಸೃಷ್ಟಯೇ ।
ಸರ್ವತ್ರಯಂ ತ್ರಯಂ ಯಸ್ಮಾತ್ ತಸ್ಮಾತ್ತು ತ್ರಿಪುರಾಮತಾ ॥ (ಕಾಲಿಕಾ ಪುರಾಣ).

ಮತ್ತು, ನವಯೋನಿರ್ನವ ಚಕ್ರಾಣಿ ತೃಧಿರೇ ನವೈವ ಯೋಗಾನವಯೋಗಿನೀಶ್ಚ ।
ನವಾನಾಂ ಚಕ್ರೇ ಅಧಿನಾಥಸ್ಯೇನಾ ನವಮುದ್ರಾನವಬದ್ರಾಮಹೀನಾಮ್ ॥

(ತ್ರಿಪುರೋಪನಿಷತ್).

7. ತ್ರಿಕೋಣಮಷ್ಟಕೋಣಂ ಚ ದಶಕೋಣದ್ವಯಂ ತಥಾ ।
ಚತುರ್ದಶಾರಂ ಚೈತಾನಿ ಶಕ್ತಿ ಚಕ್ರಾಣಿ ಪಂಚಜ ॥

ಬಿಂದೂಷ್ಟದಲಂ ಪದ್ಮಂ ಪದ್ಮಂ ಷೋಡಶ ಪತ್ರಕಮ್ ।
ಚತುರಸ್ರ ಚ ಚತ್ವಾರಿ ಶಿವಚಕ್ರಾಣ್ಯನುಕ್ರಮಾತ್ ॥

(ಲಲಿತಾ ತ್ರಿಶತೀ, ಫಲಶ್ರುತಿ 12-14)

8. ವಾಮಾ ಜ್ಯೇಷ್ಠಾ ರೌದ್ರೀ ಚಾಂಬಿಕಯಾನುತ್ತರಾಂಶ ಭೂತಾಸ್ಯುಃ ।
ಇಚ್ಛಾಜ್ಞಾನ ಕ್ರಿಯಾ ಶಾಂತಾ ಶ್ಚೈಯಾಸ್ತಥೋತ್ತರಾವಯವಾಃ ॥

(ಕಾಮಕಲಾವಿಲಾಸ 23-24)

ಮತ್ತು 'ಆಧಾರ ನವಕಸ್ಥಾಃ ನವ ಚಕ್ರೇಣ ಪರಿಣತಿಂ ಯಾತಾಃ ।

(ಅದೇ, 47).

9. ತ್ರಿಕೋಣೇ ಬೈಂದವಂ ಶ್ಲಿಷ್ಟಂ ಅಷ್ಟಾರೋಽಷ್ಟದಲಾಂಬುಜಃ ।
ದಶಾರಂ ಯೋಃ ಷೋಡಶಾರಂ ಭುವನಂ ಭುವನಾತ್ಮಕೇ ॥

ಆರು ತೆರನಾದ ಅಂಥ ಸಂಯೋಗವಿರುವ ಕಾರಣದಿಂದಲೇ, ಆ ಆಕೃತಿಗೆ ಯೋಗಿನೀ ಎಂದು ಕರೆಯಲಾಗಿದೆ (ವಾರಿವಸ್ಯ ರಹಸ್ಯ 2-94 ನೋಡಿ),

ಶೈವನಾಮಾಪಿ ಶಾಕ್ತಾನಾಂ ಚಕ್ರಾಣಾಂ ಚ ಪರಸ್ಪರಮ್ ।
ಅವಿನಾಭಾವ ಸಂಬಂಧಂ ಯೋಜಾನಾತಿ ಸ ಚಕ್ರವಿತ್ ॥

(ಭೈರವ ಯಾಮಲ. 'ಚಂದ್ರಜ್ಞಾನವಿದ್ಯಾ').

10. ಶ್ರೀ ವಿದ್ಯಾರ್ಣವ ತಂತ್ರ

11. ಏವಮೇತಂ ಮಹಾಚಕ್ರಂ ಮಹಾಶ್ರೀ ತ್ರಿಪುರಾತ್ಮಕಮ್ (ನಿತ್ಯಾಪಟಲ)

12. ಸರ್ವಸ್ಯ ಚಕ್ರ ರಾಜಸ್ಯ ವ್ಯಾಪಿಕಾ ಪರಿಕೀರ್ತಿತಾ ।

13. ಅ-ಕಾರಃ ಪರಶಿವಃ । ತಸ್ಯ ಸಂಯೋಗ ಲಕ್ಷಣೇ ಡೀಪ್ ।
ತಯೋಃ ಸಂಯೋಗೇನ 'ಏ' - ಕಾರ ನಿಷ್ಪತ್ತಿಃ । (ಭಾಸ್ಕರ ರಾಯ).

14. ತ್ರಿಗುಣಗಳು ತಮ್ಮ ವಿಶಿಷ್ಟ ವರ್ಣಗಳನ್ನು ಹೊಂದಿವೆ. ಸತ್ತ್ವವು ಬಿಳಿ, ರಜಸ್-ಕೆಂಪು, ತಮಸ್-ಕಪ್ಪು.

15. ವೇದಕ ವೇದ್ಯಯೋಃ ಅಹಂತೇದಂತಯೋಃ ಶಕ್ತಿಶಕ್ತ್ಯೋಃ ಅಭೇದೈವ ವಿಮರ್ಶಾಭೂಮಿರೇವ ಬಿಂದುಚಕ್ರಮಿತಿ ಜ್ಞೇಯಮ್ ॥

16. ರುದ್ರಯಾಮಲ 6, 49 ನೋಡಿ. ಹೆಚ್ಚಿನ ವಿವರಗಳನ್ನು 'ತಂತ್ರ' – ಅಧ್ಯಾಯದಲ್ಲಿ ನೋಡಿ.

17. 'ವಿಸರ್ಗ'ದಲ್ಲಿ 'ಹೊರಚೆಲ್ಲುವುದು' ಎಂಬ ಭಾವವು ತೈತ್ತಿರೀಯ ಬ್ರಾಹ್ಮಣದಷ್ಟು ಹಳೆಯದು. (ಭಾವನೋಪನಿಷತ್, 27)

18. **ಸದಾನಂದಪೂರ್ಣಾ ಸ್ವಾತ್ಮೈವ ಪರಾ ದೇವತಾ** (ಭಾವನೋಪನಿಷತ್ 27).

★ ★ ★

ಅಧ್ಯಾಯ - 2

ಶ್ರೀಚಕ್ರ ಮಂತ್ರ

1. ಶ್ರೀಚಕ್ರದ ಸಾಂಕೇತಿಕತೆ

ಭಾರತೀಯ ವಿಚಾರಧಾರೆಯಲ್ಲಿ ಅತ್ಯಂತ ಸ್ವಾರಸ್ಯಕರವೂ, ದಿಗ್ಭ್ರಮೆಗೊಳಿಸುವಂಥವೂ ಆದ ಅಂಶಗಳಲ್ಲಿ 'ಭಾಷಾತತ್ವ'ಕ್ಕೆ ಸಂಬಂಧಿಸಿದುದೂ ಒಂದು. ಅಕ್ಷರಮಾಲೆಯನ್ನು ರೂಪಿಸುವ ಧ್ವನಿ-ಮಾತ್ರೆಗಳೇ ಭಾಷೆಯ ರಚನೆಗೆ ಕಾರಣವಾದ ಮೂಲದ್ರವ್ಯಗಳು. ಅ-ಕಾರದಿಂದ ಅನುಸ್ವಾರ(೦)ದ ವರೆಗಿನ ಹದಿನೈದು ಧ್ವನಿಮಾತ್ರೆಗಳು ಆಧಾರಭೂತವಾದುವೆಂದೂ, ಮತ್ತು ನಿರವಯವ, ನಿರ್ವಸ್ತುಪ್ರಜ್ಞೆ ಅರ್ಥಾತ್ 'ಶಿವ' ತತ್ವ ಅಥವಾ ಪುರುಷ ತತ್ವವೆಂದೂ ಪರಿಗಣಿಸಲಾಗಿದೆ. 'ಅ', ಈ, ಓ, ಋ, 'ಲೃ' ಈ ಐದರಿಂದ, ಐದು ವ್ಯಂಜನವರ್ಗಗಳು ಉದ್ಭವವಾಗುತ್ತವೆ : ('ಕ' ದಿಂದಾರಂಭಿಸುವ 'ಕಂಠ್ಯ', 'ಚ' ದಿಂದಾರಂಭಿಸುವ 'ಮೂರ್ಧನ್ಯ', 'ಚ'-ದಿಂದಾರಂಭಿಸುವ ಬಾಯಿಯ ಮೇಲಂಗಳದಿಂದುಂಟಾಗುವ, 'ತಾಲವ್ಯ', 'ತ' ದಿಂದಾರಂಭಿಸುವ 'ದಂತ್ಯ', 'ಪ' ದಿಂದಾರಂಭಿಸುವ 'ಓಷ್ಠ್ಯ'). 'ಕ' ವರ್ಗದ ಐದು ವ್ಯಂಜನಗಳು, ಪೃಥ್ವಿ, ಅಪ್, ತೇಜಸ್, ವಾಯು, ಆಕಾಶ ಈ ಪಂಚಮಹಾಭೂತಗಳನ್ನು, 'ಚ' ವರ್ಗದ ಐದು ವ್ಯಂಜನಗಳು ಅವುಗಳ (ಪಂಚಭೂತಗಳ) ಸೂಕ್ಷ್ಮರೂಪವಾದ 'ತನ್ಮಾತ್ರೆ'ಗಳನ್ನೂ ಪ್ರತಿನಿಧಿಸುತ್ತವೆ. 'ಟ' ವರ್ಗದ ಐದು ವ್ಯಂಜನಗಳು ಐದು ಕರ್ಮೇಂದ್ರಿಯಗಳಾದ 'ವಾಕ್ಕು', 'ಪಾಣಿ', 'ಪಾದ', 'ಉಪಸ್ಥ' ಅಥವಾ ಜನನೇಂದ್ರಿಯ ಮತ್ತು 'ಪಾಯು' ಅಥವಾ 'ಗುದ' - ಇವುಗಳನ್ನು ಸಂಕೇತಿಸುತ್ತವೆ. 'ತ' ವರ್ಗದ ಐದು ವ್ಯಂಜನಗಳು ಜ್ಞಾನೇಂದ್ರಿಯಗಳ ಸಂಕೇತ ಹಾಗೂ 'ಪ' ವರ್ಗದ ಐದು ವ್ಯಂಜನಗಳು, ಮನಸ್ಸು, ಅಹಂಕಾರ, ಬುದ್ಧಿ, ಮತ್ತು ಕ್ರಿಯೆ, ವಿಕಾರ, ಬೆಳವಣಿಗೆಗಳ ತತ್ವವಾದ 'ಪ್ರಕೃತಿ' ಎಂಬ ಸ್ತ್ರೀ-ತತ್ವ ಹಾಗೂ, ಅವ್ಯಕ್ತವಾದರೂ ಚೇತನಾತ್ಮಕವಾದ 'ಪುರುಷ' ತತ್ವ ಇವುಗಳ

ಸಂಕೇತ. ಹೀಗೆ ಈ ಇಪ್ಪತ್ತೈದು ವ್ಯಂಜನಾಕ್ಷರಗಳು ಇಪ್ಪತ್ತೈದು ತತ್ವಗಳನ್ನು ಪ್ರತಿನಿಧಿಸುತ್ತವೆ.

ಇತರ ವ್ಯಂಜನಗಳು ಈ ಐದು ವ್ಯಂಜನಗಳಿಂದ ಉದ್ಭವಿಸುತ್ತವೆ. ಅರ್ಧಸ್ವರವಾದ 'ಯ' ಮತ್ತು ಊಷ್ಮವರ್ಣವಾದ 'ಶ' ಗಳು 'ಚ'ದಿಂದ, ಅರ್ಧಸ್ವರವಾದ 'ಲ' ಮತ್ತು ಊಷ್ಮವರ್ಣವಾದ 'ಸ'ಗಳು 'ತ' ದಿಂದ, ಅರ್ಧಸ್ವರವಾದ 'ವ'ವು 'ತ' ಮತ್ತು 'ಪ'ಗಳಿಂದ ಒಟ್ಟಾಗಿ ಉಂಟಾಗಿವೆ. ಮತ್ತು ವಿಸರ್ಗದಿಂದ ಮೃದುಶ್ವಾಸವನ್ನುಳ್ಳ 'ಹ' ಕಾರವು ಉಂಟಾಗುವುದು. 'ಯ', 'ರ', 'ಲ', 'ವ' ಈ ನಾಲ್ಕು ವ್ಯಂಜನಗಳು (ಅರ್ಧಸ್ವರಗಳು) 'ರಾಗ', 'ವಿದ್ಯಾ', 'ಕಲಾ', ಮತ್ತು 'ಮಾಯಾ' ತತ್ವಗಳನ್ನು ಪ್ರತಿನಿಧಿಸುತ್ತವೆ. ಮತ್ತು 'ಶ', 'ಷ', 'ಸ', 'ಹ' ಈ ನಾಲ್ಕು ವ್ಯಂಜನಗಳು 'ಮಹಾಮಾಯಾ', 'ಶುದ್ಧವಿದ್ಯಾ', 'ಈಶ್ವರ', ಮತ್ತು 'ಸದಾಶಿವ' ಈ ತತ್ವಗಳನ್ನು ಪ್ರತಿನಿಧಿಸುತ್ತವೆ. ಒಟ್ಟಿನಲ್ಲಿ ಹದಿನೈದು ಸ್ವರಗಳೂ, ಮೂವತ್ತೈದು ವ್ಯಂಜನಗಳೂ ಸೇರಿ ಐವತ್ತು ಅಕ್ಷರಗಳು. ಇವು ಅಸ್ತಿತ್ವ, ವೇದನೆ (ಅನುಭವ)ಗಳನ್ನು, ತೋರಿಕೆ (ಮಿಥ್ಯೆ) ಮತ್ತು ಸತ್ಯಗಳನ್ನು ವ್ಯಕ್ತ (ವ್ಯಾವಹಾರಿಕ)ಹಾಗೂ ಅವ್ಯಕ್ತಗಳನ್ನೊಳಗೊಂಡ ಸಮಗ್ರ ವಿಶ್ವವನ್ನು ಒಳಗೊಳ್ಳುತ್ತವೆ (ಪ್ರತಿನಿಧಿಸುತ್ತವೆ).

ವಿಶ್ವವು, ಒಂದು ಬದಿಯಲ್ಲಿ 'ಶಿವ' ಎಂಬ ಅವ್ಯಕ್ತ ಮೂಲದ ಒಂದು ಆಯಾಮದಿಂದಲೂ, ಇನ್ನೊಂದು ಬದಿಯಲ್ಲಿ 'ಶಕ್ತಿ'-ಎಂಬ ವ್ಯಕ್ತರೂಪದ ಸೃಷ್ಟಿ ಹಾಗೂ ಸಂಹಾರಗಳ ಆಯಾಮದಿಂದಲೂ ಸಂಬಂಧ್ಧವಾಗಿದ್ದು ವರ್ಣಮಾಲೆಯ ಆದ್ಯಕ್ಷರವಾದ 'ಅ'ಕಾರ ಮತ್ತು ಅಂತ್ಯಾಕ್ಷರವಾದ 'ಹ' ಕಾರದಿಂದ ಉದಾಹೃತವಾಗಿದೆ. ಆದ್ಯಕ್ಷರವು ಶಿವನ ಚಿದಭಿವ್ಯಕ್ತಿ ಅರ್ಥಾತ್ ಪ್ರಕಾಶರೂಪವನ್ನು ಹಾಗೂ ಅಂತ್ಯಾಕ್ಷರವು 'ಶಕ್ತಿ'ಯ 'ವಿಮರ್ಶಾ' ರೂಪವನ್ನೂ ಪ್ರತಿನಿಧಿಸುತ್ತವೆ.[1] ಮೊದಲನೆಯದು 'ಮೂಲ', ಎರಡನೆಯದು 'ಪ್ರಕೃತಿ'. ವಿಶ್ವವು ಈ ರೀತಿಯಾಗಿ 'ಮೂಲ-ಪ್ರಕೃತಿ'ಯ ಅರ್ಥಾತ್ 'ದೇವಿ'ಯ ಲೀಲೆಯಾಗಿದೆ. ಮೂಲ ಪ್ರಕೃತಿಯ ಅನೇಕ ರೂಪಗಳನ್ನು ಸಂಕೇತಿಸುವ

ವರ್ಣಮಾಲಾಕ್ಷರಗಳು, ಹೀಗೆ, 'ಮಾತೆಯರಂತೆ' ಇರುವುದರಿಂದ 'ಮಾತೃಕೆಗಳು' ಎಂದು ಕರೆಯಲ್ಪಡುತ್ತವೆ.

ಆದ್ಯಸ್ವರವಾದ 'ಅ' ಮತ್ತು ಅಂತ್ಯವ್ಯಂಜನವಾದ 'ಹ', ಅದರ ಮೇಲೆ ಅವಿಕಾರಿ ನಾಸಿಕಾಕ್ಷರವಾದ ಅನುಸ್ವಾರ(ಂ)ವು ಸೇರಿದಾಗ 'ಅಹಂ' ಎಂಬ ಶಬ್ದವು - 'ನಾನು' ಎಂಬರ್ಥದ 'ಸ್ವಪ್ರಜ್ಞೆ'ಯನ್ನು ಸೂಚಿಸುತ್ತದೆ. ಅದು ಜೀವಿಗಳ ಸಮಸ್ತ ಅನುಭವ, ಅಭಿವ್ಯಕ್ತಿಜಗತ್ತನ್ನು ವ್ಯಾಪಿಸಿದೆ. ಅಂತ್ಯವ್ಯಂಜನವಾದ 'ಹ'ಕಾರವು ಅಂತ್ಯಸ್ವರವಾದ ಅನುಸ್ವಾರದೊಂದಿಗೆ ಸೇರಿಕೊಂಡಿರುವುದು 'ಪ್ರಕಾಶ'ತತ್ವದ ಪುನಃಪ್ರತಿಷ್ಠಾನವನ್ನು ಸೂಚಿಸುವುದು ಎಂಬುದು ಮಹತ್ವಪೂರ್ಣ. ಹಾಗಾಗಿ 'ಅಹಂ' ಶಬ್ದದ ಸಂಕೇತವು ಶಿವ-ಶಕ್ತಿ-ಶಿವ ಎಂದಾಗುತ್ತದೆ. ವಾಸ್ತವವಾಗಿ, ಮೃದುಸ್ವರವಾದ 'ಅ'ದಿಂದ ಅವಿಕಾರಿ ನಾಸಿಕಾಕ್ಷರವಾದ ಅನುಸ್ವಾರ(ಂ) ಅಥವಾ (ಮ್)ದ ವರೆಗೆ ಪ್ರಥಮ 'ತತ್ತ್ವ'(ಪ್ರಕಾಶ)ವೆಂದೇ ಗಣಿಸಲ್ಪಟ್ಟಿದೆ.

ಶ್ರೀವಿದ್ಯೆಯಲ್ಲಿ ವಾಚಕ (ವ್ಯಕ್ತಪಡಿಸುವ ಶಬ್ದ) ಮತ್ತು ವಾಚ್ಯ(ವ್ಯಕ್ತಗೊಳಿಸಲ್ಪಡುವ ವಸ್ತು)ಗಳಿಗೆ ವಿಭಿನ್ನವಾದ ಪ್ರತ್ಯೇಕ ಅಸ್ತಿತ್ವವಿಲ್ಲ; ಮತ್ತು ಅಭಿವ್ಯಕ್ತಿಪಡಿಸುವ ಪ್ರಜ್ಞೆ (ಚಿತ್) ಹಾಗೂ ಅಭಿವ್ಯಕ್ತವಾದ ಶಕ್ತಿ ಇವೆರಡೂ ಮೌಲಿಕವಾಗಿ ಒಂದೇ ಆಗಿವೆ. ಹಾಗಾಗಿ ಅನುಭವಗಮ್ಯ(ವೇದ್ಯ)ಜಗತ್ತು, ವರ್ಣಮಾಲೆ ಅಕ್ಷರಗಳನ್ನು ರೂಪಿಸುವ ಅಭಿವ್ಯಕ್ತಿ ಶಬ್ದಗಳಲ್ಲದೆ ಬೇರೇನಲ್ಲ. (**ವಿಶ್ವಂ ವಿದ್ಯಾऽಭಿನ್ನಮ್**). ಮೂವತ್ತಾರು ಅಕ್ಷರಗಳು (ಸ್ವರಗಳೆಲ್ಲ ಸೇರಿ ಒಂದು, ವ್ಯಂಜನಗಳು ಮೂವತ್ತೈದು), ವಿಶ್ವದ ರಚನೆ ಮತ್ತು ಕಾರ್ಯಗಳ ಹಿಂದಿರುವ ಮೂವತ್ತಾರು ತತ್ವಗಳಿಗೆ ಸಂವಾದಿಯಾಗಿವೆ. ಮೂವತ್ತೇಳನೆಯ ತತ್ವವು, ನಿಜಕ್ಕೂ ಇತರ ತತ್ವಗಳಿಗೆ ಅತೀತವಾದದ್ದಿದ್ದು (ತತ್ತ್ವಾತೀತ), ಅವ್ಯಕ್ತರೂಪದಲ್ಲಿ ಅಂತರ್ನಿಹಿತವಾಗಿದೆ. ಯಾಕೆಂದರೆ, ವಿಶ್ವದಲ್ಲಿ ವ್ಯಕ್ತಗೊಂಡ ಆ ತತ್ವಗಳಿಗೆ ಅದೇ ಆವಶ್ಯಕವಾದ ಆಧಾರಭೂಮಿಯಾಗಿದೆ.[2]

ಸ್ವರಗಳ ಸಹಾಯವಿಲ್ಲದೆ ವ್ಯಂಜನಗಳನ್ನು ಅರ್ಥಪೂರ್ಣವಾಗಿ ಉಚ್ಚರಿಸುವುದು ಅಸಾಧ್ಯ. ಆದ್ದರಿಂದ ವರ್ಣಮಾಲೆಯಲ್ಲಿ ಇರುವ ವ್ಯಂಜನಗಳು ಯಾವಾಗಲೂ ಸ್ವರಗಳೊಂದಿಗೆ ಸಂಯುಕ್ತವಾಗಿರುವುವಲ್ಲದೆ, ನಿಜವಾಗಿ ಸ್ವರಗಳನ್ನೇ ಅವಲಂಬಿಸಿವೆ - ಶಕ್ತಿಯು ಶಿವನ ಮೇಲೆ ಅವಲಂಬಿಸಿರುವಹಾಗೆ. (ಉದಾ : ಕ, ಲ ಇತ್ಯಾದಿ). ಸ್ವತಃ ಕೇವಲ 'ಬೀಜ'ದಂತಿರುವ ವ್ಯಂಜನಗಳಿಗೆ ಸ್ವರಗಳೇ ಶಕ್ತಿಯನ್ನು ಕೊಡತ್ತವೆಯೆದು ಹೇಳಲ್ಪಟ್ಟಿದೆ.[3] ಸಾಮಾನ್ಯ ಅಕ್ಷರಗಳನ್ನು 'ತಾಯಿಯಂತಿರುವ' ಮಾತೃಕಾಸ್ಥಿತಿಗೆ ರೂಪಾಂತರಗೊಳಿಸಲು ಸ್ವರಸಂಕೀರ್ಣದ ಶಕ್ತಿಯನ್ನು ಮೂವತ್ತೇಳನೆಯ (ಅವ್ಯಕ್ತವಿದ್ದರೂ ಅಸ್ತಿತ್ವದಲ್ಲಿರುವ ತತ್ತ್ವಾತೀತಕ್ಕೆ ಸಂಬಂಧಿಸಿದ) ಶಬ್ದದೊಡಗೂಡಿ ಸೇರಿಸಬೇಕಾಗುತ್ತದೆ. ಹೀಗೆ ಸೇರಿಸುವ ವಿವರಕ್ಕೆ ತಾಂತ್ರಿಕವಾಗಿ 'ಚಂದ್ರ-ಬಿಂದು', ಎಂದು ಹೇಳಲಾಗಿದೆ. ಚಂದ್ರನು, ಅನುಸ್ವಾರದತ್ತ ಸೆಳೆಯಲ್ಪಡುತ್ತಿರುವ ಹದಿನೈದು ಸ್ವರಗಳ ಒಟ್ಟಾರೆಯ ಶಕ್ತಿಯನ್ನು ಸೂಚಿಸುತ್ತಾನೆ. ಮತ್ತು ಚುಕ್ಕೆಯು ಮೂವತ್ತೇಳನೆಯ ತತ್ವವನ್ನು ಸೂಚಿಸುತ್ತದೆ. ಹದಿನೈದು ಸ್ವರಸಂಯುಕ್ತದೊಡನೆ ಚಂದ್ರನ ಸಮಾಂತರತೆಯು, ಚಂದ್ರನಿಗೆ ಹದಿನೈದು ಕಲೆಗಳು ಮತ್ತು ಅವಿಕಾರಿಯೂ ಅವ್ಯಕ್ತವೂ ಆದ ಹದಿನಾರನೆಯ ಕಲೆ ಇರುವುದೆಂಬ ವಾಸ್ತವಿಕ ಸಂಗತಿಯಿಂದ ನಿಷ್ಪನ್ನವಾಗಿದೆ.[4]

ವರ್ಣಮಾಲೆಯ ಅಕ್ಷರಗಳನ್ನು ದೈವೀತತ್ವದ (divinity) ವಿವಿಧ ಅಂಶ(ಕಲೆ)ಗಳೆಂದು ಕೂಡ ತಿಳಿಯಲಾಗುತ್ತದೆ : ಸ್ವರಗಳು ಮಸ್ತಕ, 'ಅ' ಮತ್ತು 'ಆ'ಗಳು ತಲೆಯ ಹಿಂಭಾಗ, 'ಇ' ಮತ್ತು 'ಈ' ಕಣ್ಣುಗಳು, 'ಉ', 'ಊ'ಗಳು ಕಿವಿಗಳು, ಋ ಮತ್ತು 'ೠ'ಗಳು ಮೂಗಿನ ಹೊರಳೆಗಳು, ಌ ಮತ್ತು ೡ ಗಳು ಕೆನ್ನೆಗಳು, 'ಏ' ಮತ್ತು 'ಐ'ಗಳು ಮೇಲಿನ ಮತ್ತು ಕೆಳಗಿನ ದಂತಪಂಕ್ತಿಗಳು, ಓ ಮತ್ತು 'ಔ'ಗಳು ತುಟಿಗಳು, ಅನುಸ್ವಾರವು ನಾಲಿಗೆ, ಹಾಗೂ ವಿಸರ್ಗವು ಕುತ್ತಿಗೆ. ವ್ಯಂಜನಗಳು ಶರೀರದ ಇತರ ಭಾಗಗಳಾಗಿವೆ. 'ತ' ಮತ್ತು 'ಟ' - ವರ್ಗಗಳು

ಪಾದಗಳು, 'ಪ' ಮತ್ತು 'ಫ'ಗಳು ಕಂಕುಳಗಳು, 'ಬ', 'ಭ' ಮತ್ತು 'ಮ'ಗಳು ಸ್ಪರ್ಶಸಂವೇದನೆ, ನಾಭಿ ಮತ್ತು ಹೃದಯಗಳು. ಇನ್ನುಳಿದ ವ್ಯಂಜನಗಳು ಶರೀರದೊಳಗಿನ ನರ-ನಾಡಿಗಳು.

ವಿಶ್ವವನ್ನಾಳುವ ಅತ್ಯಂತ ಮೌಲಿಕ ತತ್ವಗಳ ಜ್ಞಾನವನ್ನು ಪಡೆಯಲು, ಸ್ಪಷ್ಟರೂಪಕೊಡಲು ಮತ್ತು ತಿಳಿಯಪಡಿಸಲು ಉದ್ದೇಶಿಸಿದ ಶಬ್ದರೂಪದಲ್ಲಿ ಉಚ್ಚರಿಸಲ್ಪಟ್ಟ ಅರಿವಿಗೆ ತಾಂತ್ರಿಕ ಜ್ಞಾನಪರಂಪರೆಯಲ್ಲಿ 'ವಿದ್ಯಾ' ಎಂದು ಅಂಕಿತಗೊಳಿಸಲಾಗಿದೆ. ಮುಖ್ಯವಾಗಿ ಇದು ವರ್ಣಮಾಲೆಯ ಪ್ರತ್ಯೇಕ ಅಕ್ಷರಗಳನ್ನೂ ಮತ್ತು ಉಚ್ಚರಿತವಾದಾಗಿನ ವಿಶಿಷ್ಟ ಶಬ್ದ(ಧ್ವನಿ)ಗಳನ್ನು ಒಳಗೊಂಡಿದೆ. ಹಾಗಾಗಿ, 'ವಿದ್ಯಾ' ಎಂದರೆ ಕೇವಲ ಶಾಬ್ದಿಕ ಜ್ಞಾನಮಾತ್ರವಲ್ಲ. ಅದರ ಅಡಿಯಲ್ಲಿರುವ ಕಲ್ಪನಾಸತ್ಯವನ್ನೂ ಒಳಗೊಳ್ಳುತ್ತದೆ. ಸಾಮಾನ್ಯವಾಗಿ 'ವಿದ್ಯಾ' ಎಂಬ ಪದವು ದೇವಿಯ ಒಂದು ಅಂಶಾಭಿವ್ಯಕ್ತಿಯನ್ನು ಕುರಿತು ಬಳಸಲಾಗುತ್ತದೆ. ವಿವಿಧ ಶಬ್ದವ್ಯವಸ್ಥೆ (ವಿನ್ಯಾಸ)ಗಳೊಂದಿಗೆ ಏಕಾತ್ಮತೆಯಲ್ಲಿರುವ ಹತ್ತು ಅಂಥ ದೇವಿಯರನ್ನು (ದಶ ವಿದ್ಯಾಃ) ಕುರಿತು, ಹಾಗೂ ಅವುಗಳ ಸಾಂಕೇತಿಕತೆಯನ್ನು ಕುರಿತು 'ತಂತ್ರ'ಗಳು ಹೇಳುತ್ತವೆ : ಕಾಲಿ, ತಾರಾ, ಷೋಡಶೀ, ಭುವನೇಶ್ವರೀ, ಭೈರವಿ, ಛಿನ್ನಮಸ್ತಾ, ಧೂಮಾವತೀ, ಮಾತಂಗೀ, ಕಮಲಾ, ಬಗಲಾಮುಖಿ. - ಈ ಹತ್ತರಲ್ಲಿ ಮೊದಲ ಎರಡು 'ಮಹಾ ವಿದ್ಯೆಗಳೆಂ'ದೂ, ಮುಂದಿನ ಐದು 'ವಿದ್ಯೆ'ಗಳೆಂದೂ, ಕೊನೆಯ ಮೂರು 'ಸಿದ್ಧ ವಿದ್ಯೆ'ಗಳೆಂದೂ ವರ್ಣಿಸಲ್ಪಟ್ಟಿವೆ. ಇವುಗಳಲ್ಲಿ ಮೊದಲನೆಯ ಗುಂಪಿನ ವಿದ್ಯೆಗಳು ಮುಂದುವರಿದ ಕೆಲವೇ ಸಾಧಕರಿಗೋಸ್ಕರವೆಂದು ಹೇಳಲಾಗಿದೆ; ಎರಡನೆಯ ಗುಂಪು ಬಹುತೇಕ ಸಾಮಾನ್ಯ ಸಾಧಕರಿಗೆ, ಮತ್ತು ಮೂರನೆಯ ಗುಂಪು ಐಂದ್ರಜಾಲಿಕ ಮತ್ತು ಉಗ್ರ ಫಲಗಳನ್ನು ಬಯಸುವವರಿಗೋಸ್ಕರ ಸೂಚಿಸಲಾಗಿದೆ.

ಈ ವಿದ್ಯೆಗಳಲ್ಲಿ ಮೂರನೆಯದೇ ಶ್ರೀವಿದ್ಯೆ ಅಥವಾ ಷೋಡಶೀ ವಿದ್ಯೆ. ಯಾಕೆಂದರೆ (ಇದರಲ್ಲಿ) ದೇವಿಯ ಮಂತ್ರವು 'ಶ್ರೀ' ಎಂಬುದನ್ನೂ ಸೇರಿ ಹದಿನಾರು ಅಕ್ಷರಗಳುಳ್ಳದ್ದಾಗಿದೆ. ಇದರ ಒಂದು ಪರ್ಯಾಯ ರೂಪವು (ಶ್ರೀ ಎಂಬುದನ್ನು ಬಿಟ್ಟು) ಹದಿನೈದು ಅಕ್ಷರಗಳನ್ನು ಹೊಂದಿದೆ. ಅದಕ್ಕೆ 'ಪಂಚದಶೀ' ಎಂದು ಕರೆಯುತ್ತಾರೆ. ಈ 'ವಿದ್ಯೆ'ಯು ಸ್ವರ ಮತ್ತು ವ್ಯಂಜನಗಳ ವಿಶಿಷ್ಟ ವ್ಯವಸ್ಥೆಯನ್ನು ಮೂರು ಖಂಡ(ಭಾಗ)ಗಳಲ್ಲಿ ಹೊಂದಿದೆ. ಅವು ಈ ಪೂರ್ವದಲ್ಲಿ ಹೇಳಿದ ಮೂವತ್ತಾರು (ಪಂಚದಶಿಯಲ್ಲಿ) ಅಥವಾ ಮೂವತ್ತೇಳು (ಷೋಡಶಿಯಲ್ಲಿ) ತತ್ವಗಳನ್ನು ಸಂಕೇತಿಸುವುವಾಗಿವೆ. ಶ್ರೀಚಕ್ರದ ದೃಶ್ಯಸ್ವರೂಪಕ್ಕೆ ಇದು 'ಶಬ್ದರೂಪ'ವಾಗಿದೆ ಯೆಂಬುದನ್ನು ನಂತರ ಚರ್ಚಿಸಲಾಗುವುದು.

2. ಪಂಚದಶೀ ಮತ್ತು ಷೋಡಶೀ

ವಿಶ್ವವನ್ನು ಪೋಷಣೆಮಾಡುವ ಪ್ರಕಾಶದ ಕಿರಣ (ಕಲೆ) ಗಳಲ್ಲಿ ಮಾತೃಕಾ ಚಕ್ರವು ಅಡಕವಾಗಿದೆ : ಚಂದ್ರನ ಹದಿನಾರು ಕಲೆಗಳೇ (ಒಂದು ಪಕ್ಷದ ಹದಿನೈದು ದಿನಗಳು, ಮತ್ತು ಒಂದು ನಿರ್ವಿಕಾರ ಅವ್ಯಕ್ತ ಕಲೆ) 'ಸ್ವರ'ಗಳು, ಮತ್ತು 'ಕ'ಕಾರದಿಂದ ಇಪ್ಪತ್ತನಾಲ್ಕು ಸೂರ್ಯನ ರೂಪಗಳು ಹಾಗೂ 'ಮ' ದಿಂದ ಹತ್ತು ಅಗ್ನಿಯ ರೂಪಗಳು ಸೇರಿ, ಹೀಗೆ 'ಮಾತೃಕಾಚಕ್ರ'ವು ಮೂರು ಕ್ಷೇತ್ರ (ತ್ರಿಪುರ)ಗಳಿಂದ, ಮೂರು ಪ್ರಕಾರಗಳಿಂದ (ತ್ರಿವಿಧ) ಅಥವಾ ಮೂರು ಭಾಗಗಳಿಂದ (ತ್ರಿಖಂಡ) ಕೂಡಿದೆ.[5] ಆದ್ದರಿಂದ ಈ ತ್ರಿಪುಟಿಯನ್ನು ಸಂಕೇತಿಸುವ ದೇವಿಯು 'ತ್ರಿಪುರಾ'. ಅದು ಅವಳ ಸನ್ನಿಧಿಯನ್ನು ಸೂಚಿಸುವ ಮೂರು ಶಕ್ತಿಗಳಾದ, ಇಚ್ಛಾಶಕ್ತಿ, ಜ್ಞಾನಶಕ್ತಿ ಹಾಗೂ ಕ್ರಿಯಾ ಶಕ್ತಿಗಳ ಸಂಕೇತವೂ ಆಗಿದೆ.[6] ಜ್ಞಾನಶಕ್ತಿರೂಪದಲ್ಲಿ ಅವಳು 'ವಾಗೀಶ್ವರಿ'ಯೆಂದು ಕರೆಯಿಸಿಕೊಳ್ಳುತ್ತಾಳೆ. (ಇದಕ್ಕೆ ಸಂಬಂಧಿಸಿದ ಕ್ಷೇತ್ರಕ್ಕೆ ವಾಗೀಶ್ವರೀ ಚಕ್ರವೆಂದು ಹೆಸರು). ಕ್ರಿಯಾಶಕ್ತಿಯ ರೂಪದಲ್ಲಿ ಅವಳು ಕಾಮೇಶ್ವರಿ,

ಮತ್ತು ಆ ಕ್ಷೇತ್ರದ ಹೆಸರು 'ಕಾಮಚಕ್ರ', ಇಚ್ಛಾಶಕ್ತಿಯ ರೂಪದಲ್ಲಿ ಅವಳು ಪರಾಶಕ್ತಿ, ತತ್ಸಂಬಂಧಿತ ಕ್ಷೇತ್ರದ ಹೆಸರು ಶಕ್ತಿಚಕ್ರ.[7]

ದೇವಿಯು ಮೂರ್ತಿರೂಪದಲ್ಲಿ ಪ್ರತಿನಿಧಿಸಲ್ಪಟ್ಟಾಗ, ಮೊದಲನೆಯ ಅಂದರೆ, ಚಂದ್ರನ ಕ್ಷೇತ್ರವು ಅವಳ ಮಸ್ತಕ, ಎರಡನೆಯದಾದ ಸೂರ್ಯಕ್ಷೇತ್ರವು ಅವಳ ಕುತ್ತಿಗೆಯ ಕೆಳಗಿನ ಶರೀರಭಾಗ (ಮುಂಡ) ಮತ್ತು ಈ ಕ್ಷೇತ್ರಗಳು ಹದಿನೈದು ಮಾತೃಕೆಗಳಿಂದ ಒಡಗೂಡಿವೆ. ಅವೆಲ್ಲಕ್ಕೂ ಒಟ್ಟಾಗಿ 'ಪಂಚದಶೀ' ಎಂದು ಕರೆಯುತ್ತಾರೆ. ನವಾವರಣ ಯಂತ್ರವೇ ಹೇಗೆ ದೇವಿಯ ಶರೀರವೋ ಅಂತೆಯೇ 'ಪಂಚದಶಿ'ಯು (ಅಥವಾ, ಮತ್ತೊಂದು ಬೀಜಾಕ್ಷರ 'ಶ್ರೀ' ಸೇರಿ ಷೋಡಶಿ) ದೇವಿಯ ಮಂತ್ರ ಮಾತ್ರವಲ್ಲ, ಅದೇ ಸಾಕ್ಷಾತ್ 'ದೇವಿ'. ಈ ಮಂತ್ರದ ಉಗಮವು 'ಸಾಂಖ್ಯಾಯನ ಶ್ರುತಿ'ಯಷ್ಟು ಪ್ರಾಚೀನವಾದುದೆಂದು ಕಂಡುಬಂದಿದೆ.

ಈ ಮಂತ್ರದ ವಿನಿಯೋಗವನ್ನು ಪ್ರತಿಪಾದಿಸುವ ಪರಂಪರೆಯು ಹನ್ನೆರಡು ಆದ್ಯ ಪ್ರವರ್ತಕರನ್ನು ಹೆಸರಿಸುತ್ತದೆ : ಮೇರು, ಚಂದ್ರ, ಕುಬೇರ, ಲೋಪಾಮುದ್ರಾ, ಮನ್ಮಥ, ಅಗಸ್ತ್ಯ, ನಂದಿ, ಸೂರ್ಯ, ವಿಷ್ಣು, ಸ್ಕಂದ, ಶಿವ ಮತು ದೂರ್ವಾಸ (ಕ್ರೋಧ ಭಟ್ಟಾರಕ). ಇವುಗಳಲ್ಲಿ ಲೋಪಾಮುದ್ರಾ, ಅಗಸ್ತ್ಯ, ಮತ್ತು ದೂರ್ವಾಸ ಇವರನ್ನು ಹೊರತುಪಡಿಸಿ ಅನೇಕ ಹೆಸರುಗಳು ಐತಿಹಾಸಿಕ ವ್ಯಕ್ತಿಗಳನ್ನು ಸೂಚಿಸುವುದಿಲ್ಲ. ಈ ಮಂತ್ರದ ವಿಭಿನ್ನ ಪಾಠಗಳು ಧರ್ಮರಾಜ, ಅಗ್ನಿ, ನಾಗರಾಜ, ಬುಧ, ಬ್ರಹ್ಮ, ಈಶಾನ, ರತಿ, ಜೀವ ಮತ್ತು ವರುಣ ಮುಂತಾದ ಇತರರಿಂದ ಕಲಿಸಲ್ಪಟ್ಟಿದ್ದೆಂದು ಹೇಳಲಾಗಿದೆ. ಈ ಪಾಠಭೇದಗಳು ಇವೆಯಾದರೂ ಅವು ಪ್ರಚಲಿತವಿಲ್ಲ, ಕೇವಲ ಅಗಸ್ತ್ಯ ಪ್ರಣೀತ ('ಕಾದಿ'-ಪಾಠ), ಮತ್ತು ಅವನ ಹೆಂಡತಿ ಲೋಪಾಮುದ್ರೆಯದೆಂದು ಹೇಳಲಾದ ('ಹಾದಿ'-ಪಾಠ) ಪಾಠಗಳು ಮಾತ್ರ ಜನಪ್ರಿಯವಾಗಿ ಪ್ರಚಲಿತವಾಗಿವೆ. ಎಲ್ಲ ಪಾಠಗಳೂ ಸಾಂಖ್ಯಾಯನ ಶ್ರುತಿಯಲ್ಲಿ ಇರುವ ಸ್ತವವನ್ನು ತಮ್ಮ ಅಧಿಕೃತ ಮೂಲವಾಗಿ ಸ್ವೀಕರಿಸಿವೆ.

ಮೇಲೆ ಹೇಳಿದ ಸ್ತವವು ಹದಿನೈದು ಅಕ್ಷರಗಳ ಮಂತ್ರವನ್ನು 'ಕೂಟ'ಗಳು ಅಥವಾ 'ಖಂಡ'ಗಳು ಎಂದು ಕರೆಯಲಾದ ಮೂರು ಭಾಗಗಳಲ್ಲಿ ಪ್ರಸ್ತುತಪಡಿಸುತ್ತದೆ :

1) ಕ ಏ ಈ ಲ । ಹ್ರೀಂ ।

2) ಹ ಸ ಕ ಹ ಲ । ಹ್ರೀಂ ।

3) ಸ ಕ ಲ । ಹ್ರೀಂ ।

'ಕ' ದಿಂದ ಆರಂಭವಾಗುವ ಈ ಪಾಠವು 'ಕಾ-ದಿ ವಿದ್ಯಾ' ಎಂದು ಕರೆಯಲ್ಪಡುತ್ತದೆ. ಕೆಲವು ಅಕ್ಷರಗಳನ್ನು ಕೈಬಿಟ್ಟು, ತುಸು ಬೇರೆ ರೀತಿಯಲ್ಲಿ ಅಕ್ಷರ ವ್ಯವಸ್ಥೆಯಿರುವ ಇನ್ನೊಂದು ಪಾಠವೂ ಇದೆ :

1) ಹ ಸ ಕ ಲ । ಹ್ರೀಂ ।

2) ಹ ಸ ಕ ಹ ಲ । ಹ್ರೀಂ ।

3) ಸ ಕ ಲ । ಹ್ರೀಂ ।

ಮಂತ್ರದ ಈ ಪರ್ಯಾಯ ಪಾಠವು 'ಹ' - ಕಾರದಿಂದ ಆರಂಭವಾಗುವುದಾದ್ದರಿಂದ ಇದು 'ಹಾ-ದಿ ವಿದ್ಯಾ' ಎಂದು ಕರೆಯಲ್ಪಡುತ್ತದೆ. ಇವೆರಡರಲ್ಲಿ ಮೊದಲನೆಯದು 'ಕಾಮ'ನಿಂದ ಪ್ರಚುರಪಡಿಸಲಾಯಿತೆಂದು ಹೇಳಲಾಗಿದೆ. ಇದು, ಪರಮಶಿವ, ದೂರ್ವಾಸ, ಹಯಗ್ರೀವ ಮತ್ತು ಅಗಸ್ತ್ಯ - ಈ ಗುರುಪರಂಪರೆಗೆ ಅಂಕಿತವಾಗಿದೆ. ಮತ್ತು ದೇಶಾದ್ಯಂತ ಹೆಚ್ಚು ಜನಪ್ರಿಯವಾಗಿದೆ. 'ತಂತ್ರರಾಜ ತಂತ್ರ' ಮತ್ತು 'ವಾಮಕೇಶ್ವರ ತಂತ್ರ' ಇವು ಇದರ ಮುಖ್ಯ ಪ್ರಮಾಣಗ್ರಂಥಗಳು. ಎರಡನೆಯ ಪಾಠವು ಅಗಸ್ತ್ಯನ ಹೆಂಡತಿ 'ಲೋಪಾಮುದ್ರೆ'ಯಷ್ಟು ಪ್ರಾಚೀನ. ಮತ್ತು, ಕೇರಳದಲ್ಲಿ ಹೆಚ್ಚು ಪ್ರಚಲಿತವಿತ್ತು. ಈ ಪರಂಪರೆಯು 'ತ್ರಿಪುರೋಪನಿಷತ್'ನ್ನು ಮುಖ್ಯವಾಗಿ ಆಧರಿಸಿದೆ. 'ಕಾ-ದಿ'

ಪರಂಪರೆ ಹೆಚ್ಚು ಪುರಾತನವಷ್ಟೇ ಅಲ್ಲ, ಅದು ಹೆಚ್ಚು ಮಹತ್ವವನ್ನುಳ್ಳದ್ದೆಂದು ನಂಬಲಾಗಿದೆ.[10]

ಪ್ರಯೋಗಿಸಲ್ಪಡಬೇಕಾದ ಉದ್ದಿಷ್ಟ ಅಂತರಾರ್ಥವನ್ನು ಅವಲಂಬಿಸಿ, ಈ ಮಂತ್ರದ ಹಲವೊಂದು ಬೇರೆ ಪಾಠಗಳೂ ಇವೆ. ಮಧ್ಯಯುಗೀನ ಕೆಲವು ಗ್ರಂಥಗಳಲ್ಲಿ 'ಪಂಚಸುಂದರೀ' ಎಂದು ಕರೆಯಲಾದ ಐದು ರೀತಿಯ ಪಾಠಗಳ ಗುಂಪು ಪ್ರಚಲಿತವಿದ್ದಿರುವುದು ಕಂಡುಬರುತ್ತದೆ.

1) ಶಾಬ್ದಿಕ ಸಂವಹನೆಗೆ (ಭಾಷಾ)

ಹ ಕ ಲ ಸ । ಹ್ರೀಂ । ಕ ಹ ಲ ಸ । ಹ್ರೀಂ । ಕ ಲ ಸ ಹ । ಹ್ರೀಂ ।

2) ಸೃಷ್ಟಿ :

ಹ ಸ ಕ ಲ । ಹ್ರೀಂ । ಹ ಲ ಕ ಹ ಸ । ಹ್ರೀಂ । ಸ ಕ ಲ । ಹ್ರೀಂ ।

3) ಸ್ಥಿತಿ :

ಹ ಲ ಕ ಸ । ಹ್ರೀಂ । ಕ ಸ ಹ ಲ । ಹ್ರೀಂ । ಕ ಹ ಸ ಲ । ಹ್ರೀಂ ।

4) ಸಂಹೃತಿ :

ಹ ಲ ಕ ಸ । ಹ್ರೀಂ । ಕ ಸ ಹ ಲ । ಹ್ರೀಂ । ಹ ಹ ಕ ಲ । ಹ್ರೀಂ ।

5) ನಿರಾಖ್ಯ : (Indeterminate State)

ಲ ಕ ಸ । ಹ್ರೀಂ । ಸ ಹ ಕ ಲ । ಹ್ರೀಂ । ಹ ಸ ಸ ಹ ಕ । ಹ್ರೀಂ ।

ಮನಸ್ಸಿನ ಎಲ್ಲ ವೃತ್ತಿಗಳನ್ನು ಸಮಾಹಾರಗೊಳಿಸಿ (ಒಳತೆಗೆದುಕೊಂಡು) ಅದರ ಸಾಮಾನ್ಯ ಕ್ಷೇತ್ರದಲ್ಲಿ ನಿಷ್ಕ್ರಿಯವಾಗಿಟ್ಟು, ಅಧ್ಯಾತ್ಮ ಸಾಧನೆಯಲ್ಲಿ ಮಾತ್ರ

ಕ್ರಿಯಾಶೀಲವಾಗಿಡುವುದಕ್ಕೋಸ್ಕರ ಉದ್ದಿಷ್ಟವಾದ 'ಉನ್ಮನೀ' ಎಂಬ ಇನ್ನೊಂದು ಪಾಠವೂ ಇದೆ.

ಕ ಏ ಇ ಲ । ಹ್ರೀಂ । ಹ ಕ ಹ ಲ । ಹ್ರೀಂ । ಹ ಸ ಕ ಲ । ಹ್ರೀಂ ।

ಆದೇನೇ ಇದ್ದರೂ, ಸಾಮಾನ್ಯ ಸಾಧಕ ವರ್ಗದಲ್ಲಿ ಕೇವಲ 'ಕಾ-ದಿ' ಮತ್ತು 'ಹಾ-ದಿ' ಪಾಠಗಳು ಮಾತ್ರ ರೂಢಿಯಲ್ಲಿವೆ. ಇವೆರಡರಲ್ಲಿರುವ ಮುಖ್ಯವಾದ ಅಂತರವೆಂದರೆ, ಕ್ರಿಯಾತ್ಮಕ (ಪರಿಣಾಮಕಾರಿ) ಅಕ್ಷರಗಳ ಪ್ರಯೋಗದ ಸಂಖ್ಯೆಯಲ್ಲಿರುವ ವ್ಯತ್ಯಾಸ. ಪುನರುಚ್ಚಾರಗೊಳ್ಳುವ ಅಕ್ಷರಗಳನ್ನು ಹೊರತುಪಡಿಸಿದರೆ, 'ಕಾ-ದಿ' ಪಾಠದಲ್ಲಿ ಕ, ಏ, ಈ, ಲ ಹ್ರೀಂ, ಹ, ಸ ಎಂಬ ಏಳು ಅಕ್ಷರಗಳಿವೆ. 'ಹಾ-ದಿ' ಪಾಠದಲ್ಲಿ 'ಹ, ಸ, ಕ, ಲ, ಹ್ರೀಂ' ಎಂಬ ಐದು ಅಕ್ಷರಗಳು ಮಾತ್ರ ಇವೆ. ಎರಡನೆಯದರಲ್ಲಿ 'ಏ,ಈ' ಎಂಬೆರಡು ಅಕ್ಷರಗಳು ಲುಪ್ತವಾಗಿವೆ. ಆದರೆ ಇವೆರಡೂ ಅಕ್ಷರಗಳು ಬಹಳ ಮುಖ್ಯವೆಂದು 'ಕಾದಿ' ಸಂಪ್ರದಾಯದ ಅಭಿಪ್ರಾಯ. ಆ ಕಾರಣದಿಂದ, 'ಶ್ರೀವಿದ್ಯೆ'ಗೆ ಸಂಬಂಧಿಸಿದ ಗ್ರಂಥಗಳಲ್ಲಿ ಅತ್ಯಂತ ಮಹತ್ವವುಳ್ಳ ಗ್ರಂಥಗಳಲ್ಲಿ ಒಂದೆನಿಸಿದ ''ಲಲಿತಾ ತ್ರಿಶತಿ-ಸ್ತೋತ್ರ''ದಲ್ಲಿ 'ಕಾದಿ' - ಸಂಪ್ರದಾಯಕ್ಕೆ ಹೆಚ್ಚಿನ ಮನ್ನಣೆ ನೀಡಲಾಗಿದೆ.[11]

ಪಂಚದಶೀ ಮಂತ್ರದ ಮೂರು ಖಂಡಗಳಲ್ಲಿ ಯಾವುದೊಂದಕ್ಕಿಂತ ಇನ್ನೊಂದಕ್ಕೆ ಆದ್ಯಮಹತ್ವವನ್ನು ನೀಡುವ ದೃಷ್ಟಿಕೋನವೂ ಒಂದಿದೆ. ಕಾಲೀಕ್ರಮ (ಅದಕ್ಕೆ ಕುಂಡಲೀಕ್ರಮವೆಂದೂ ಹೆಸರಿದೆ)ವೆಂಬುದರಲ್ಲಿ ಕ ಏ ಈ ಲ । ಹ್ರೀಂ । (ಅಂದರೆ ಕಾ-ದಿ ವಿದ್ಯೆಯ ರೀತಿಯಲ್ಲಿ) ಮಂತ್ರವು ಆರಂಭಗೊಳ್ಳುತ್ತದೆ. ಇದರಲ್ಲಿ ದೇವಿಯ ಮಂಗಳಕರ, ಜ್ಞಾನ ಸಂಬದ್ಧವಾದ 'ಸತ್ತ್ವ'ವು ಅಂತರ್ಗತವಾಗಿದೆ. ''ಪಂಚ ಸಂಧ್ಯಾ'' ಅನುಷ್ಠಾನ ವಿಧಿಯ ರೀತಿಯಲ್ಲಿ ಹೇಳುವುದಾದರೆ, 'ಕಾಮ-ಕಲಾ-ಕಾಲೀ' ಎಂದು ಉಷಃಕಾಲದಲ್ಲಿಯೂ, 'ಭುವನೇಶ್ವರೀ' ಎಂದು ಮಧ್ಯಾಹ್ನದಲ್ಲಿಯೂ, 'ಚಾಮುಂಡಾ' ಎಂದು ಸಾಯಂ ಸಂಧ್ಯೆಯಲ್ಲಿಯೂ,

'ಸಮಯ ಕುಬ್ಜಿಕಾ' ಎಂದು ಮಧ್ಯರಾತ್ರಿಯಲ್ಲಿಯೂ ಮಂತ್ರವು ಆರಾಧಿಸಲ್ಪಡುತ್ತದೆ. ಗೃಹಸ್ಥರಿಗೆ ಇದು ಅತ್ಯಂತ ಪ್ರಶಸ್ತವಾದುದೆನ್ನಲಾಗಿದೆ. 'ತಾರಾಕ್ರಮ' ಅಥವಾ 'ಸಮವರೋಧಿನೀಕ್ರಮವೆಂದೂ ಕರೆಯುವ ಪದ್ಧತಿಯಲ್ಲಿ ಮಂತ್ರವು 'ಸ, ಕ, ಲ । ಹ್ರೀಂ ।' ಎಂಬ ಖಂಡದಿಂದ ಆರಂಭವಾಗುತ್ತದೆ. ಆ ಕಾರಣ ಇದಕ್ಕೆ 'ಸಾ'ದಿ ವಿದ್ಯೆಯೆಂದೂ ಕರೆಯಲಾಗಿದೆ. ಇದರಲ್ಲಿ ದೇವಿಯ ಕ್ರಿಯಾತ್ಮಕ, ಗತಿಶೀಲ 'ರಜಸ್'ನ (ರಜೋಗುಣ) ಅಂಶಕ್ಕೆ ಮಹತ್ವನೀಡಲಾಗಿದೆ. 'ಪಂಚಸಂಧ್ಯಾ' ವಿಧಿಯನ್ನನುಸರಿಸಿ, 'ದಕ್ಷಿಣಕಾಲೀ' (ಅಥವಾ ಅನಿರುದ್ಧ ಸರಸ್ವತೀ) ಎಂದು ಉಷಃಕಾಲದಲ್ಲಿಯೂ, 'ತಾರಾ' ಎಂದು ಮಧ್ಯಾಹ್ನದಲ್ಲಿಯೂ, 'ಬಾಲಾ' ಎಂದು ಸಾಯಂಸಂಧ್ಯೆಯಲ್ಲಿಯೂ, ಜ್ಞಾನ ಸರಸ್ವತೀ ಎಂದು ರಾತ್ರಿಯಲ್ಲಿಯೂ ಹಾಗೂ 'ಸಾದಿ ಪಂಚದಶೀ' ಎಂದು ಮಧ್ಯರಾತ್ರಿಯಲ್ಲಿಯೂ ಮಂತ್ರಾನುಷ್ಠಾನವನ್ನು ಮಾಡಲಾಗುತ್ತದೆ. ಮೂರನೆಯದು 'ಸುಂದರೀ ಕ್ರಮ' (ಅಥವಾ 'ಹಂಸಕ್ರಮ'ವೆಂದೂ ಕರೆಯುವರು). ಇದು 'ಹ ಸ ಕ ಹ ಲ । ಹ್ರೀಂ । ದಿಂದಾರಂಭಿಸಿ, 'ಹಾದಿ'ಕ್ರಮವೆಂದೆನಿಸಿದೆ. ಇದು ದೇವಿಯ 'ತಮಸ್' (ತಮೋಗುಣ) ಅಂಶಕ್ಕೆ ಪ್ರಾಧಾನ್ಯ ನೀಡುತ್ತದೆ. 'ಆದ್ಯಾ-ಕಾಲೀ' ಎಂದು ಉಷಃಕಾಲದಲ್ಲಿಯೂ, 'ತಾರಾ' ಎಂದು ಮಧ್ಯಾಹ್ನದಲ್ಲಿಯೂ, 'ಛಿನ್ನಮಸ್ತಾ' ಎಂದು ಸಾಯಂಕಾಲದಲ್ಲಿಯೂ 'ಬಗಲಾಮುಖೀ' ಎಂದು ರಾತ್ರಿಯಲ್ಲಿಯೂ, ಮತ್ತು 'ಹಾದಿ ಪಂಚದಶೀ' ಎಂದು ಮಧ್ಯರಾತ್ರಿಯಲ್ಲಿಯೂ ಪೂಜಿಸಲಾಗುತ್ತದೆ. ಈ ಕೊನೆಯದು ಕಾಳಯಕ್ಷಿಣಿ 'ಮಾಟ', ಭೂತೋಚ್ಚಾಟನೆಗಳು ಇತ್ಯಾದಿಗಳಲ್ಲಿ ತೊಡಗಿಕೊಂಡವರಿಗೆ ಸೂಕ್ತವೆನ್ನಲಾಗಿದೆ. ಗೃಹಸ್ಥರಿಗೆ 'ತಾರಾ' ಮತ್ತು 'ಸುಂದರೀ' ಕ್ರಮಗಳು ನಿಷಿದ್ಧ.

ಇಲ್ಲಿಯ ವರೆಗೆ ಹೇಳಿದುದು 'ಪಂಚದಶೀ' ಎಂದು ಕರೆಯಲಾದ, ಹದಿನೈದು ಅಕ್ಷರಗಳುಳ್ಳ ಶ್ರೀವಿದ್ಯಾಮಂತ್ರವನ್ನು ಕುರಿತಾಯಿತು. ಆದರೆ ಇದಕ್ಕೂ ಪ್ರಾಚೀನವಾದ ಸಂಪ್ರದಾಯವು ಹದಿನಾರು ಅಕ್ಷರಗಳುಳ್ಳ (ಆಲಂಕಾರಿಕವಾಗಿ ಹದಿನಾರು ವರ್ಷದ

ಯುವತಿಯೆಂದು ವರ್ಣಿಸಲಾದ) 'ಷೋಡಶೀ' ಮಂತ್ರವನ್ನೇ ನಿಜವಾದ 'ಶ್ರೀವಿದ್ಯೆ'ಯೆಂದು ಹೇಳುತ್ತದೆ.[12]

ಇದು 'ವಿದ್ಯೆ'ಗಳಲ್ಲಿಯೇ ಶ್ರೇಷ್ಠತಮವಾದುದಲ್ಲದೆ, ಅತ್ಯಂತ 'ರಹಸ್ಯ'ವೆಂದೂ ಹೇಳಲ್ಪಟ್ಟಿದೆ : ''ನೀವು ಸಾಯಿಸಿಬಿಡಲಾಗುವ ಭಯಕ್ಕೀಡಾದಾದರೂ ಕೂಡ, ಈ 'ಷೋಡಶೀ ವಿದ್ಯೆಯನ್ನು' ಅನಧಿಕಾರಿಗಳಿಗೆ (ಅನರ್ಹರಿಗೆ) ನೀಡಕೂಡದು''. ತನ್ನ ಮರ್ಮಾಂಗವನ್ನು ಮುಚ್ಚಿಡುವಂತೆ ಈ ವಿದ್ಯೆಯನ್ನು ರಹಸ್ಯವಾಗಿ ಕಾಪಿಡಬೇಕು. ನೀರಿನಲ್ಲಿ ಉಪ್ಪು ಕರಗಿ ಲೀನವಾಗಿಹೋದಂತೆ, ಭಕ್ತನ ಮನಸ್ಸು ಗುರುವಿನ ಪಾದಗಳಲ್ಲಿ ಲೀನವಾಗಿ ಹೋದಾಗ ಈ ಮಹತ್ತರವಾದ ಷೋಡಶೀ ವಿದ್ಯೆಯನ್ನು ಶಿಷ್ಯನಿಗೆ ಕೃಪಾಪೂರ್ವಕವಾಗಿ ಉಪದೇಶಿಸತಕ್ಕದ್ದು.[13] ಈ ವಿದ್ಯೆಯು ಸಕಲ ವೇದ, ಶಾಸ್ತ್ರ, ಪುರಾಣ ಮತ್ತು ಯಮಳ ಗ್ರಂಥಗಳ ಗೂಢ ಅಂತಃಸಾರವೇ ಆಗಿದೆ.[14]

ಆದರೆ, 'ಷೋಡಶೀ' ಮಂತ್ರವು ಪಂಚದಶಿಯದೇ ಆದ ಅಕ್ಷರಗಳನ್ನು ಅದೇ ಕ್ರಮದಲ್ಲಿ ಹೊಂದಿದ್ದು, ವ್ಯತ್ಯಾಸವೆಂದರೆ, ಕೊನೆಯಲ್ಲಿ ಸಂಪತ್ಸೂಚಕವಾದ, 'ಶ್ರೀಂ' ಎಂಬ ಬೀಜಾಕ್ಷರವನ್ನು ಹೊಂದಿರುವುದು.[15] ಅದರ ಸ್ವರೂಪವು ಇಂತಿದೆ :

ಓಂ । ಕ ಏ ಈ ಲ । ಹ್ರೀಂ । ಹ ಸ ಕ ಸ ಲ । ಹ್ರೀಂ । ಸ ಕ ಲ । ಹ್ರೀಂ । ಶ್ರೀಂ ।

ಹೀಗಿರುವುದರಿಂದ ಮಂತ್ರದ ಸ್ವಭಾವವು (ಸ್ವರೂಪವು) ಮಹತ್ವಪೂರ್ಣ ವ್ಯತ್ಯಾಸವನ್ನು ಪಡೆಯುತ್ತದೆ. ಪಂಚದಶಿಯಲ್ಲಿ ಮೂರು ಖಂಡಗಳಿವೆಯಾದರೆ, ಇಲ್ಲಿ ನಾಲ್ಕು ಖಂಡಗಳಿವೆ. 'ಶ್ರೀಂ' ಎಂಬುದೇ, 'ತುರೀಯ ಖಂಡ'ವೆಂಬ ಹೆಸರಿನ ಒಂದು ಖಂಡವಾಗುತ್ತದೆ. ಪಂಚದಶಿಯಲ್ಲಿ ಈ ನಾಲ್ಕನೆಯ ಖಂಡವು ಸೂಕ್ಷ್ಮ ಅಥವಾ 'ಅವ್ಯಕ್ತ'ವಾಗಿದೆ, ಆದರೆ ಇಲ್ಲಿ 'ಷೋಡಶಿ'ಯಲ್ಲಿ ಅದು ಸ್ಪಷ್ಟ ವ್ಯಕ್ತವಿದೆ.[16] ಹೀಗೆ, ಪಂಚದಶಿಯಲ್ಲಿ ವ್ಯಕ್ತವಾದ ಮೂವತ್ತಾರು ತತ್ವಗಳ ಬದಲಿಗೆ, ಷೋಡಶಿಯು 'ತತ್ವಾತೀತ'ವನ್ನು ಅಥವಾ, ''ಮೂವತ್ತೇಳನೆಯದೆನ್ನುವ ತತ್ವವನ್ನು ಹೇಳುತ್ತದೆ''.[17]

'ಶ್ರೀವಿದ್ಯಾ' ಎಂಬ ಅಭಿಧಾನವೇ 'ಶ್ರೀ' ಅಕ್ಷರದಿಂದ ಅಭಿಪ್ರೇತವಾದ ಈ ಆತ್ಯಂತಿಕವಾದ, ಆದರೆ ಸರ್ವವ್ಯಾಪಕವಾದ ತತ್ತ್ವದ ಮಹತ್ವವನ್ನು ಸೂಚಿಸುವುದು.

ದೇವಿಗೆ, ಚಂದ್ರನಿಗೆ ಒಂದು ಪಕ್ಷದಲ್ಲಿರುವ ಹದಿನೈದು ಕಲೆಗಳಿಗೆ ಸಂವಾದಿಯಾದ, ಹದಿನೈದೇ ಕಲೆಗಳುಂಟು, ಆದರೆ, 'ಷೋಡಶೀ' ಮಂತ್ರವು ಸೂಚಿಸುವ ಹದಿನಾರನೆಯ ಕಲೆಯು, ಅವಳ ಸಚ್ಚಿದಾನಂದ ಸ್ವರೂಪದ ಸಮಗ್ರತೆಯಾಗಿದ್ದು ಎಲ್ಲಾ ಕಲೆಗಳಲ್ಲಿಯೂ ವ್ಯಾಪಿಸಿಕೊಂಡಿದೆ.[18] ಪಂಚದಶಿಯು ಕೂಡ ಈ ಅವ್ಯಕ್ತ ಕಲೆಯನ್ನು ಗಣನೆಗೆ ತೆಗೆದುಕೊಂಡಿದೆ. ಆದರೆ, ಸ್ಪಷ್ಟ ವ್ಯಕ್ತ ಅಭಿವ್ಯಕ್ತಿಯಾಗಿ ಅಲ್ಲ, ಕೇವಲ ಅಂತರ್ಗತ ಸೂಚ್ಯಾರ್ಥವಾಗಿ ಮಾತ್ರ. ಪಂಚದಶೀ ಮಂತ್ರದ ವಿವರಣೆಯು, ತುರೀಯ ಖಂಡವನ್ನು ಯಾವುದೇ ಅಕ್ಷರಕ್ಕೆ ಅನ್ವಯಿಸಿ ಹೇಳದಿದ್ದರೂ, ಯಾವಾಗಲೂ ಗಣನೆಗೆ ತೆಗೆದುಕೊಂಡೇ ಇರುತ್ತದೆ.

ಪಂಚದಶೀ ಮಂತ್ರದ ವಿಸ್ತೃತರೂಪಗಳೂ ಇವೆ. ಉದಾಹರಣೆಗೆ, 'ರುದ್ರಯಾಮಲ' ಗ್ರಂಥದಲ್ಲಿ ಹದಿನೇಳು ಅಕ್ಷರಗಳುಳ್ಳ, ಅಂತ್ಯದಲ್ಲಿ 'ಹಂಸ' ಎಂಬ ಪದದಿಂದೊಡಗೂಡಿದ 'ಸಪ್ತದಶಾವಿದ್ಯೆ'; ಪ್ರಥಮ ಖಂಡದ ಆದಿಯಲ್ಲಿ ಐಂ, ದ್ವಿತೀಯ ಖಂಡದ ಆದಿಯಲ್ಲಿ ''ಹ್ರೀಂ'', ತೃತೀಯ ಖಂಡದ ಆದಿಯಲ್ಲಿ 'ಶ್ರೀಂ' ಸೇರಿಸಿದ 'ಕಾಮರಾಜ ಅಷ್ಟಾದಶ ವಿದ್ಯಾ' (ಐಂ ಕ ಏ ಲ ಹ । ಹ್ರೀಂ । ಹ್ರೀಂ ಹ ಸ ಕ ಹ ಲ । ಹ್ರೀಂ । ಶ್ರೀಂ ಸ ಕ ಲ । ಹ್ರೀಂ ಶ್ರೀಂ ॥); 'ಸಿದ್ಧಯಾಮಲದ' ಇಪ್ಪತ್ತೊಂದು ಅಕ್ಷರಗಳುಳ್ಳ ಮಂತ್ರ (ಕ ಏ ಈ ಲ । ಹ್ರೀಂ । ಹ ಸ ಕ ಹ್ರೀಂ ಲ । ಹ್ರೀಂ । ಸ ಕ ಲ । ಹ್ರೀಂ । ಸ್ತ್ರೀಂ ಐಂ ಕ್ರೌಂ ಕ್ಲಾಂ । ಹೂಂ ॥) ಮತ್ತು ಮೂವತ್ತೇಳು ಅಕ್ಷರಗಳುಳ್ಳ ''ಪರಾವಿದ್ಯಾ'' :

ಓಂ । ಐಂ ಕ್ಲೀಂ ಸೌಃ । ಕ ಏ ಲ ಹ ಹ್ರೀಂ । ಸೌಃ ಕ್ಲೀಂ ಐಂ ।

ಓಂ । ಐಂ ಕ್ಲೀಂ ಸೌಃ । ಕ ಸ ಕ ಹ ಲ ಹ್ರೀಂ । ಸೌಃ ಕ್ಲೀಂ ಐಂ ।

ಓಂ । ಐಂ ಕ್ಲೀಂ ಸೌಃ । ಸ ಕ ಲ ಹ್ರೀಂ । ಸೌಃ ಕ್ಲೀಂ ಐಂ । ಓಂ ॥

ಇಪ್ಪತ್ತೆಂಟು ಅಕ್ಷರಗಳುಳ್ಳ 'ಮಹಾ ಷೋಡಶೀ' ಎಂಬುದೂ ಉಂಟು : ಎಂಟು ಬೀಜಾಕ್ಷರಗಳು, ಪಂಚದಶಿ (ಹದಿನೈದು ಅಕ್ಷರಗಳು) ಮತ್ತು ಮೊದಲ ಐದು ಬೀಜಾಕ್ಷರಗಳು ವಿಲೋಮಕ್ರಮದಲ್ಲಿ - ಹೀಗೆ ಒಟ್ಟು ಇಪ್ಪತ್ತೆಂಟು ಅಕ್ಷರಗಳು.

ಈಯೆಲ್ಲ ಉದಾಹರಣೆಗಳಲ್ಲಿಯೂ ಮೌಲಿಕ ರಚನೆಯು 'ಪಂಚದಶೀ'ಯದೇ ಇದೆ. ಮತ್ತು ಅಕ್ಷರಗಳನ್ನು ಹಾಗೂ ಉಳಿದ ಬೀಜಾಕ್ಷರಗಳನ್ನು ಮೂರು ವ್ಯಕ್ತ ಖಂಡಗಳಾಗಿ ಗುಂಪುಮಾಡಿರಿಸಿ, ನಾಲ್ಕನೆಯ ಖಂಡವನ್ನು ವ್ಯಕ್ತವಾಗಿಯೋ ಅಥವಾ ಗುಪ್ತವಾಗಿಯೋ ಇಡುವಂತೆ ಯಾವಾಗಲೂ ಲಕ್ಷ್ಯವಹಿಸಲಾಗಿದೆ. ನಾಲ್ಕನೆಯ ಖಂಡವು ಉಕ್ತವಾಗಿರಲಿ, ಅಥವಾ ಗುಪ್ತವಾಗಿರಲಿ, ಮಂತ್ರಕ್ಕೆ ಏಕತ್ವದ ಅರ್ಥವತ್ತೆಯನ್ನು ಕೊಡುವುದು ಅದೇ ಆಗಿದೆ. ವ್ಯಕ್ತವಿರುವ ಮೂರು ಖಂಡಗಳು ದೇವಿಯ ಶರೀರ ಸದೃಶವಾಗಿದ್ದರೆ (''ಮೂಲ ಕೂಟತ್ರಯ ಕಲೇವರಾ'' - ಲಲಿತಾ ಸಹಸ್ರನಾಮ), ಗುಪ್ತವಾಗಿ ಇರುವ ನಾಲ್ಕನೆಯ ಖಂಡವು ಅವಳ ಆತ್ಮವೇ ಆಗಿದೆ. ಐಂ, ಕ್ಲೀಂ, ಶ್ರೀಂ ಎಂಬಿತ್ಯಾದಿ ಬೀಜಾಕ್ಷರಗಳು, 'ರಹಸ್ಯ'ವೆಂದು ಪರಿಗಣಿಸಲಾದ ನಾಲ್ಕನೆಯ ಖಂಡವನ್ನು ಪ್ರಾಧಾನ್ಯವುಳ್ಳದ್ದನ್ನಾಗಿಸುತ್ತವೆ.

'ಶ್ರೀವಿದ್ಯೆ'ಯ ವಿಷಯದಲ್ಲಿ ಅತ್ಯಂತ ಮಾನ್ಯತೆಯನ್ನು ಪಡೆದ ಅಧಿಕೃತ ಪ್ರವರ್ತಕನಾದ ಭಾಸ್ಕರರಾಯನು ಹೀಗೆ ಹೇಳುತ್ತಾನೆ : ''ಮಂತ್ರದ ಅರ್ಥವನ್ನು ಅರಿಯದೆ ಕೇವಲ ಅದರ ಉಚ್ಚಾರಮಾಡುವುದನ್ನು ಮಾತ್ರ ಬಲ್ಲ ಜನರು, ಶ್ರೀಗಂಧದ ಕಟ್ಟಿಗೆಯ ಹೊರೆಯನ್ನು ಹೊತ್ತೊಯ್ಯುವ ಕತ್ತೆಗೆ ಸಮಾನರು. ಅರ್ಥಜ್ಞಾನ ರಹಿತವಾದ ಶಬ್ದೋಚ್ಚಾರವು ಯಾವ ಸಿದ್ಧಿಯನ್ನೂ ತರಲಾರದು. ಬೂದಿಯಲ್ಲಿ ಸುರಿದ ತುಪ್ಪವು ಹೇಗೆ ಬೆಳಕನ್ನೀಯಲಾರದೋ ಹಾಗೆಯೇ''.[19] ಅದಲ್ಲದೆ, ಅರ್ಥವು ಬಹುಮುಖಿಯಾಗಿರುತ್ತದೆಯೆಂದೂ ಅವನು ಹೇಳುತ್ತಾನೆ - ಸಾಮಾನ್ಯಾರ್ಥ, ಪಾರಂಪರಿಕ ಅರ್ಥ, ರಹಸ್ಯೋಪದೇಶ, ಪ್ರಯೋಗಾನ್ವಯ ಅರ್ಥ, ಶಬ್ದವ್ಯುತ್ಪತ್ತಿಯನ್ನಾಧರಿಸಿದ ಅರ್ಥ, ಶಬ್ದ-ಶಕ್ತಿಯನ್ನಾಧರಿಸಿದ ವ್ಯಾಖ್ಯಾನ, ಸಮಗ್ರ

ಅರ್ಥ .... ಇತ್ಯಾದಿ. "ಸ್ವಲ್ಪದರಲ್ಲಿ ಹೇಳಬೇಕೆಂದರೆ ಪಂಚದಶಿಗೆ ಅದರಲ್ಲಿ ಅಕ್ಷರಗಳಿರುವಷ್ಟೇ ಸಂಖ್ಯೆಯಲ್ಲಿ ಅರ್ಥಗಳೂ ಇವೆ".[20]

ಸ್ಥೂಲವಾಗಿ ಹೇಳುವುದಾದರೆ, ಎರಡು ರೀತಿಯ ಅರ್ಥಗಳು ಉಂಟು (1) ಮೌಲಿಕ ಸಂಕೇತಗಳು ಮತ್ತು ಅವುಗಳಲ್ಲಿರುವ ಶಾಬ್ದಿಕ ರೂಪಕಗಳ ವಿವರಣೆ (2) ಸಾಧಕನಿಗೆ ಮಾರ್ಗದರ್ಶನದ ಸಲುವಾಗಿ ಇರುವ ಪ್ರಾಯೋಗಿಕ ವಿಷಯಗಳ ತಿಳಿವಳಿಕೆ. ಹೇಗಿದ್ದರೂ, ಎರಡನೆಯದು ಈ ಪುಸ್ತಕದ ಅಪ್ಷೇಕೆ, ಯಾವುದೇ ಪುಸ್ತಕದ ವ್ಯಾಪ್ತಿಗೆ ಹೊರತಾದದ್ದು. ಮೊದಲನೆಯದು ದೀರ್ಘವೂ ಮತ್ತು ಜಾಳಾಗಿಯೂ ಇದೆ. ಮತ್ತು ರೂಪಕತೆಯು ಇಂದು ಬಹುಮಟ್ಟಿಗೆ ರೂಢಿಲುಪ್ತವಾಗಿಹೋಗಿದೆ. ಮಂತ್ರದ ಸಾಂಕೇತಿಕ ಅರ್ಥವನ್ನು ನೀಡಲೆಳಸಿದ, ತೌಲನಿಕವಾಗಿ ಇತ್ತೀಚನವೆಂದು ಹೇಳಬಹುದಾದ ಕೃತಿಗಳು ಊಹಾತ್ಮಕ ಕಲ್ಪನೆಗಳಿಂದ ತುಂಬಿಹೋಗಿದ್ದು, ನಿಷೇಧಯೋಗ್ಯವೆನ್ನುವ ಮಟ್ಟಕ್ಕೆ ಸಂಕೀರ್ಣವೂ ಆಗಿವೆ. (ಉದಾ : ತ್ರಿಖಂಡ ಸಾರಾರ್ಥ ಬೋಧಿನಿ, ಶ್ರೀವಿದ್ಯಾ ಸಂಕೇತ ಭಾಷ್ಯ, ಮತ್ತು ಪಂಚದಶೀ ರಹಸ್ಯ ವಿವರಣ). ಆದರೂ, ಖ್ಯಾತಿವೆತ್ತ ಗ್ರಂಥಕರ್ತರಾದ ಗೌಡಪಾದ, ಲೊಲ್ಲ- ಲಕ್ಷ್ಮೀಧರ, ಭಾಸ್ಕರರಾಯರಂಥವರು, ಪಾರಂಪರಿಕ ದೃಷ್ಟಿಕೋನವನ್ನು ವಿವರಿಸುವ ಪ್ರಯತ್ನ ಮಾಡಿದ್ದಾರೆ. ಅದರ ಪ್ರಕಾರ, ಇದು ಆದಿ-ವಿದ್ಯೆ ಅಥವಾ ಆದಿಮ ಸಾಂಕೇತಿಕ ಜ್ಞಾನವಾಗಿದ್ದು, ವೇದಗಳಿಗೂ, ಮತ್ತು ದೇಶದ ಉಳಿದ ಧಾರ್ಮಿಕ, ತತ್ವಶಾಸ್ತ್ರೀಯ ಜ್ಞಾನಪ್ರಣಾಲಿಗಳಿಗೂ ಮೂಲಪ್ರೇರಣೆಯನ್ನು ಒದಗಿಸಿದೆ (**ಸರ್ವವೇದಶಾಸ್ತ್ರಾಣಾಂ ಅಪಿ ಕಾರಣಭೂತಾ**). ಈ ವಾದದಲ್ಲಿ, ಅಂದರೆ, ಈ ವಿದ್ಯೆಯು ಅತ್ಯಂತ ಪ್ರಾಚೀನವಾದುದು ಎನ್ನುವುದರಲ್ಲಿ ತಕ್ಕಮಟ್ಟಿನ ಸತ್ಯಾಂಶವಿರಲಿಕ್ಕೆ ಸಾಕು.

ಪಂಚದಶಿಯು ಈ ಹಿಂದೆ ಹೇಳಿದಂತೆ, ಮೂರು ಖಂಡ ಅಥವಾ ಕೂಟಗಳಲ್ಲಿ, ವ್ಯವಸ್ಥೆಗೊಳಿಸಲ್ಪಟ್ಟ ಹದಿನೈದು ಅಕ್ಷರಗಳುಳ್ಳದ್ದು. ಮೊದಲನೆಯ ಖಂಡವು ವಾಗ್ಭವಕೂಟ, ಅದು ಅಕ್ಷರಗಳಿಂದಾದದ್ದು. ಮೊದಲನೆಯದು ಕಂಠ್ಯ

ವ್ಯಂಜನವಾದ 'ಕ', ನಮ್ಮ ಇಚ್ಛೆ, ಕಾಮನೆಗಳನ್ನಾಳುವ, ಮೇಲಿನ ಸ್ತರದ ತತ್ವವಾದ ಕಾಮೇಶ್ವರನನ್ನು ಪ್ರತಿನಿಧಿಸುವುದು. ವ್ಯಾವಹಾರಿಕ ಜಗತ್ತಿನೊಂದಿಗೆ ನಮ್ಮ ಕರ್ಮೇಂದ್ರಿಯಗಳು ಮತ್ತು ಮನಸ್ಸು ವ್ಯವಹರಿಸಲು ಸಾಧ್ಯವಾದಂಥ ಜಾಗ್ರತ್ ಸ್ಥಿತಿಯನ್ನು ಕ್ಷೇತ್ರವನ್ನೂ ಇದು ಪ್ರತಿನಿಧಿಸುತ್ತದೆ. (ಜಾಗ್ರದಭಿಮಾನಿ ವಿಶ್ವಾಃ). ಈ ಅಕ್ಷರವು 'ಕನ್-ದೀಪ್ತೌ' (ಬೆಳಗಿಸು ಎಂಬರ್ಥದ) ಎಂಬ ಧಾತುವಿನಿಂದ ನಿಷ್ಪನ್ನವಾಗಿದೆಯೆಂದು ವ್ಯಾಖ್ಯಾನಿಸಲಾಗಿದೆ. ಈ ಅರ್ಥದಲ್ಲಿ ಇದು ಬುದ್ಧಿ ತತ್ವ. ಮಾನವಶರೀರದಲ್ಲಿ ಇದು ಜೀವವಾಗಿದ್ದು, 'ಆತ್ಮ'ವನ್ನು ಪ್ರತಿನಿಧಿಸುವುದು.[21] ಕೊನೆಯದಾಗಿ 'ಕ'ವು ಕಾಮವನ್ನು ಪ್ರತಿನಿಧಿಸುತ್ತದೆ; ಅಂದರೆ ವಿಶ್ವದ ಸೃಜನ ಮತ್ತು ತೃಪ್ತಿಯನ್ನುಂಟುಮಾಡುವ ಕ್ರಿಯಾಶಕ್ತಿಯನ್ನು ಅಥವಾ ಸೃಷ್ಟಿಕರ್ತ ಬ್ರಹ್ಮನನ್ನು ಪ್ರತಿನಿಧಿಸುತ್ತದೆ. 'ಕ' ಎಂಬುದು ನಿಜವಾಗಿಯೂ 'ಕ್' ಮತ್ತ 'ಅ'ಗಳ ಸಂಯುಕ್ತವಾಗಿದೆ. (ಶಿವ-ಶಕ್ತಿ).

ಮೂರುಸಾರಿ ಬರುವ ಈ 'ಕ' ಎಂಬ ಅಕ್ಷರವು ಮಂತ್ರದಲ್ಲಿ ಮಹತ್ವಪೂರ್ಣವಾದುದು. ಇದು, ಉಪಾಸಕರನ್ನು ''ಸಕಲ'' (ಅಶುದ್ಧ, ನಿಮ್ನಮಟ್ಟದ, ಬರಿಯ ಕ್ರಿಯೆಯಲ್ಲಿ ಶ್ರದ್ಧೆಯನ್ನಿಡುವವರು), 'ಪ್ರಲಯಾಕಲ' (ಮಿಶ್ರರು, ಮಧ್ಯಮ ಸ್ತರದವರು, ಕ್ರಿಯೆ-ಜ್ಞಾನವೆರಡನ್ನೂ ನಂಬುವವರು), ಮತ್ತು 'ವಿಜ್ಞಾನಕೇವಲ' (ಶುದ್ಧ, ಉತ್ತಮ ಸ್ತರದ, ಜ್ಞಾನವನ್ನು ಮಾತ್ರ ನಂಬುವವರು) ಎಂಬ ಮೂರು ವಿಧದವರೆಂದು ಸೂಚಿಸುತ್ತದೆ.[22]

ಎರಡನೆಯ ಅಕ್ಷರವು 'ಏ'. ಇದು ಮೇಲಿನದರ ಸ್ತ್ರೀ ಸ್ವರೂಪದ, ಅರ್ಧಭಾಗ - ಕಾಮೇಶ್ವರಿ ಅಥವಾ ಲಕ್ಷ್ಮೀ. ಈ ಅಕ್ಷರ ಚಿಹ್ನವು ಸಂಸ್ಕೃತದಲ್ಲಿ ಬರೆದಾಗ (ए) ತ್ರಿಕೋಣದ ಆಕೃತಿಯಲ್ಲಿದ್ದು, ಎಲ್ಲವುಗಳ ಸ್ರೋತವನ್ನು, ಅರ್ಥಾತ್, ಸರ್ವಮಾತೃತ್ವವನ್ನು ಪ್ರತಿನಿಧಿಸುತ್ತದೆ.[23] ಇದು, 'ಈಕ್-ಸ್ಮರಣೇ' ಎಂಬ ಧಾತುವಿನಿಂದ ವ್ಯುತ್ಪತ್ತಿ ಹೊಂದಿದ್ದು, 'ಸ್ಮರಿಸು' ಎಂಬ ಅರ್ಥಕೊಡುವುದು. ಇದು ಮನಸ್ಸು

ಕ್ರಿಯಾಶೀಲವಾಗಿರುವ 'ಸ್ವಪ್ನ'ಸ್ಥಿತಿಯ ಪ್ರತಿನಿಧಿ'. 'ಕ' ಎಂಬುದು ಬ್ರಹ್ಮ, 'ಏ' ಎಂಬುದು ಸೃಜಿಸುವ, ಅಭಿವ್ಯಕ್ತಿಗೊಳಿಸುವ, ಪ್ರಕಟೀಕರಿಸುವ (manifest) ಬ್ರಹ್ಮನ ಶಕ್ತಿ (ಭಾರತೀ).

'ಕ' ಮತ್ತು ಅದನ್ನನುಸರಿಸಿ ಬರುವ 'ಏ' ಗಳನ್ನು ಸೂಚಿಸುವ ತ್ರಿಕೋಣದೊಳಗೆ 'ಬಿಂದು'ವಿದೆ. ಅದು, ವಿಶ್ವದ ಸೃಷ್ಟಿ, ಸ್ಥಿತಿ, ಮತ್ತು ಲಯ (ಸಂಹಾರ) ಗಳಿಗೆ ಕಾರಣವಾದ ಶಿವ-ಶಕ್ತಿ ಸಂಯೋಗವನ್ನು ಸೂಚಿಸುತ್ತದೆ. ಇದು ಸೌಂದರ್ಯಲಹರಿಯ ಮೊದಲ ಶ್ಲೋಕದಲ್ಲಿ ವರ್ಣಿತವಾಗಿದೆ. ನಾಲ್ಕು ತ್ರಿಕೋಣಗಳನ್ನು ಹೊಂದಿದ ಯಂತ್ರಾರ್ಧವು ಶಿವನನ್ನೂ, ಐದು ತ್ರಿಕೋಣಗಳನ್ನು ಹೊಂದಿದ ಮತ್ತೊಂದು ಅರ್ಧವು ಶಕ್ತಿಯನ್ನು ಪ್ರತಿನಿಧಿಸುತ್ತವೆ. ಅವೆರಡೂ ಸೇರಿ ಒಂಭತ್ತು ಆವರಣಗಳನ್ನು ರೂಪಿಸುತ್ತವೆ. ಇವೆಲ್ಲವೂ ಕೂಡಿ 'ಯಂತ್ರ'ವು ರಚಿತವಾಗಿದೆ.[24] ಶಿವನು ಅವಿಕೃತ ಚೈತನ್ಯವಾದ, ವೇದಾಂತವು ಹೇಳುವ 'ಬ್ರಹ್ಮ'ವನ್ನೂ, ಮತ್ತು ಶಕ್ತಿಯು ಮಾಯಾ ಶಕ್ತಿಯನ್ನೂ ಪ್ರತಿನಿಧಿಸುವರೆಂಬುದು ಇನ್ನೊಂದು ವಿವರಣೆ. ಇವೆರಡರ ಸಂಯೋಗದಿಂದಲೇ ವಿಶ್ವಸೃಷ್ಟಿ.[25] ಸಾಂಖ್ಯರ ಪ್ರಕಾರ ಪ್ರಕೃತಿ-ಪುರುಷರ ಸಂಯೋಗವು ಸೃಷ್ಟಿಗೆ ಕಾರಣ,[26] ಎಂಬುದು ಇದಕ್ಕೆ ತತ್ಸಮವಾದ ವಿಚಾರಪ್ರಣಾಲಿ. ನೀಪ ವೃಕ್ಷಗಳಿಂದ (ಯಂತ್ರದ ರೇಖೆಗಳಿಂದ) ಆವೃತವಾದ, ಅಭೀಷ್ಟದಾಯಕ ಮಣಿಯ ಮನೆಯಲ್ಲಿ (ಚಿಂತಾಮಣಿ ಗೃಹ-ತ್ರಿಕೋನ) ಅಮೃತ-ಸಿಂಧು (ಸುಧಾಸಿಂಧುವೆಂದು ಕರೆಯಲಾದ 'ಬಿಂದು') ವಿದೆ ಎಂದು 'ಬಿಂದು'ವನ್ನು ಕಾವ್ಯಮಯ ರೂಪಕದಲ್ಲಿ ವರ್ಣಿಸಲಾಗಿದೆ.

ಮೂರನೆಯ ಅಕ್ಷರವಾದ 'ಈಂ' ಎಂಬುದು ವಿಷ್ಣುವಿನ ಪರ್ಯಾಯರೂಪ. ಶಬ್ದ ವ್ಯುತ್ಪತ್ತಿಯ ದೃಷ್ಟಿಯಲ್ಲಿ ಇವೆರಡೂ ಶಬ್ದಗಳ ಮೂಲಧಾತುವು ಒಂದೇ (**ಈಯತೇ-ವ್ಯಾಪ್ನೋತಿ**). ಈ ಚಿಹ್ನೆಯಿಂದ, ಸುಷುಪ್ತಿಯ ಒಳಗೊಳ್ಳುವಿಕೆಯಿಂದ, ಪ್ರಜ್ಞೆಯು ಎಲ್ಲ ಅನುಭವಗಳಲ್ಲಿ ಅಮೂಲಾಗ್ರ ವ್ಯಾಪ್ತವಾಗಿರುವುದನ್ನು ಸೂಚಿಸಲಾಗಿದೆ. (ಸುಷುಪ್ತ್ಯಭಿಮಾನೀ ಪ್ರಜ್ಞಾಃ). ಇದು ಸತ್ಯವನ್ನು ಮರೆಮಾಡುವ,

ಅವಿದ್ಯೆಯನ್ನುಂಟುಮಾಡುವ ಮತ್ತು ವಿಶ್ವವನ್ನು ಪ್ರಕ್ಷೇಪಿಸುವ 'ಮಾಯಾ'ಶಕ್ತಿಯೆಂದೂ ಕರೆಯಲಾಗಿದೆ. ಆಚ್ಛಾದಿಸುವ, ಪರಿಮಿತಗೊಳಿಸುವ, ಮರೆಮಾಚಿಡುವ ಕತ್ತಲೆಯ ಗುಹೆಯನ್ನು 'ಈಂ' ಎಂಬ ಅಕ್ಷರವು ಹೋಲುತ್ತದೆಯೆಂದೂ ಹೇಳಲಾಗಿದೆ.[27]

ನಾಲ್ಕನೆಯ ಅಕ್ಷರ 'ಲ' ಪೃಥ್ವೀತತ್ವವನ್ನು (ಕ್ಷಿತಿ) ಸೂಚಿಸುತ್ತದೆ. ಇದು ಜಾಗ್ರತ್-ಅವಸ್ಥೆಯಲ್ಲಿ ಐಂದ್ರಿಯಕ ಕ್ರಿಯೆಗಳಿಂದ ಪೃಥಕ್ಕಾಗಿ ನಿಲ್ಲುತ್ತದೆ, ಸ್ವಪ್ನಾವಸ್ಥೆಯಲ್ಲಿ ಮನೋವ್ಯಾಪಾರಗಳಿಂದ ಪೃಥಕ್ ಆಗಿ ನಿಲ್ಲುತ್ತದೆ ಮತ್ತು 'ಪರೋಕ್ಷ' ಅಥವಾ ಗ್ರಹಿಕೆಗೆ ಅಸಂವೇದನೆಯನ್ನು ಸೂಚಿಸುವುದಲ್ಲದೆ ಅವ್ಯಕ್ತವಾಗಿಯೂ, ಅಸಂಗವೂ ಆಗಿದೆ.[28] 'ಲ' ಅಕ್ಷರವು ನಿಜವಾಗಿ, ಪ್ರಕಟವಿಶ್ವದ 'ಮೌಲಿಕ ಅವಸ್ಥೆ'ಯ ಸಂಕೇತ. ಆ ಕಾರಣವೇ, ಇದು ಮಂತ್ರದಲ್ಲಿ ಮೂರುಬಾರಿ ಬರುವುದು ಹಾಗೂ, ಮೂರೂ ಲೋಕಗಳಿಗಿರುವ ಅದರ ಗುಪ್ತ ಪ್ರಸಕ್ತಿಯನ್ನು ಸೂಚಿಸುತ್ತದೆ.

ಈ (ಮೇಲೆಹೇಳಿದ) ನಾಲ್ಕು ಅಕ್ಷರಗಳ ಗುಂಪಿನ ನಂತರ ಬರುವ 'ಹ್ರೀಂ' ಎಂಬುದು ಪ್ರಥಮ ಖಂಡದ ಭಾಗವಲ್ಲ, ಅದರ ಶಿಖರ ಅಥವಾ ಕಿರೀಟ. 'ಹ್ರೀಂ' ಎಂಬುದು ದೇವಿಯನ್ನೇ ಪ್ರತಿನಿಧಿಸುವ 'ಬೀಜಾಕ್ಷರ'ವಾಗಿದೆ. ಇದೊಂದು ಸಂಯುಕ್ತ ಶಬ್ದ. ಆಕಾಶ ಅಥವಾ ಶೂನ್ಯತೆಯ ಅರ್ಥಕೊಡುವ 'ಹ' ಎಂಬ ಬೀಜಾಕ್ಷರ, ಅಗ್ನಿಸೂಚಕವಾದ 'ರ'ಕಾರ (ರೇಫ), ಅಂತ್ಯದ 'ಈ' (ಮನ್ಮಥ) ಹಾಗೂ 'ಸಂಹೃತಿ' ಸೂಚಕವಾದ ಅನುಸ್ವಾರ(ಂ), ಇವುಗಳಿಂದ ಉಂಟಾಗಿರುತ್ತದೆ. ಪ್ರಥಮ ಘಟಕ 'ಹ' ಶ್ವೇತ ವರ್ಣ, ಎರಡನೆಯ 'ರ'ವು ರಕ್ತವರ್ಣ, ಮೂರನೆಯ 'ಈ' ಎಂಬುದು ನೀಲ ವರ್ಣ. ಹೀಗೆ ಮೂರೂ ಘಟಕಗಳು (ಸತ್ವ, ರಜ, ತಮ) ಮೂರು ಗುಣಗಳ ಸೂಚಕ. ಈ ಮೂರೂ ಗುಣಗಳು 'ಮೂಲ ಪ್ರಕೃತಿ'ಯಾದ ದೇವಿಯಲ್ಲಿ ಅವಿಭಾಜ್ಯವಾಗಿ ಲೀನವಾಗಿವೆ. ಎರಡನೇ ವಿವರಣೆಯಾಗಿ, 'ಹ' ಶಿವನಿಗೂ 'ರ'ವು ಶಕ್ತಿಗೂ, 'ಈ'ಯು ನಿತಾಂತ ಪ್ರಶಾಂತಿಯಲ್ಲಿ ಪರಿಣಮಿಸುವ ಅವರ ಸಂಯೋಗಕ್ಕೂ ಪರ್ಯಾಯವಾಚಕವಾಗಿದೆ ಎಂದೂ ಹೇಳಲಾಗಿದೆ.

ಅದೇ 'ಹ್ರೀಂ', ಎರಡನೆಯ ಮತ್ತು ಮೂರನೆಯ ಖಂಡದ ಕೊನೆಯಲ್ಲಿ ಪುನರಾವರ್ತಿತವಾಗಿದೆ. ಶಾಸ್ತ್ರೀಯವಾಗಿ, 'ಹ್ರೀಂ' ಎಂಬುದು ಹೃದಯದ ರೇಖೆ (ಹೃಲ್ಲೇಖಾ) ಎಂದು ಹೇಳಲ್ಪಟ್ಟಿದೆ. ಅರ್ಥಾತ್, ಉಪಾಸಕನ ಜ್ವಲಂತ ಅಭೀಪ್ಸೆ. ಇದು 'ಮಾಯೆ'ಯ ಅಥವಾ ತ್ರಿಭುವನಗಳನ್ನೂ ಆಳುವ, ಮತ್ತು ತನ್ನೊಳಗೆ ಸಂಹೃತ (ಸಂಕೋಚನ)ಗೊಳಿಸಿಕೊಳ್ಳುವ ಭುವನೇಶ್ವರಿಯ ಏಕಾಕ್ಷರೀ ಮಂತ್ರವೆಂದೂ ಪರಿಗಣಿಸಲಾಗಿದೆ. ಶಬ್ದ ವ್ಯುತ್ಪತ್ತಿಯ ಪ್ರಕಾರ 'ಹ್ರೀಂ' ಎಂದರೆ 'ಲಜ್ಜಾನ್ವಿತ' ಸಂಕೋಚ ಪ್ರವೃತ್ತಿಯ ಎಂದರ್ಥ. ಸಂಕೋಚನಗೊಂಡಿದ್ದಿರುವ ವಿಶ್ವವು ಅವಳಲ್ಲಿ ಮರೆಯಾಗಿ

ಅಡಕವಾದ ಸ್ಥಿತಿಯಲ್ಲಿರುತ್ತದೆ. ಆದರೂ, ಅದನ್ನು ಬಿಚ್ಚಿ, ಪ್ರಕಟಗೊಳಿಸುವ ಸಾಮರ್ಥ್ಯವನ್ನೂ ಅವಳು ಹೊಂದಿದ್ದಾಳೆ. ತಾಂತ್ರಿಕ ವಿಧಿಗಳಲ್ಲಿ ವ್ಯಾಪಕವಾಗಿ ಪ್ರಯೋಗಿಸಲ್ಪಡುವ ಈ ಬೀಜಾಕ್ಷರವು ವೇದದ 'ಓಂ' ಎಂಬುದಕ್ಕೆ ತತ್ಸಮಾನವೆಂದು (ತಾಂತ್ರಿಕ ಪ್ರಣವ) ವರ್ಣಿತವಾಗಿದೆ. ಅದು ಒಂದು ರೀತಿಯ ಪರ್ಯಾಪ್ತತೆಯ, ಸಂಪೂರ್ಣತೆಯ ಅರ್ಥವನ್ನು ಕೊಡುತ್ತದೆ : ಪ್ರತಿಯೊಂದು ಖಂಡದ ಅಕ್ಷರಗಳು ತಮ್ಮಷ್ಟಕ್ಕೆ ತಾವು ಸ್ವತಂತ್ರವಾಗಿ (ಬೇರೆಯಾಗಿ) ನಿಲ್ಲುತ್ತವೆ (ವ್ಯಷ್ಟಿ). ಆದರೆ 'ಹ್ರೀಂ' ಎಂಬುದು ಖಂಡ(ಕೂಟ)ಗಳ ಸಂಧಿಯಲ್ಲಿ ಪ್ರಯೋಗಿಸಲ್ಪಡುವುದರಿಂದ, ಅದು ಅವೆಲ್ಲವನ್ನೂ ಒಂದು 'ಏಕತೆ'ಯಲ್ಲಿ ಸಮಷ್ಟಿಯಾಗಿ ಪರಿವರ್ತಿಸುತ್ತದೆ. ಈ ಕಾರಣದಿಂದಲೇ 'ಹ್ರೀಂ'ದ ಸ್ಥಾನವು ಗ್ರಂಥಿ (ಗಂಟು) ಎಂದು ಆಲಂಕಾರಿಕವಾಗಿ ವರ್ಣಿಸಲ್ಪಟ್ಟಿದೆ. ಮೊದಲನೆಯದು 'ಬ್ರಹ್ಮಗ್ರಂಥಿ', ಎರಡನೆಯದು 'ವಿಷ್ಣುಗ್ರಂಥಿ', ಮೂರನೆಯದು 'ರುದ್ರಗ್ರಂಥಿ'.

ಅಂತ್ಯೋಚ್ಚಾರದ 'ಬಿಂದು', ಅಥವಾ ಅನುಸ್ವಾರ(ಂ)ವು ಅದರೊಟ್ಟಿಗೆ ಅರ್ಧಚಂದ್ರಁವನ್ನೂ, ಮತ್ತು ಗುಪ್ತವಾಗಿರುವ ಶಕ್ತಿಗಳಾದ ರೋಧಿನೀ, ನಾದ, ನಾದಾಂತ, ಶಕ್ತಿ ಇವುಗಳನ್ನೂ ಸಂಗಡ ಒಳಗೊಂಡಿದೆ - ಅವು ಬೀಜಾಕ್ಷರವನ್ನು ಉಚ್ಚರಿಸಿದಾಗ ಮಾತ್ರ ವ್ಯಕ್ತವಾಗಿ ಉಪಸ್ಥಿತವಾಗಿರುತ್ತವೆಯೇ ಹೊರತು ಲಿಖಿತದಲ್ಲಿ ಕಾಣಸಿಗುವುದಿಲ್ಲ. ಯಾವ ದೇವತೆಯ ಸಾನ್ನಿಧ್ಯ ಮತ್ತು ಶಕ್ತಿಯನ್ನು ಮಂತ್ರದಲ್ಲಿ ಹಿಡಿದಿಡಲು ಯತ್ನಿಸಲಾಗಿದೆಯೋ ಆ ಪರಾದೇವತೆಯೇ ಈ ಸಂಕೀರ್ಣ ಬೀಜಾಕ್ಷರ ಎಂದು ಏಕೀಭೂತಗೊಳಿಸಲಾಗಿದೆ. ಪ್ರತಿಯೊಂದು ಹಿಂದಿರುವ ಅಕ್ಷರದ ಅಂತರ್ಭಾವವು ಮುಂದಿನ ಅಕ್ಷರದಲ್ಲಿ ಹರಿದು ಬರುತ್ತಿರುವಂತೆ ಕಲ್ಪಿಸಲಾಗಿದೆ. ಮತ್ತು ಸಮಗ್ರ ಅಕ್ಷರ ಶ್ರೇಣಿಯ ಒಟ್ಟಂದದ ಅಂತರ್ಭಾವವು (ಅಂತರಾರ್ಥವು) ಕೊನೆಯ 'ಹ್ರೀಂ'ನಲ್ಲಿ ಸಂಮಿಲಿತವಾದಂತೆ ಭಾವಿಸಲಾಗಿದೆ.

ಮೊದಲನೆಯ ಖಂಡವು 'ವಾಗ್ಭವ ಕೂಟ'ವೆಂದು ಕರೆಯಲಾಗಿದೆ, ಯಾಕೆಂದರೆ ಭೌತ ವಿಶ್ವದ ಮತ್ತು ಭಾಷಾರೂಪಗಳ ಸೃಷ್ಟಿಕರ್ತನಾದ ಬ್ರಹ್ಮನು ಅದರ ಅಧಿಷ್ಠಾತೃ. ಇದು ಒಳಗೊಂಡಿರುವ ಮೂರು ಅತ್ಯಂತ ಮುಖ್ಯವಾದ ಬಿಜಾಕ್ಷರಗಳ ದೆಸೆಯಿಂದ ಇದಕ್ಕೆ ಮಹತ್ವವು ಪ್ರಾಪ್ತವಾಗಿದೆ : ಯಾವುದರಿಂದ ಎಲ್ಲವೂ ಉದ್ಭವವಾಗಿದೆಯೋ ಮತ್ತು ಯಾವುದು ಅತ್ಯಂತ ಶ್ರೇಷ್ಠ ಲಾಭವಾದ ಮೋಕ್ಷವನ್ನು ಸಾಧಕನಿಗೆ ನೀಡುವುದೋ ಆ 'ಕ' ಬೀಜಾಕ್ಷರ, ಚ್ಯುತಿಯಿಲ್ಲದ ಸಂಪದಭಿವೃದ್ಧಿಯನ್ನು ನೀಡುವ ''ಲ'' ಬೀಜಾಕ್ಷರ, ಮತ್ತು ಸಕಲ ರೀತಿಯ ಸಂತೋಷವನ್ನುಂಟುಮಾಡುವ 'ಈ' ಎಂಬ ಬೀಜಾಕ್ಷರ. ಹೀಗೆ ಈ ಪ್ರಥಮ ಖಂಡವು ಧಾರ್ಮಿಕ ಜ್ಞಾನದ ಸಾರವಾದ ಶ್ರೀವಿದ್ಯೆಯ ತಿರುಳಾಗಿದೆ.[29]

'ಹಾ'-ದಿ ಪರಂಪರೆಯ ಪ್ರಕಾರ, ಮೊದಲ ಮೂರು ಅಕ್ಷರಗಳಾದ (ಕ, ಏ, ಈ)ಗಳ ಸ್ಥಾನದಲ್ಲಿ, ಕಾ-ದಿ ಪಂಚದಶಿಯಲ್ಲಿ ಆರನೆಯದಾದ 'ಹ' ಏಳನೆಯದಾದ 'ಸ' ಮತ್ತು ಮೊದಲನೆಯದಾದ 'ಕ' ವನ್ನು ಇಡುವುದರಿಂದ ಮೊದಲನೆ ಖಂಡ(ಕೂಟ)ವು ದೊರೆಯುತ್ತದೆ.

ಭಾಸ್ಕರರಾಯನು ಪ್ರಸಿದ್ಧವಾದ ಗಾಯತ್ರಿಮಂತ್ರದ ಅಂತರಾರ್ಥವು ಪಂಚದಶಿಯ ಮೊದಲ ಕೂಟದಿಂದ ನಿಷ್ಪನ್ನವಾಗಿದೆಯೆಂದು ನಿಗಮನಮಾಡುವ ಪ್ರಯತ್ನಮಾಡಿದ್ದಾನೆ : 'ಕ'ವು 'ತತ್', 'ಏ'ಯು 'ಸವಿತುರ್ವರೇಣ್ಯಂ', 'ಈ'ಯು 'ಭರ್ಗೋದೇವಸ್ಯ ಧೀ' ಮತ್ತು 'ಲ'ವು 'ಮಹೀ' ಎಂದೂ ಮತ್ತು ಗಾಯತ್ರಿಯ ಮೂರನೆಯ ಪಾದವು, ಗುಪ್ತವಾಗಿರುವ ನಾಲ್ಕನೆಯ ಪಾದವನ್ನೂ ಒಳಗೊಂಡ 'ಹ್ರೀಂ', ಎಂದೂ ಸೂಚಿಸುದ್ದಾನೆ.[30]

ಕಾಮರಾಜಕೂಟವೆಂದು ಕರೆಯಲಾದ ಎರಡನೆಯ ಖಂಡವು ಹ, ಸ, ಕ, ಹ, ಲ, ಹ್ರೀಂ ಎಂಬ ಆರು ಅಕ್ಷರಗಳಿಂದ ಆಗಿದೆ. ಅವುಗಳಲ್ಲಿ ಕ, ಲ, ಹ್ರೀಂ - ಈ ಮೂರು ಪ್ರಥಮಖಂಡದಲ್ಲಿ ಬಂದಿರುವವೇ ಪುನರುಚ್ಚರಿತವಾಗಿವೆ. ಮತ್ತು 'ಹ' ಎರಡು ಸಾರೆ ಬಂದಿದೆ. 'ಹ' ಮತ್ತು 'ಸ' ಇವು ಹೊಸದಾಗಿ ಬಂದಂಥವು. 'ಹ' ಅಕ್ಷರವು ಖಂಡದ ಮೊದಲ ಅಕ್ಷರವಾಗಿ ಬಂದಾಗ 'ಹೊಡೆದು ಹಾಕು', 'ನಾಶಮಾಡು' (ಹನ್ಯತೇ) ಎಂಬರ್ಥದಲ್ಲಿ, ಐದು ರೀತಿಯ ಬಂಧನ ಮತ್ತು ದೋಷಗಳನ್ನು ನಾಶಮಾಡುವುದನ್ನು ಸೂಚಿಸುತ್ತದೆ. ಈ ಸಂದರ್ಭದಲ್ಲಿ ಅದು ಸೂರ್ಯನನ್ನು ಪ್ರತಿನಿಧಿಸುವುದು. ಅದೇ ಅಕ್ಷರವು ಮತ್ತೊಮ್ಮೆ ಬಂದಾಗ ಎಲ್ಲ ಕಾಮನೆಗಳನ್ನೂ 'ಹೊಂದುವುದು' 'ತಲುಪುವುದು' (ಹೀಯತೇ, ಪ್ರಾಪ್ಯತೇ) ಎಂಬ ಅರ್ಥವನ್ನು ಕೊಡುವುದು ಮತ್ತು ಇಲ್ಲಿ ಅದು ದಿವ್ಯ 'ಹಂಸ' (ಧಾತು : ಓಹಾಙ್ಗ - ಹೋಗು ಎಂಬರ್ಥದ್ದು)ವನ್ನು ಪ್ರತಿನಿಧಿಸುವುದು.

'ಸ' ಎಂಬ ಮೂರನೆಯ (ಹೊಸ) ಅಕ್ಷರವು ಐಹಿಕ, ಆಧ್ಯಾತ್ಮಿಕ ಸುಖಾನುಭವಕ್ಕೆ ಅನುಕೂಲವುಂಟುಮಾಡುವುದರ ಸೂಚಕವೆಂದು ಅರ್ಥೈಸಲಾಗಿದೆ (ಸೀಯತೇ - 'ಸೋ'-ಎಂಬುದರಿಂದ ಸುಖಿಸು, ಅಥವಾ 'ಸೂ' ಎಂಬುದರಿಂದ, ಸೃಜಿಸು ಎಂಬ ಅರ್ಥ). ಇದು ಚಂದ್ರನ ಶೀತಲ ಕಿರಣಗಳನ್ನು ಪ್ರತಿನಿಧಿಸುತ್ತದೆ. ಪ್ರಥಮ ಖಂಡದಲ್ಲಿಯೂ ಇದ್ದು, ಇಲ್ಲಿಯೂ ಬಂದಿರುವ 'ಲ' ಅಕ್ಷರವು ಕೊನೆಯ ಶಿಖರ ಬೀಜಾಕ್ಷರವಾದ 'ಹ್ರೀಂ' ದೊಂದಿಗೆ ತೆಗೆದುಕೊಂಡಾಗ ಸಮೃದ್ಧಿ(ಆಧಿಕ್ಯ)ಎಂಬ ಅರ್ಥ ಕೊಡುವುದು. 'ಹ್ರೀಂ' ಬೀಜಾಕ್ಷರದ ಅರ್ಥವು ಮೊದಲ ಖಂಡದಲ್ಲಿರುವುದೇ ಇಲ್ಲಿಯೂ ಅನ್ವಯವಾಗುತ್ತದೆ.

'ಶಕ್ತಿ-ಕೂಟ'ವೆಂದು ಕರೆಯಲಾದ ಮೂರನೆಯ ಖಂಡದಲ್ಲಿ ಸ, ಕ, ಲ, ಹ್ರೀಂ ಎಂಬ ನಾಲ್ಕು ಅಕ್ಷರಗಳಿವೆ. ಸ ಕ ಲ ಎಂಬ ಅಕ್ಷರಗಳು ಒಟ್ಟಾಗಿ ತೆಗೆದುಕೊಂಡಾಗ 'ಸಕಲ' (ಸಂಪೂರ್ಣ, ಸಮಗ್ರ) ಎಂದಾಗುವುದು. ಅಂದರೆ, ಅವ್ಯಕ್ತ 'ಶಿವ'ನಿಂದ ಹಿಡಿದು ಪ್ರಕಟ ಭೂ-ತತ್ತ್ವದ ವರೆಗಿನ ಎಲ್ಲ ತತ್ತ್ವಗಳನ್ನೂ ಸೂಚಿಸುವುದು. (ಸ-ಎಂಬುದು ಶಕ್ತಿಯ ಚಿಹ್ನೆ, ಲ-ಎಂಬುದು ಪೃಥ್ವಿಯದು).

ಈ ಮಂತ್ರದಲ್ಲಿ ಬರುವ ಅಕ್ಷರಗಳ ಪೈಕಿ, 'ಕ'ವು ಎರಡುಸಾರೆ, 'ಹ'ವು ಎರಡುಸಾರೆ ಬರುತ್ತವೆ. ಅವು 'ಪುರುಷ' ಅರ್ಥಾತ್ ಶಿವಾಂಶ ಸೂಚಕ. ಇದರಲ್ಲಿ ಬರುವ ಉಳಿದೆಲ್ಲ ಅಕ್ಷರಗಳೂ 'ಶಕ್ತಿ' ಸಂಬಂಧಿತವಾದವುಗಳು. ಮೂರುಸಾರೆ ಬರುವ ಸಂಯುಕ್ತ ಬೀಜಾಕ್ಷರವಾದ 'ಹ್ರೀಂ' ಉಭಯಾತ್ಮಕವಾದುದು.[31]

ಈ ಮೂರು ಖಂಡಗಳು ಮೂರು ವೈಶ್ವಿಕ ಶಕ್ತಿಗಳಾದ ಅಗ್ನಿ, ಸೋಮ[32] ಮತ್ತು ಸೂರ್ಯರನ್ನೂ, ಸೃಷ್ಟಿಕರ್ತ ಬ್ರಹ್ಮ, ಪಾಲಕ ವಿಷ್ಣು, ಸಂಹಾರಕ ರುದ್ರ, ಈ ಮೂರು ದೇವತೆಗಳನ್ನೂ, ಧರ್ಮ (ದೈವೀ ನಿಯಮಾನುಸಾರ ಬಾಳುವುದು), ಅರ್ಥ-ಕಾಮ (ಸಂಪತ್ತು ಮತ್ತು ಸುಖ), ಮತ್ತು ಮೋಕ್ಷಗಳನ್ನೂ, ವೇದದ ಮೂರು ಮುಖಗಳಾದ ಋಗ್ವೇದ, ಯಜುರ್ವೇದ, ಸಾಮವೇದಗಳನ್ನೂ, ಹಾಗೂ 'ಗಾಯತ್ರೀ, ತ್ರಿಷ್ಟುಪ್ ಮತ್ತು ಜಗತೀ' ಈ ಮೂರು ಛಂದಸ್ಸುಗಳನ್ನೂ ಪ್ರತಿನಿಧಿಸುತ್ತವೆ.

ಮೂರೂ ಖಂಡಗಳಲ್ಲಿ ಪ್ರತಿಯೊಂದಕ್ಕೂ ತಮ್ಮದೇ ಆದ ವಿಶಿಷ್ಟ ಹಾಗೂ ಸಮಷ್ಟಿಯ ಬೀಜಾಕ್ಷರಗಳಿವೆ : ಮೊದಲನೆಯದಕ್ಕೆ 'ಐಂ', ಎರಡನೆಯದಕ್ಕೆ 'ಕ್ಲೀಂ', ಮತ್ತು 'ಸೌಃ' ಎಂಬುದು ಮೂರನೆಯದಕ್ಕೆ. ಈ ಮೂರೂ ಒಟ್ಟಾಗಿ ದೇವಿಯ ಶರೀರ. ಆದ್ದರಿಂದ 'ತ್ರಿಪುರಾ'ದೇವಿಯ ಗಾಯತ್ರಿಯು ಈ ರೀತಿ ಇರುವುದು :

ಐಂ ತ್ರಿಪುರಾ ದೇವ್ಯೈ ವಿದ್ಮಹೇ । ಕ್ಲೀಂ ಕಾಮೇಶ್ವರ್ಯೈಚ ಧೀಮಹಿ ।
ಸೌಃ ತನ್ನಃ ಕ್ಲಿನ್ನಾ ಪ್ರಚೋದಯಾತ್ ॥

'ಐಂ' ದಿಂದ ಪ್ರತಿನಿಧಿತವಾದ ಮೊದಲ ಭಾಗವು ಜಗನ್ಮಾತೆ ತ್ರಿಪುರಾದೇವಿಯ ಮಸ್ತಕ, ಎರಡನೆಯದಾದ 'ಕ್ಲೀಂ' ಕುತ್ತಿಗೆಯಿಂದ ಕಟಿಯವರೆಗಿನ ಶರೀರಭಾಗ, ಮೂರನೆಯದಾದ 'ಸೌಃ' ಎಂಬುದು ಕಟಿಯಿಂದ ಕೆಳಗಿನ ಶರೀರ ಭಾಗ. ಮಾನವ ಶರೀರದಲ್ಲಿ ಪ್ರಥಮ ಖಂಡ (ಐಂ) ಅಗ್ನಿ, 'ಮೂಲಾಧಾರ'ದಿಂದ ಹಿಡಿದು 'ಅನಾಹತ'ದ (ಹೃದಯದ) ವರೆಗಿನ ಭಾಗ, ಎರಡನೇ ಖಂಡವು (ಕ್ಲೀಂ) ಸೂರ್ಯ, 'ಅನಾಹತ'ದಿಂದ ಮೇಲೆ 'ಆಜ್ಞಾ'ದ ವರೆಗೆ (ಭ್ರೂಮಧ್ಯ), ಮತ್ತು ಮೂರನೆಯದು 'ಆಜ್ಞಾ'ದಿಂದ ಹಣೆಯ ಮೇಲಂಚಿನ (ಲಲಾಟದ) ವರೆಗೆ.

ಈ ಮೂರು ಕೂಟಗಳಿಂದೊಡಗೂಡಿದ ಪಂಚದಶಿಯನ್ನು ಮೂಲಾಧಾರ ಚಕ್ರದಿಂದ, ಮೇಲೆದ್ದು ಸಾಧಕನ ಶಿರೋಗ್ರದಲ್ಲಿ ಇರುವ 'ಸಹಸ್ರಾರ'ದ ವರೆಗೆ ಹೋಗುವ ಶಬ್ದಧಾರೆಯೆಂದು ಗಣಿಸತಕ್ಕದ್ದು. ಈ ಶಬ್ದವು 'ಹ್ರೀಂ' ದಿಂದ ಸಂಕೇತಿಸಲ್ಪಟ್ಟು ಮೂರೂ ಕೂಟಗಳ ಮೂಲಕ, ಜಪಮಾಲೆಯ ಮೂರು ಮಣಿಗಳ ಮೂಲಕ ಹಾದು ಹೋಗುವ ಸೂತ್ರದಂತೆ, ಹಾದು ಹೋಗುತ್ತದೆ.[33]

3. ಯಂತ್ರ ಮತ್ತು ಮಂತ್ರಗಳ ಏಕಾತ್ಮತೆ (Identity)

ಶ್ರೀವಿದ್ಯೆಯನ್ನು ಕುರಿತ ಗ್ರಂಥಗಳು, 'ಶ್ರೀಚಕ್ರ'ದ ರೂಪದಲ್ಲಿರುವ ದೃಶ್ಯ ಸಂಕೇತ ಮತ್ತು 'ಶ್ರೀವಿದ್ಯಾಮಂತ್ರ'ದ ರೂಪದಲ್ಲಿರುವ (ಹದಿನೈದು ಅಕ್ಷರಗಳ 'ಪಂಚದಶೀ' ಅಥವಾ ಹದಿನಾರು ಅಕ್ಷರಗಳ 'ಷೋಡಶೀ', ಶಾಬ್ದಿಕ ರೂಪ (Imagery) ಇವೆರಡರ ಏಕಾತ್ಮತೆಯನ್ನು ಒತ್ತಿಹೇಳುತ್ತವೆ. ಅರ್ಚನಾವಿಧಿಗಳಲ್ಲಿ ಇವೆರಡನ್ನೂ ಒಟ್ಟಾಗಿಯೇ ಉಪಯೋಗಿಸಲಾಗುವುದು. ಮತ್ತು ಅವುಗಳಲ್ಲಿ ಒಂದೊಂದಕ್ಕೂ ಅದರದ್ದೇ ಆದ ವಸ್ತು ವೈಶಿಷ್ಟ್ಯ (thematic specificity) ಹಾಗೂ ಪ್ರಯೋಗಕ್ರಮವಿದೆ. ಆದರೆ, ಸಮಗ್ರ ಪೂಜೆಯಲ್ಲಿ (ಅರ್ಚನೆಯಲ್ಲಿ) ಆದ್ಯಂತವಾಗಿ ಪ್ರಧಾನ ಭಾವವೆಂದರೆ ಅವೆರಡೂ ಮೌಲಿಕವಾಗಿ ಅರ್ಥದಲ್ಲಿಯೂ, ಸ್ವರೂಪದಲ್ಲಿಯೂ ಏಕಾತ್ಮಕವಾಗಿವೆಯೆಂಬುದೇ ಆಗಿದೆ.

ಮೇರು(ಸುಮೇರು)ಎಂಬ ವರ್ಣನೆಯು 'ಶ್ರೀಚಕ್ರ' ಮತ್ತು 'ಶ್ರೀವಿದ್ಯಾಮಂತ್ರ' ಇವೆರಡಕ್ಕೂ ಸಮಾನವಾಗಿಯೇ ಸಲ್ಲುತ್ತವೆ.[34] ಈ ವರ್ಣನೆಯ ಮೂಲವು, ಅನೇಕ ಏಷಿಯಾ ದೇಶಗಳಿಗೂ ಸಮಾನವಾಗಿಯೇ ಇರುವ ಪ್ರಾಚೀನ ಪೌರಾಣಿಕ ಪರಂಪರೆಯಿಂದ ಬಂದಿರುವುದಾಗಿದೆ. ಅದೇನೆಂದರೆ - ವಿಶ್ವದ ಕೇಂದ್ರವು ಅತ್ಯಂತ ಪ್ರಕಾಶಮಯವಾದ ಒಂದು ಪರ್ವತ. ಅದು ಸ್ವರ್ಣಮಯವಾಗಿದ್ದು, ಅದರ ಇಳುಕಲುಗಳೆಲ್ಲ ರತ್ನಾಚ್ಛಾದಿತವಾಗಿವೆ. ಮೂರು ಶಿಖರಗಳುಳ್ಳ ಈ ಪರ್ವತದ ಎತ್ತರವು

ಕಲ್ಪನಾತೀತ. ಅದರ ಮಧ್ಯಭಾಗವೇ ಸ್ವರ್ಲೋಕಗಳು. ಮೂರು ಶಿಖರಗಳು ಮೂರು ದೇವತೆಗಳ ಆವಾಸವಾಗಿವೆ. ಪಶ್ಚಿಮ ಶೃಂಗದಲ್ಲಿ ಬ್ರಹ್ಮ, ಪೂರ್ವಶೃಂಗದಲ್ಲಿ ವಿಷ್ಣು ಹಾಗೂ ಮಧ್ಯ ಶೃಂಗದಲ್ಲಿ 'ರುದ್ರ'. ಈ ಪರ್ವತದ ತಳವು ಚತುರಸ್ರಾಕಾರದಲ್ಲಿದೆ. ಪ್ರತಿಯೊಂದು ಪಾರ್ಶ್ವವೂ ಬೇರೆ ಬೇರೆ ಬಣ್ಣಗಳಲ್ಲಿದೆ. ಹದಿನಾಲ್ಕು ಲೋಕಗಳು ಅದರ ಬುಡದಲ್ಲಿವೆ. ಇದು ಪರ್ವತಗಳ ಚಕ್ರವರ್ತಿ. ಇದರಲ್ಲಿ ವಾಸಿಸುವವರು ದುಃಖ, ಜರಾ, ವ್ಯಾಧಿ, ಮರಣಗಳಿಲ್ಲದವರು. ಟಿಬೇಟಿನ ಪರಂಪರೆಯ ಪ್ರಕಾರ[36] ಮೇರುಪರ್ವತವು ಕ್ಷೀರಸಮುದ್ರ ಮಧ್ಯದಿಂದ ಮೇಲೆದ್ದು ನಿಂತಿದೆ. ನಾಲ್ಕು ಪಾರ್ಶ್ವಗಳಿದ್ದು, ಅವುಗಳಿಗೆ ಬಂಗಾರದ, ಬೆಳ್ಳಿಯ, ನೀಲದ ಮತ್ತು ಸ್ಫಟಿಕದ ಮೆಟ್ಟಿಲುಗಳ ಸೋಪಾನಗಳಿವೆ. ಬುಡದ ಸುತ್ತಲೂ ಕಲ್ಪವೃಕ್ಷಗಳು ಬೆಳೆದಿರುತ್ತವೆ. ಸಹಸ್ರ ವಿಜಯಪತಾಕೆಗಳಿಂದ ಅಲಂಕೃತವಾಗಿದೆ. ಪರ್ವತವು ಪೂರ್ವಾಭಿಮುಖವಾಗಿದೆ. ನಾಲ್ಕು ಖಂಡಗಳು ಅದರ ಬುಡದ ಸುತ್ತಲೂ ಇವೆ. ಅದರ ಮೂರು ಶಿಖರಗಳು 'ಶರೀರ', ವಾಕ್ಕು ಮತ್ತು 'ಆಲೋಚನೆಗಳು' ಎಂಬ ಮೂರು ವಜ್ರಗಳನ್ನು ಪ್ರತಿನಿಧಿಸುತ್ತವೆ.

ಚಕ್ರರಾಜವಾದ ಶ್ರೀಚಕ್ರವು ಮೇರು ಪರ್ವತವನ್ನು ಪ್ರತಿನಿಧಿಸುತ್ತದೆ. ಮೂರು ಶಿಖರಗಳ (ತ್ರಿಕೂಟಗಳ) ಕಲ್ಪನೆಯು ಇಲ್ಲಿ ಪ್ರಧಾನವಾಗಿದೆ. ತ್ರಿಕೋಣಾಕಾರದಲ್ಲಿರುವ ಪ್ರತಿಯೊಂದು ಶಿಖರ ಮೂರು ಪಾರ್ಶ್ವಗಳುಳ್ಳದ್ದು, ಮತ್ತು ಪ್ರತಿಯೊಂದು ಪಾರ್ಶ್ವದಲ್ಲಿಯೂ ಚಕ್ರಗಳಿವೆ. ಹೀಗೆ ಒಟ್ಟಿನಲ್ಲಿ ಒಂಬತ್ತು ಚಕ್ರಗಳು, ಶ್ರೀಚಕ್ರದೊಳಗೆ ಪ್ರವೇಶಿಸಲು ಆವರಣಗಳಿಗಿರುವ ಯೋನಿಗಳು. ಶ್ರೀಚಕ್ರಕ್ಕೆ ಸಂಬಂಧಿಸಿದ ಮಂತ್ರವೂ ಕೂಡ ಯಂತ್ರದ ಮೂರು ಶಿಖರಗಳಿಗೆ (ಶೃಂಗಗಳಿಗೆ) ಸಂವಾದಿಯಾಗಿರುವ ಮೂರು ಖಂಡಗಳುಳ್ಳದ್ದು. ಯಂತ್ರದಲ್ಲಿರುವ ನವಾವರಣಗಳಿಗೆ ಸಂವಾದಿಯಾಗಿ ಮಂತ್ರದಲ್ಲಿ ನವ ವರ್ಣಗಳು (ಅಕ್ಷರಗಳು) ಇವೆ. ಇವು ಇಡೀ ವಿಶ್ವವನ್ನು ಒಳಗೊಳ್ಳುವುವು. ಹೀಗೆ ಮಂತ್ರವೂ ಕೂಡ ಒಂದು 'ಮೇರು'ವೇ ಆಗಿದೆ.[37]

ಶ್ರೀಚಕ್ರದ ಮಂತ್ರವು ಬೀಜಾಕ್ಷರ ಸಂಯೋಜನೆಯಾಗಿರುವುದರಿಂದ 'ಮಾತೃಕಾಚಕ್ರ'ವೆಂದು ಅರ್ಥಪೂರ್ಣವಾಗಿ ವರ್ಣಿಸಲ್ಪಟ್ಟಿದೆ. ಆ ಬೀಜಾಕ್ಷರಗಳು ಈಗಾಗಲೇ ಹೇಳಿರುವಂತೆ, ಸೋಮ, ಸೂರ್ಯ ಅಗ್ನಿಗಳನ್ನು ಪ್ರತಿನಿಧಿಸುವ ಮೂರು ಖಂಡಗಳಲ್ಲಿ ಯೋಜಿಸಲ್ಪಟ್ಟಿವೆ.[38] ಮೂರೂ ವಲಯಗಳ ದೇವತೆಯಾದ 'ತ್ರಿಪುರಾ'ದೇವಿಯು ಯಂತ್ರ ಮತ್ತು ಮಂತ್ರಗಳೆರಡಕ್ಕೂ ಅಧಿಷ್ಠಾತೃ ದೇವತೆ. ತ್ರಿಪುಟಿಯು ಇಲ್ಲಿಯ ಪ್ರಧಾನ ಅಂತರ್ಭಾವವಾಗಿದೆ : ಮೂರು ಖಂಡಗಳು ಮತ್ತು ನಾಲ್ಕನೆಯದಾದ 'ತುರೀಯ'ದ 'ಸಂಯೋಗ', ಜಗತ್ತಿನ ಮತ್ತು ಆಧ್ಯಾತ್ಮಿಕ ಸಾಧನೆಯ ಅನುಷ್ಠಾನದ ಎಲ್ಲ ವಿವರಗಳೂ ಈ ತ್ರಿಪುಟಿಯಲ್ಲಿ ಅಂತರ್ಗತವಾಗಿವೆ ಮತ್ತು ಈ ತ್ರಿಪುಟಿಯಲ್ಲಿ ಗುಪ್ತವಾಗಿ ಅಂತರ್ಗತವಾದ ತುರೀಯವು ಆಧ್ಯಾತ್ಮಿಕ ಸಾಧನೆಯ ಪರಮೋಚ್ಚ ಧ್ಯೇಯವನ್ನು ಒಳಗೊಂಡಿದೆ.

ಯಂತ್ರದ ಪ್ರಥಮ ತ್ರಿಕೋಣವು (ಕೋಣ-ತ್ರಯ) ನಾಲ್ಕನೆಯ ಅಂಗವಾದ 'ಬಿಂದು'ವನ್ನೂ ಕೂಡಿ, ಮಂತ್ರದ ಮೊದಲ ಬೀಜಾಕ್ಷರವಾದ 'ಐಂ' ಎಂದು ಪರಿಗಣಿಸಲಾಗಿದೆ. (ಐಂ, ಬಿಂದುವಿನಿಂದೊಡಗೂಡಿದ ತ್ರಿಕೋಣವನ್ನು ಪ್ರತಿನಿಧಿಸುವುದೆಂಬುದನ್ನು ಹಿಂದಿನ ಪ್ರಕರಣದಲ್ಲಿ ವಿವರಿಸಿದೆ). ಈ ಪ್ರಥಮ ಬೀಜಾಕ್ಷರ 'ಐಂ'ದಿಂದಲೇ ಇಡೀ ಮಂತ್ರ ಉಗಮಹೊಂದುತ್ತದೆ. 'ಐಂ' ಎಂಬ ಅಕ್ಷರವೇ ಶಿವ (ಅ) ಮತ್ತು ಶಕ್ತಿ (ಈ)ಗಳ ಸಂಯೋಗದ ಸಂಕೇತವಾಗಿದೆ. ಸಂಸ್ಕೃತದ 'ಐ'(ए)ದ ಆಕಾರವೇ ಯಂತ್ರ ಮತ್ತು ಮಂತ್ರಗಳ ಏಕಾತ್ಮತೆಯನ್ನು ನಿದರ್ಶಿಸಲು ಪರ್ಯಾಪ್ತವಾಗಿದೆ ಮತ್ತು 'ಅ' ಮತ್ತು 'ಈ'ಗಳೇ ಶಿವ ಮತ್ತು ಶಕ್ತಿಗಳನ್ನು ಪ್ರತಿನಿಧಿಸುವುದೆಂದು ಭಾವಿಸಲಾಗಿದೆ. ಕೇಂದ್ರದ'ಬಿಂದು'ವು ಅವ್ಯಾಕೃತವಾದ ಅನುಸ್ವಾರ(ಂ)ದಂತೆ, ಮೂರ್ತ ಸಂಕೇತ ಮತ್ತು ವ್ಯಕ್ತ ಉಚ್ಚಾರಗಳಿಗೆ ನಿಲುಕುವುದಿಲ್ಲ. (ಅಂತೆಯೇ), ಅದು ತ್ರಿಕೋಣದ ಮೂರು ಮೂರ್ತಖಂಡಗಳಲ್ಲಿ ಅಂತರ್ನಿಹಿತವಾದ

ನಾಲ್ಕನೆಯದು (ತುರೀಯ)ಎಂದು ಭಾವಿಸಲಾಗಿದೆ. ಯಂತ್ರ ಮತ್ತು ಮಂತ್ರ - ಇವೆರಡರ ಮೂರು ಖಂಡಗಳೂ (ಕೂಟಗಳೂ) 'ಚಕ್ರ'ಗಳೆಂದೇ ಕರೆಯಲ್ಪಡುತ್ತವೆ.



ಅಗ್ನಿ, ಸೂರ್ಯ ಮತ್ತು ಚಂದ್ರ ಇವು ಮೂರು ಚಕ್ರಗಳು, ನಿರಾಕಾರ ಬ್ರಹ್ಮವು ನಾಲ್ಕನೆಯದು. ಇವಕ್ಕೆ ಸಂಬಂಧಿಸಿದ ದಿಕ್ಕುಗಳು (ಆಮ್ನಾಯ ಅಥವಾ ಸಮಯ) - ಪೂರ್ವ, ದಕ್ಷಿಣ, ಹಾಗೂ ಪಶ್ಚಿಮ, ನಾಲ್ಕನೆಯದು ಉತ್ತರ. ಅವುಗಳಲ್ಲಿರುವ ಆಧ್ಯಾತ್ಮಿಕ ಕೇಂದ್ರಗಳು (ಪೀಠಗಳು) ಕ್ರಮವಾಗಿ ಕಾಮರೂಪ, ಪೂರ್ಣಗಿರಿ, ಜಾಲಂಧರ ಮತ್ತು ಉಡ್ಡೀಯಾನ (ನಾಲ್ಕನೆಯದು) ಮತ್ತು ಅವುಗಳ ಅಧಿಷ್ಠಾತೃ ದೇವತೆಗಳು ಕ್ರಮವಾಗಿ ಕಾಮೇಶ್ವರೀ, ವಜ್ರೇಶ್ವರೀ ಮತ್ತು ಭಗಮಾಲಿನೀ ಹಾಗೂ ನಾಲ್ಕನೆಯದಾಗಿ ಮಹಾತ್ರಿಪುರಸುಂದರೀ. ಮೂರು ಶಕ್ತಿಗಳು ಯಾವವೆಂದರೆ, ವಾಮಾ (ಬ್ರಹ್ಮ-ಭಾರ್ಯೆ), ಜ್ಯೇಷ್ಠಾ (ವಿಷ್ಣುಪತ್ನಿ) ಮತ್ತು ರೌದ್ರೀ (ರುದ್ರನ ಅರ್ಧಾಂಗಿನಿ) ಮತ್ತು ನಾಲ್ಕನೆಯದು 'ಶಾಂತಾ. ತತ್ಸಂಬಂಧಿತವಾದವುಗಳು ಇಚ್ಛಾ ಶಕ್ತಿ (ಬ್ರಹ್ಮರಾಣಿಯಾದ ಭಾರತಿಗೆ ಸಂಬಂಧಿಸಿದುದು), ಜ್ಞಾನಶಕ್ತಿ

(ವಿಷ್ಣುಪತ್ನಿಯಾದ 'ಕ್ಷಿತಿ'ಗೆ ಸಂಬಂಧಿಸಿದುದು) ಕ್ರಿಯಾಶಕ್ತಿ (ರುದ್ರಪತ್ನಿಯಾದ 'ಅಪರ್ಣಾ'ಗೆ ಸಂಬಂಧಿಸಿದುದು). ಮೂರು ತತ್ವಗಳು : 'ಆತ್ಮ', 'ವಿದ್ಯಾ' (ಮುಕ್ತಿಕಾರಕ ಜ್ಞಾನ) ಮತ್ತು 'ಶಿವ' (ಆತ್ಯಂತಿಕ ಮಂಗಳ). 'ಸರ್ವ'ವೆಂಬುದು ನಾಲ್ಕನೆಯದು. ಮೂರು ಆತ್ಮಗಳು : ವ್ಯಷ್ಟಿಗತ ಜೀವಾತ್ಮ, ಅಂತರಾತ್ಮ ಮತ್ತು ಪರಮೋನ್ನತ ಆತ್ಮ (ಪರಮಾತ್ಮ). 'ಜ್ಞಾನಾತ್ಮ'ವು ನಾಲ್ಕನೆಯದು. ವ್ಯಷ್ಟಿ ಜೀವಾತ್ಮನ ಅವಸ್ಥೆಗಳು ಮೂರು : ಜಾಗ್ರತಾವಸ್ಥೆ, ಸ್ವಪ್ನಾವಸ್ಥೆ ಮತ್ತು ಸುಷುಪ್ತ್ಯವಸ್ಥೆ. ನಾಲ್ಕನೆಯದು 'ತುರೀಯಾವಸ್ಥೆ'. ಜ್ಞಾನಗ್ರಹಣ ಕ್ರಿಯೆಗೆ (ಪೂತ) ಮೂರು ಅಂಗಗಳು : ಜ್ಞಾತೃ (ತಿಳಿದುಕೊಳ್ಳುವವ) ಜ್ಞಾನ (ತಿಳಿವಳಿಕೆ) ಮತ್ತು ಜ್ಞೇಯ (ತಿಳಿಯಲ್ಪಡುವ ವಸ್ತು). ಅವು ಮೂರರ ಸಂಪೂರ್ಣ ಐಕ್ಯವು 'ಸಾಮರಸ್ಯ' - ನಾಲ್ಕನೆಯದು. 'ಶಬ್ದ'ಕ್ಕೆ (ಶಾಬ್ದಿಕಾಭಿವ್ಯಕ್ತಿಗೆ) ಮೂರು ಹಂತಗಳು : ಪಶ್ಯಂತೀ (ಪ್ರತ್ಯೇಕವಾಗಿ ಗ್ರಹಿಸಲಾಗದಿದ್ದರೂ, ಇರುವುದೆಂಬ ಅರಿವು ಕೊಡುವುದು). ಮಧ್ಯಮಾ (ಪ್ರತ್ಯೇಕವಾಗಿಸಿ ಅರಿಯಲ್ಪಟ್ಟು, ಉಚ್ಚರಿತವಾಗಿರದುದು) ವೈಖರೀ (ಶಾಬ್ದಿಕವಾಗಿ ಉಚ್ಚರಿತ ಮತ್ತು ಅರ್ಥಸೂಚಕ). ಇವಕ್ಕೆ ಅತೀತವಾಗಿರುವ 'ಪರಾ' ಎಂಬುದೇ ನಾಲ್ಕನೆಯದು.

ಶ್ರೀಚಕ್ರದ ಬೇರೆಬೇರೆ ಭಾಗಗಳಲ್ಲಿ, ದೇವಿಯ ವಿವಿಧ ಅಭಿವ್ಯಕ್ತಿ ಸ್ವರೂಪಗಳನ್ನು ಸಂಕೇತಿಸುವ ಸಂಸ್ಕೃತ ವರ್ಣಮಾಲೆಯ ಅಕ್ಷರಗಳನ್ನು ಬರೆಯಲಾಗುತ್ತದೆ ಎಂಬುದನ್ನು ಸ್ಮರಿಸಿಕೊಳ್ಳಬಹುದು. 'ಕೈಲಾಸಪ್ರಸ್ತಾರ' ಪರಂಪರೆಯಲ್ಲಿಯ ಯಂತ್ರವಿನ್ಯಾಸದಲ್ಲಿ ಐವತ್ತು 'ಮಾತೃಕೆ'ಗಳೊಂದಿಗಿನ ದೇವಿಯ ಏಕತ್ವವನ್ನು ಸಂಕೇತಿಸಲಾಗುತ್ತದೆ. ಆಲಂಕಾರಿಕ ಭಾಗಗಳಾದ ಸುತ್ತಲಿನ ಚೌಕಪ್ರದೇಶವಾದ 'ಭೂಪುರ' ಮತ್ತು ಪರಿಧಿಯಲ್ಲಿರುವ ತ್ರಿವೃತ್ತಗಳನ್ನು ಅಕ್ಷರಗಳನ್ನು ಅಂಕಿತಗೊಳಿಸುವಾಗ ಸೇರಿಸಿರುವುದಿಲ್ಲ.

ಷೋಡಶದಲ ಪದ್ಮದ ಹದಿನಾರು ದಲ(ಎಸಳು)ಗಳಲ್ಲಿಯೂ, ಒಂದೊಂದರಲ್ಲಿ ಒಂದರಂತೆ ಹದಿನಾರು ಸ್ವರಾಕ್ಷರಗಳನ್ನು ಬರೆಯಲಾಗುವುದು. 'ಅ'(अ) ವನ್ನು ಪೂರ್ವದ ಪ್ರವೇಶದ ಹತ್ತಿರದ ದಳದಲ್ಲಿ ಬರೆದು, ಅಪ್ರದಕ್ಷಿಣವಾಗಿ ಕ್ರಮದಲ್ಲಿ ಬರೆಯಲಾಗುವುದು. ಅಷ್ಟದಳ ಪದ್ಮದ ಎಸಳುಗಳಲ್ಲಿ 'ಕ'ದಿಂದ 'ಕ್ಷ'ದ ವರೆಗಿನ ವ್ಯಂಜನಾಕ್ಷರ ವರ್ಗಗಳನ್ನು ಬರೆಯಲಾಗುವುದು. ಇಲ್ಲಿ 'ಸ್ವರ'ಗಳು 'ಶಕ್ತಿ'ಯೆಂದೂ ವ್ಯಂಜನಗಳು 'ಶಿವ'ಎಂದೂ ಭಾವಿಸಲ್ಪಡುತ್ತವೆ. ಹೀಗೆ ಎರಡು ಕಮಲಗಳೇ 'ಶಿವ' ಮತ್ತು 'ಶಕ್ತಿ' ಸಂಯೋಗವನ್ನು ಸೂಚಿಸುವುವಾಗಿವೆ.

ವರ್ಣಮಾಲಾಕ್ಷರಗಳನ್ನು ಅಂಕಿತಗೊಳಿಸುವುದು ಇನ್ನೂ ಮುಂದುವರಿಯುತ್ತದೆ: ಅಷ್ಟಕೋಣದ ವರೆಗೆ, ಚತುರ್ದಶಾರದ ಪ್ರತಿಯೊಂದು ಮೂಲೆಯಲ್ಲಿಯೂ ಒಂದೊಂದು ಅಕ್ಷರ ಬರೆಯಲಾಗುತ್ತದೆ. ಮತ್ತು ಮೂಲತ್ರಿಕೋಣ(ಅಥವಾ ವಾಗ್ಭವ)ದಲ್ಲಿ ಪಂಚದಶಿಯ ಒಂದೊಂದು ಖಂಡಗಳನ್ನು - ಅಂದರೆ, ಪೂರ್ವಕೋಣದಲ್ಲಿ ಪ್ರಥಮ ಖಂಡವನ್ನೂ, ಎರಡನೆಯ ಮತ್ತು ಮೂರನೆಯ ಖಂಡವನ್ನು ಬಲ ಮತ್ತು ಎಡ ಶೃಂಗದಲ್ಲಿಯೂ ಬರೆಯಲಾಗುತ್ತದೆ. ಕೇಂದ್ರದ 'ಬಿಂದು'ವಿನಲ್ಲಿ ಏನನ್ನೂ ಬರೆಯಲಾಗುವುದಿಲ್ಲ ಯಾಕೆಂದರೆ, ಅದು ಯಾವುದೇ ದೃಶ್ಯ ಅಥವಾ ಶಾಬ್ದಿಕ ಸಂಕೇತಕ್ಕೆ ಮೀರಿದ್ದಾಗಿದೆ. ಹೇಗೇ ಇರಲಿ, ಆದರೆ, ಬಿಂದುವು ಒಂದು ವರ್ತುಲವಾಗಿ ವಿಸ್ತರಿಸಲು (ಊದಿಕೊಳ್ಳಲು) (ಉಚ್ಛೂನ ಸ್ಥಿತಿ) ಅವಕಾಶಮಾಡಿಕೊಟ್ಟಾಗ, ಅದರಲ್ಲಿ ಪುರುಷ ಸಂಕೇತದ ಬೀಜಾಕ್ಷರ 'ಓಂ' ಮತ್ತು ದೇವಿಗೆ ವಿಶಿಷ್ಟವಾದ ಬೀಜಾಕ್ಷರ 'ಈಂ' ಬರೆಯಲ್ಪಡುತ್ತವೆ.

'ಪಂಚದಶಿ'ಯಲ್ಲಿರುವ ಅಕ್ಷರಗಳಿಂದ ಯಂತ್ರದ ಒಂಭತ್ತೂ ಚಕ್ರಗಳು ಹೇಗೆ ಉಗಮಗೊಂಡವು ಎಂಬ ಬಗ್ಗೆ ಒಂದು ವಿವರಣೆಯಿದೆ :

ಪಂಚದಶಿಯಲ್ಲಿ ಮೂರುಸಲ ಬರುವ, ಇಚ್ಛಾ, ಜ್ಞಾನ, ಕ್ರಿಯಾ ಶಕ್ತಿಗಳನ್ನು ಸಂಕೇತಿಸುವ 'ಕ', ಹಾಗೂ ಇದರೊಂದಿಗೆ ಸೇರಿ 'ಕಾಮ' ಮತ್ತು 'ಕಲಾ' ಇವುಗಳ ಸಂಯೋಗವನ್ನು ಪ್ರತಿನಿಧಿಸುವ 'ಈಂ' ಇವುಗಳಿಂದ ಕೇಂದ್ರದ 'ಬಿಂದು'ವು ಉಗಮವಾಗುತ್ತದೆ. ಇದು ಪ್ರಥಮ ಚಕ್ರ. ನಂತರದ ಎರಡು ಚಕ್ರಗಳು ಅಂದರೆ, ಪ್ರಥಮ ತ್ರಿಕೋಣ ಮತ್ತು ಅಷ್ಟಕೋಣಾಕೃತಿಗಳು ಸಂಯುಕ್ತ ಬೀಜಾಕ್ಷರವಾದ 'ಹ್ರೀಂ' ದಿಂದ ಉಗಮವಾಗಿವೆ. ಮುಂದಿನ ಮೂರು ಚಕ್ರಗಳು (ಸ್ಥಿತ್ಯವಸ್ಥೆಯನ್ನು ಒಳಗೊಂಡಿರುವವು), ಎರಡು ಸಲ ಪಂಚದಶಿಯಲ್ಲಿ ಬರುವ 'ಹ' ಮತ್ತು 'ಈಂ' ದಿಂದ ಕ್ರಮವಾಗಿ ಉದ್ಭವವಾಗುತ್ತವೆ. ಪರಿಧಿಯಲ್ಲಿರುವ ಎರಡು ಚಕ್ರಗಳು (ಎರಡು ಪದ್ಮಗಳು), ಎರಡುಸಾರಿ ಬರುವ 'ಸ' ಅಕ್ಷರದಿಂದ ಉಗಮಗೊಂಡಿವೆ. ಕೊನೆಯ ಚಕ್ರವಾದ ಚತುರಸ್ರ ಮಂಡಲವು ಮಂತ್ರದಲ್ಲಿ ಮೂರುಸಾರೆ ಬರುವ 'ಲ' ಅಕ್ಷರದಿಂದ ಉಗಮವಾಗಿದೆ.[39]

ಪ್ರತಿಯೊಂದು ಚಕ್ರಕ್ಕೂ ಅದರದ್ದೇ ಆದ ವಿಶಿಷ್ಟ ಮಂತ್ರವೂ ಇದೆ :

1) ಭೂಪುರ : ಅಂ । ಆಃ । ಸೌಃ ।

2) ಷೋಡಶ ಪತ್ರಕ : ಐಂ । ಕ್ಲೀಂ । ಸೌಃ ।

3) ಅಷ್ಟದಲ ಪದ್ಮ : ಹ್ರೀಂ । ಕ್ಲೀಂ । ಸೌಃ ।

4) ಚತುರ್ದಶಾರ : ಹೈಂ । ಹ್ಸ್ಕ್ಲೀಂ । ಹ್ಸೌಃ ।

5) ಬಹಿರ್ದಶಾರ : ಹ್ಸೌಃ । ಹ್ಸ್ಕ್ಲೀಂ । ಕ್ಲಸ್ಸೌಃ ।

6) ಅಂತರ್ದಶಾರ : ಹ್ರೀಂ । ಕ್ಲೀಂ । ಬ್ಲೇಂ ।

7) ಅಷ್ಟಕೋಣ : ಹ್ರೀಂ । ಶ್ರೀಂ । ಸೌಃ ।

8) ತ್ರಿಕೋಣ : ಹ್‌ಸ್ರೌ । ಕ್‌ಸ್ಕ್ಲ್ರೀಂ । ಹ್ ಸ್ರೌಃ ।

9) ಬಿಂದು : ಪಂಚದಶೀ ಅಥವಾ ಷೋಡಶೀ

ಆಕರ ಸೂಚಿಕೆ

1. ಅಕಾರಃ ಸರ್ವವರ್ಣಾಗ್ರ್ಯಃ ಪ್ರಕಾಶಃ ಪರಮಃ ಶಿವಃ ।
ಹಕಾರೋಽಂತ್ಯಃ ಕಲಾರೂಪೋ ವಿಮರ್ಶಾಖ್ಯಃ ಪ್ರಕೀರ್ತಿತಃ ॥
ಅತೋಽಕಾರ ಹಕಾರಾಭ್ಯಾಂ ಅಹಮಿತ್ಯ ಪೃಥಕ್ತಯಾ ।
ಪ್ರಪಂಚಂ ಶಿವಶಕ್ತಿಭ್ಯಾಂ ಕ್ರೋಡೀಕೃತ್ಯ ಪ್ರಕಾಶತೇ ॥

2. ...... ವರಿವಸ್ಯಾ ರಹಸ್ಯ 2.

3. ...... ಕಕಾರಾದಿ ಕ್ಷಕಾರಾಂತಾ ವರ್ಣಾಸ್ತೇ ಶಿವರೂಪಿಣಃ ।
ಅಕಾರಾದಿ ವಿಸರ್ಗಾಂತಾ ಸ್ವರಾಃ ಷೋಡಶ ಶಕ್ತಯಃ ॥
ಶಿವಶಕ್ತಿಮಯಾ ವರ್ಣಾಃ ಶಬ್ದಾರ್ಥಪ್ರತಿಪಾದಕಾಃ ।
ಶಿವಃ ಸ್ವರ ಪರಾಧೀನೋ ನ ಸ್ವತಂತ್ರಃ ಕದಾಪ್ಯನೌ ॥ (-ಮಾತೃಕಾ ಮಂಡಲ)

ಮತ್ತು -

ದೇವತಾ ಮಾತೃಕಾದೇವೀ ಬೀಜಂ ವ್ಯಂಜನ ಸಂಚಯಮ್ ।
ಶಕ್ತಯಸ್ತು ಸ್ವರಾ ದೇವಿ ಷಡಂಗನ್ಯಾಸಮಾಚರೇತ್ ॥ (ಜ್ಞಾನಾರ್ಣವ)

ಮತ್ತು -

ಸಮಸ್ತ ಮಾತೃಧಯಾತುಹಲಾ ಬೀಜಾನಿ ಶಕ್ತಯಃ ।
ಸ್ವರಾ ಸ್ಯುಃ ಪುರಮೇಶಾನಿ ಜಾತ್ಯಾ ವ್ಯಕ್ತಿತು ಕೀಲಕಃ ॥
ಅನಿರ್ವಾಚ್ಯತಾಂ ಸ್ವರ ಸಂಯೋಗೇನ ಸುವಾಚ್ಯತಃ - ಇತ್ಯಾದಿ. (ಉತ್ತರ ತಂತ್ರ)

4. ಕಾಮ-ಕಲಾ ವಿಲಾಸ ।

ನಿತ್ಯಾಸ್ಥಿತ್ಯಾಕಾರಾಸ್ಥಿತಯಶ್ಚ ।
ಶಿವಶಕ್ತಿ ಸಮಾಸಾಕಾರಾಃ ॥

ಮತ್ತು -

ದರ್ಶಾದ್ಯಾಃ ಪೌರ್ಣಮಾಂತಶ್ಚ ಕಲಾಃ ಪಂಚದಶೈವ ತು ।
ಷೋಡಶೀ ತು ಕಲಾಜ್ಞೇಯಾ ಸಚ್ಚಿದಾನಂದ ರೂಪಿಣೀ ॥

ಶಿವನನ್ನು ಚಂದ್ರನ ದೃಶ್ಯಕಲೆಗಳಿಗೆ ಹೋಲಿಸಲಾಗಿದೆ (ದರ್ಶಾಖ್ಯಾ ಚಂದ್ರಕಲಾ). ಮತ್ತು ಶಕ್ತಿಯನ್ನು, ಚಂದ್ರನ್ನು ದೃಗ್ಗೋಚರನಾಗುವಂತೆ ಮಾಡುವ ಕಲೆಗಳಿಗೆ ಹೋಲಿಸಲಾಗಿದೆ (ದೃಷ್ಟಾಖ್ಯಾ ಕಲಾ). - ಸೌಂದರ್ಯಲಹರಿಯ ವ್ಯಾಖ್ಯಾನವನ್ನು ನೋಡಿರಿ. (ಅರುಣಾಮೋದಿನೀ).

5. ಷೋಡಶೇಂದೋಃಕಲಾಭಾನೋರ್ದ್ವಿದ್ವಾದಶ ದಶಾನಲೇ ।
ಸಾ ಪಂಚಶತ್ಕಲಾ ಜ್ಞೇಯಾ ಮಾತೃಕಾ ಚಕ್ರ ರೂಪಿಣೀ ॥

6. ತ್ರಿಪುರಾ ತ್ರಿವಿಧಾ ದೇವೀ ಬ್ರಹ್ಮವಿಷ್ಣ್ವೀಶರೂಪಿಣೀ ।
ಜ್ಞಾನಶಕ್ತಿ ಕ್ರಿಯಾಶಕ್ತಿರಿಚ್ಛಾಶಕ್ತ್ಯಾತ್ಮಿಕಾ ಪ್ರಿಯೇ ॥ (-ವಾಮಕೇಶ್ವರ ತಂತ್ರ).

7. ವಾಗೀಶ್ವರೀ ಜ್ಞಾನಶಕ್ತಿರ್ವಾಗ್ಭವೇ ಮೋಕ್ಷರೂಪಿಣೀ ।
ಕಾಮರಾಜೇ ಕ್ರಿಯಾಶಕ್ತಿಃ ಕಾಮೇಶ್ವರೀ ಕಾಮರೂಪಿಣೀ ॥

ಶಕ್ತಿಬೀಜೇ ಪರಾಶಕ್ತಿಃ ಕಾಮೇಶ್ವರೀ ಕಾಮರೂಪಿಣೀ ।
ಏವಂ ದೇವೀ ತ್ರ್ಯಕ್ಷರೀ ತು ಮಹಾ ತ್ರಿಪುರ ಸುಂದರೀ ॥

8. ಶ್ರೀವಿದ್ಯಾರ್ಣವ ತಂತ್ರ 7, 'ಶ್ರೀವಿದ್ಯಾಭೇದಾನಾಮುದ್ಧಾರಃ'' ಪ್ರಕರಣ PP 114,115.

9. ವರಿವಸ್ಯಾ ರಹಸ್ಯದ ಮೇಲಿನ 'ಪ್ರಕಾಶ'ವನ್ನು ನೋಡಿ. ಈ ಕೆಳಗಿನ ಶ್ಲೋಕವೂ ಮಂತ್ರದ ಜ್ಞಾಪಕ ಸಂಕೇತದಂತೆ ಹೇಳಲಾಗಿದೆ :

ಕಾಮೋ ಯೋನಿಃ ಕಮಲಾ ವಜ್ರಪಾಣಿರ್ಗುಹಾ ಮಾತರಿಶ್ವಾಭ್ರಮಿಂದ್ರಃ ।
ಪುನರ್ಗುಹಾ ಸಕಲಾ ಮಾಯಾ ಚ ಪುರುಚ್ಯೇಷಾ ವಿಶ್ವಮಾತಾಽಽದಿ ವಿದ್ಯಾ ॥

ಉಪಯೋಗಿಸಿದ ಶಬ್ದಗಳ ವಿವರಣೆ :

ಕಾಮಃ (ಮನ್ಮಥ)='ಕ';	ಯೋನಿಃ (ಉಗಮಸ್ಥಾನ)=ಏ
ಕಮಲಾ (ದೇವತೆ)=ಈ;	ವಜ್ರಪಾಣಿಃ (ಇಂದ್ರ)=ಲ
ಗುಹಾ (ಸ್ಕಂದ)=ಹ್ರೀಂ;	ಹಸಾ=ಹಸ
ಮಾತರಿಶ್ವ (ವಾಯು)=ಕ;	ಅಭ್ರ (ಆಕಾಶ)=ಹ
ಇಂದ್ರ=ಲ	ಮತ್ತೊಮ್ಮೆ, ಗುಹಾ=ಹ್ರೀಂ
ಸಕಲಾ=ಸಕಲ;	ಮಾಯಾ=ಹ್ರೀಂ

10. **ಕಾದೇಃ ಪಶ್ಚಾದೇವಹಾದೇರುದ್ಧಾರಃ ।**

11. **ತತ್ರ ಕಾದಿರ್ಯಥಾ ಪರಾ ।**

12. ಉದಾ : ಜ್ಞಾನಾರ್ಣವ 24, 28.

ಷೋಡಶಾಷಾಣಾಂ ಪರಾವಿದ್ಯಾ ಶ್ರೀವಿದ್ಯೇತ್ಯಭಿಧೀಯತೇ ।

ಮತ್ತು ಸಿದ್ಧಯಾಮಲವನ್ನು ನೋಡಿ.

ಕಾಮೋ ಮಾಯಾ ರಾಮಾ ಬಾಲಾ ತ್ರಿಕೂಟಾ ಚ ಭಗಾಂಕುಶೀ ।
ಕಾಲೀ ಕಾಮಕಲಾ ಕೂರ್ಚಃ ಸರ್ವಾದೌ ಪ್ರಣವಃಪ್ರಿಯೇ ॥
ಶ್ರೀಮಹಾ ಷೋಡಶೀಯಂಚ ಯಾಖ್ಯಾತಾ ಭುವನತ್ರಯೇ ।
ಜ್ಞಾನೇನ ಮೃತ್ಯುಹಾ ಸರ್ವಾರ್ಮ್ನಾಯೈರ್ನಮಸ್ಕೃತಾ ॥

13. ಅದೇ 68, 69.

ನದೇಯಾ ಷೋಡಶಾಷಾಣಾಂಹಿ ಪ್ರಾಣ್ಯೈಃ ಕಂಠಗತೈರಪಿ ।
ಗೋಪಿತವ್ಯಾ ಮಹಾವಿದ್ಯಾ ಸ್ವಯೋನಿರಿವ ಪಾರ್ವತಿ ॥
ಉದಕೇ ಲವಣಂ ಲೀನಂ ಯಥಾ ಭವತಿ ಶೈಲಜೇ ।
ಮನೋಂಭವತಿ ವಿಲೀನಂ ಪಾದಯೋಃ ಶ್ರೀಗುರೋಃಪ್ರಿಯೇ ॥
ತದಾ ದೇಯಾ ಮಹಾವಿದ್ಯಾ ಕೃಪಯಾ ಷೋಡಶಾಕ್ಷರೀ ।
ರಾಜ್ಯಂ ದೇಯಂ ಶಿರಂದೇಯಂ ನ ದೇಯಾ ಷೋಪಶಾಕ್ಷರೀ ॥

14. ಅದೇ – 64.

ವೇದಶಾಸ್ತ್ರಪುರಾಣೇಷು ಯಾಮಲೇಷ್ವಪಿ ಗುಪ್ತಾ ಷೋಡಶಾರ್ಣಾ – ಇತ್ಯಾದಿ.
ನದೇಯಾ ಷೋಡಶಾಷಾಣಾಂಹಿ ಪ್ರಾಣ್ಯೈಃ ಕಂಠಗತೈರಪಿ ।
ಗೋಪಿತವ್ಯಾ ಮಹಾವಿದ್ಯಾ ಸ್ವಯೋನಿರಿವ ಪಾರ್ವತಿ ॥

15. ಷೋಡಶಾಕ್ಷರೀ ತು ಶ್ರೀಬೀಜಾವಸಾಯಿನೀ ಪಂಚದಶ್ಯೈವ ।

16. ಪಂಚದಶ್ಯಾಂ ತುರೀಯ ಸ್ವರೂಪಾ ಪಂಚದಶೀ ಸೂಕ್ಷ್ಮರೂಪೇಣ ವಿರಾಜತೇ ।

17. ನೋಡಿ : ಕಾಮ ಕಲಾ ವಿಲಾಸ 18

ಷಡ್‌ತ್ರಿಂಶತ್ತತ್ತ್ವಾತ್ಮ ತತ್ತ್ವಾತೀತಾ ಚ ಕೇವಲಾ ವಿದ್ಯಾ ।

18. ಸುಭಗೋದಯ - ನೋಡಿ :

ದರ್ಶಾದ್ಯಾಃ ಪೂರ್ಣಿಮಾಂತಾ ಪಂಚದಶೈವತು ।

ಷೋಡಶೀ ತು ಕಲಾ ಜ್ಞೇಯಾ ಸಚ್ಚಿದಾನಂದ ರೂಪಿಣೀ ॥

19. ವರಿವಸ್ಯಾ ರಹಸ್ಯ 2, 54, 55.

ಷಡ್‌ತ್ರಿಂಶತ್ತತ್ತ್ವಾತ್ಮ ತತ್ತ್ವಾತೀತಾ ಚ ಕೇವಲಾ ವಿದ್ಯಾ ।

20. ಅದೇ 59

21. ಕಕಾರಸ್ಯ ಆತ್ಮವಾಚಿತ್ವಾತ್.

22. ನೋಡಿ : ಸ್ವಚ್ಛಂದ ಸಂಗ್ರಹ :

ಅಶುದ್ಧ ಶುದ್ಧ ಮಿಶ್ರಾಣಾಂ ಪ್ರಮಾತೃಣಾಂ ಪರಂ ವಪುಃ ।

ಕ್ರೋಧೀಶ ತ್ರಿತಯೇ ನ ಸ್ಯ ವಿದ್ಯಾಸ್ಥೇನ ಪ್ರಕಾಶತೇ ॥

23. **ಯದೇದಶಮೇಕಾರಂ ಬೀಜಂ ಕೋಣತ್ರಯಾತ್ಮಕಮ್ ।** (ಚತುಃ ಶತೀ)

ಮತ್ತು -

ಉದ್ಡೋಲಃ ಕಾಮರೂಶ್ಚ ಏಕಾರಶ್ಚ ತ್ರಿಕೋಣಕಃ । (ಮಾತೃಕಾಕೋಶಃ)

24. **ತ್ರಿಕೋಣರೂಪೀ ಶಕ್ತಿರ್ಬಿಂದುರೂಪಃ ಶಿವಸ್ವಯಮ್ ।**

ಅವಿನಾಭಾವಸಂಬಂಧಸ್ತಸ್ಮಾದ್ಬಿಂದು ತ್ರಿಕೋಣಯೋಃ ॥

ಉಭಯಸ್ಯಾಸ್ಯದೇವಸ್ಯ ವಿಗ್ರಹೇ ಯಂತ್ರ ಕಲ್ಪನಾ ।

ವಿನಾಯಂತ್ರೇಣ ಚೇತ್ಪೂಜಾ ದೇವತಾ ನಾ ಪ್ರಸೀದತಿ ॥

25. ನೋಡಿ : 'ಪದಾರ್ಥಚಂದ್ರಿಕಾ' - ಸೌಂದರ್ಯಲಹರಿಯನ್ನು ಕುರಿತು ।

26. ನೋಡಿ : ಡಿಂಡಿಮವ್ಯಾಖ್ಯಾನ - ಸೌಂದರ್ಯಲಹರಿಯನ್ನು ಕುರಿತು ।

27. ಈಕಾರಸ್ಯ ಗುಹಾವಾಚಿದ್ವಾದವಿದ್ಯಾರೂಪತಯಾ ತದವಚ್ಛಿನ್ನತ್ವಾತ್ ।

28. ಅವಿದ್ಯಾದಕಾರ್ಯ ಸಂಬಂಧ ವಿಚ್ಛೇದನಾದಸಂಗಸ್ತುರೀಯಃ ।

29. ಶ್ರೀಕ್ರಮ 3, 4

ಕಕಾರೇ ಸರ್ವಮುತ್ಪನ್ನಂ ಕಾಮಕೈವಲ್ಯದಾಯಕಂ ।
ಲ ಕಾರೇ ಸಕಲೈಶ್ವರ್ಯಂ ಈಕಾರೇ ಸರ್ವ ಸೌಖ್ಯದಮ್ ॥
ಏವಂ ಬೀಜತ್ರಯಂ ದೇವಿ ವಿದ್ಯಾನಾಂ ಸಾರಸಂಗ್ರಹಮ್ ।
ವಾಗ್ಭವಂ ಕಾಮರಾಜಂ ಚ ಶಕ್ತಿಂ ತೇನ ನಿಯೋಜಯೇತ್ ॥

30. ವರಿವಸ್ಯಾ ರಹಸ್ಯ 1, 43

31. ಕದ್ವಯಂ ಹದ್ವಯಂ ಚೈವ ಶೈವೋ ಭಾಗಃ ಪ್ರಕೀರ್ತಿತಃ ।
ಶಕ್ತ್ಯಕ್ಷರಾಣಿ ಶೇಷಾಣಿ ಹ್ರೀಂಕಾರ ಉಭಯಾತ್ಮಕಃ ॥

32. ತ್ರಿಖಂಡಂ ಮಾತೃಕಾ ಚಕ್ರಂ ಸೋಮಸೂರ್ಯಾನಲಾತ್ಮಕಮ್ ॥

(- ರುದ್ರ ಯಾಮಲ)

33. ವರಿವಸ್ಯಾ ರಹಸ್ಯ 1, 21.

34. ಶ್ರೀಚಕ್ರಮಪಿ ದೇವೇಶಿ ಮೇರುರೂಪಂ ನ ಸಂಶಯಃ ।

35. ನೋಡಿ : ಭಾಗವತ 5, 16; ಮತ್ಸ್ಯಪುರಾಣ 95, 7.
ಮತ್ತು ನರಸಿಂಹ ಪುರಾಣ 30, 14, 45.

36. ನೋಡಿ : ರತ್ನಾಕರ ಶಾಂತಿ, ಮೇರು ಮಂಡಲ :
ಮಂಡಲಗ್ಯಿಚೋದ (ಟಿಬೇಟಿ ಭಾಷೆಯಲ್ಲಿ).

37. ನವಾಕ್ಷರೋ ಮೇರುರಯಂ ಬ್ರಹ್ಮಾಂಡಗೋಲಕಃ ।

38. ತ್ರಿಖಂಡಂ ಮಾತೃಕಾ ಚಕ್ರಂ ಸೋಮಸೂರ್ಯಾನಲಾತ್ಮಕಮ್ ।
ಮಹಾಲಕ್ಷ್ಮ್ಯಾಃ ಪುರಂ ಚಕ್ರಂ ತತ್ರೈವಾಸ್ತೇ ಸದಾಶಿವಃ ॥ (-ರುದ್ರಯಾಮಲ)

39. ವರಿವಸ್ಯಾ ರಹಸ್ಯ 2, 99, 100

ಕತ್ರಿತಯಾದೋಕಾರ ಬಿಂದುರ್ಜಾತಃ ತದಗ್ರಿಮೇಚಕ್ರೇ ।
ಹೃಲ್ಲೇಖಾಭಿಸ್ತತ್ವರ ಚಕ್ರೇ ಜಾತೇ ಸಕಾರಾಭ್ಯಾಮ್ ॥
ಏಕಾರೇಣ ಚ ತತ್ವರ ಚಕ್ರೇ ಜಾತೇ ಸಕಾರಾಭ್ಯಾಮ್ ।
ಚತುರಸ್ರಾಣಿ ಲಕಾರೌ ಏವಂ ವಿದ್ಯಾಕ್ಷರೇಣ ಚಕ್ರಜನಿಃ ॥

★ ★ ★

ಅಧ್ಯಾಯ - 3

ಶ್ರೀಚಕ್ರ ತಂತ್ರ

ಶ್ರೀಚಕ್ರಂ ಶ್ರುತಿಮೂಲಕೋಶ ಇತಿ ಸಂಸಾರ ಚಕ್ರಾತ್ಮಕಮ್ ।
ವಿಖ್ಯಾತಂ ತದಧಿಷ್ಠಿತಾಕ್ಷರ ಶಿವಜ್ಯೋತಿರ್ಮಯಂ ಸರ್ವತಃ ॥
ಏತನ್ಮಂತ್ರಮಯಾತ್ಮಿಕಾಭಿರರುಣಾ ಶ್ರೀಸುಂದರೀಭಿರ್ವೃತಮ್ ।
ಮಧ್ಯೇ ಬೈಂದವ ಸಿಂಹಪೀಠ ಲಲಿತೇ ತ್ವಂ ಬ್ರಹ್ಮವಿದ್ಯಾಶಿವೇ ॥

(ದುರ್ವಾಸ)

1. ಶ್ರೀವಿದ್ಯಾ

ಶ್ರೀವಿದ್ಯೆಯು, ಶ್ರೀಚಕ್ರವೆಂಬ ಯಂತ್ರ, ಪಂಚದಶೀ ಅಥವಾ ಷೋಡಶೀ ಮಂತ್ರ ಮತ್ತು ಶ್ರೀವಿದ್ಯೆಯೆಂಬ ತಂತ್ರಗಳನ್ನೊಳಗೊಂಡ ಒಂದು ಪ್ರಾಚೀನ ಪಂಥ. ಈ ಪರಂಪರೆಯಲ್ಲಿ ಕೆಲವು ಪ್ರಾದೇಶಿಕ ವ್ಯತ್ಯಾಸಗಳಿರುವುದಾದರೂ, ಇದು ದೇಶಾದ್ಯಂತ ಪ್ರಚಲಿತವಿದೆ. ಅದರ ಮಂತ್ರ ಮತ್ತು ತಂತ್ರಗಳು ಶ್ರೀ ಚಕ್ರದಷ್ಟು ಜನಪ್ರಿಯವಿಲ್ಲ. ಶ್ರೀಚಕ್ರವು ಭಕ್ತರಿಗಷ್ಟೇ ಅಲ್ಲ, ಕಲಾಭಿಮಾನಿಗಳಿಗೂ ಸಾಕಷ್ಟು ಪರಿಚಿತವಿದೆ. ಶ್ರೀಚಕ್ರದ ನಿಜವಾದ ಪೂಜಕರು ತುಂಬ ಅಲ್ಪ ಸಂಖ್ಯೆಯಲ್ಲಿರುವರೇನೋ ನಿಜ. ಆದರೆ, ಅದನ್ನು ತುಂಬ ಗೌರವಿಸಿ, ಈ ಪವಿತ್ರ ಯಂತ್ರದ ಚಿತ್ರವನ್ನೋ ಅಥವಾ ಧಾತು ಫಲಕದಲ್ಲಿ ರಚಿಸಿದ ಆಕೃತಿಗಳನ್ನೋ ತಮ್ಮ ಮನೆಗಳಲ್ಲಿ ಅಥವಾ ಕೆಲಸಮಾಡುವ ಸ್ಥಳಗಳಲ್ಲಿ ಇಟ್ಟುಕೊಳ್ಳುವವರ ಸಂಖ್ಯೆ ದೊಡ್ಡದೇ ಇದೆ. ಶ್ರೀಚಕ್ರದ ನಿಜವಾದ ವಿಧಿವತ್ ಪೂಜೆನಡೆಯದಿದ್ದಾಗ್ಯೂ, ಕೇವಲ ಅದರ ಉಪಸ್ಥಿತಿ ಮಾತ್ರವೇ ಶ್ರದ್ಧಾಳುಗಳಿಗೆ ಐಹಿಕ ಮತ್ತು ಆಧ್ಯಾತ್ಮಿಕ ಲಾಭವನ್ನುಂಟು ಮಾಡುವುದೆಂಬ ನಂಬಿಕೆ ಇದೆ.

ಶ್ರೀಚಕ್ರದ ಪೂಜೆಯು, ಅಲ್ಲಿ ನಡೆಯುವ ಪೂಜಾ ವಿಧಿಗಳಲ್ಲಿ ಮುಖ್ಯವಾದೊಂದು ಭಾಗವೇ ಆಗಿರುವಂತಹ ಅನೇಕ ದೇವಸ್ಥಾನಗಳು, ಮುಖ್ಯವಾಗಿ ದಕ್ಷಿಣದಲ್ಲಿ ಇವೆ. ಕಾಂಚಿಪುರಂ (ಕಾಮಕೋಟಿ), ಚಿದಂಬರಂ (ಸಂಮೇಲನ ಚಕ್ರ), ಜಂಬುಕೇಶ್ವರಂ (ಲಲಿತಾ), ಕೂರ್ತಾಳಂ ಅವಡೈಯಾರ್ ಕೋಯಿಲ್ - ಈಯೆಲ್ಲವೂ ತಮಿಳನಾಡಿನಲ್ಲಿ, ಶೃಂಗೇರಿ (ಶಾರದಾ), ಕೊಲ್ಲೂರು (ಮೂಕಾಂಬಿಕಾ) ಕರ್ನಾಟಕದಲ್ಲಿ, ಇವು ಅವುಗಳಲ್ಲಿ ಕೆಲವು. ವಿಖ್ಯಾತ ಆಚಾರ್ಯ ಶಂಕರರು ಜನಪ್ರಿಯ ತಿರುಮಲ-ತಿರುಪತಿಯಲ್ಲಿ ಶ್ರೀಚಕ್ರವನ್ನು ಸ್ಥಾಪಿಸಿದರೆಂದೂ, ಮತ್ತು ಆ ದೇವಸ್ಥಾನದ ಅಸಾಮಾನ್ಯ ಸಂಪತ್ತಿಗೆ ಅದುವೇ ಕಾರಣವೆಂದೂ ಹೇಳುವ ಒಂದು ದಂತಕತೆಯಿದೆ, ಆದರೆ ಅದಕ್ಕೆ ಆಧಾರಗಳಿಲ್ಲ. ಈ ದಂತಕತೆಯಿಂದ ಸ್ಫೂರ್ತಿಪಡೆದ ಅನೇಕ ದೇವಸ್ಥಾನಗಳು ಶ್ರೀಚಕ್ರದ ಪ್ರಯೋಜನವನ್ನು ಪಡೆಯಲು ಪ್ರಾರಂಭಿಸಿವೆ. ಒಂದು ದೊಡ್ಡ ಶ್ರೀಚಕ್ರದಂತಿರುವ 'ವಿಮಾನ'ವನ್ನು ಗರ್ಭಗೃಹದ ಮೇಲೆ ಇರುವ ದೇವಸ್ಥಾನವೊಂದು ಕರ್ನಾಟಕದ, ಗುಲಬರ್ಗಾ ಜಿಲ್ಲೆಯ ಸನ್ನತಿಯಲ್ಲಿರುವ ಚಂದಲಾಪರಮೇಶ್ವರಿ ದೇವಸ್ಥಾನ.

'ಶ್ರೀಚಕ್ರ'ದ ಪರಂಪರೆಯನ್ನು ವೇದಪರಂಪರೆಯೊಂದಿಗೆ ಜೋಡಿಸುವ ಪ್ರಯತ್ನಗಳು ನಡೆದಿವೆ. ಏನೇ ಇರಲಿ, ಅದೊಂದು ತಾಂತ್ರಿಕ ಹಿನ್ನೆಲೆಯುಳ್ಳ ಪಂಥವೆಂಬುದರಲ್ಲಿ ಯಾವ ಸಂಶಯವೂ ಇರಲಾರದು. ತಾಂತ್ರಿಕ ಮತ್ತು ವೈದಿಕವೆಂಬ ಎರಡು ಪರಂಪರೆಗಳು ಬಹಳ ಪ್ರಾಚೀನಕಾಲದಿಂದಲೂ ನಮ್ಮ ದೇಶದಲ್ಲಿ ಇದ್ದವು ಎಂಬುದನ್ನು ಕಟ್ಟಾ ವೈದಿಕ ಪರಂಪರೆ ಆಧ್ವರ್ಯುವಾದ ಕುಲ್ಲೂಕ ಭಟ್ಟ (ಕ್ರೀ.ಶ. 1150-1300ರ ನಡುವೆ ಜೀವಿಸಿದ್ದ) ಮಾನ್ಯಮಾಡಿದ್ದಾನೆ.[1] ಸ್ವಾಭಾವಿಕವಾಗಿಯೇ ಈಯೆರಡೂ ಪರಂಪರೆಗಳ ನಡುವೆ ವಿರೋಧ ಮತ್ತು ಪೈಪೋಟಿಯಿತ್ತು. ಆದರೆ ಅಷ್ಟೇ ಸಹಜವಾಗಿ ಅವೆರಡೂ ಹೊಂದಾಣಿಕೆಯನ್ನು ಕಂಡುಕೊಂಡು ಪರಸ್ಪರ ವಿನಿಮಯಮಾಡಿಕೊಂಡವು. ವರ್ತಮಾನ ಕಾಲದ ಭಾರತದ

ಧಾರ್ಮಿಕ ಕಲ್ಪನೆಗಳು ಮತ್ತು ಪ್ರಾಯೋಗಿಕ ರೂಢಿಗಳು, ಎರಡೂ ಪರಂಪರೆಗಳ ಮಿಶ್ರಣವನ್ನೂ, ಬೆಸುಗೆಯನ್ನೂ ಪ್ರತಿಬಿಂಬಿಸುತ್ತವೆ. ಮಾತೃ-ದೇವತೆ ಮತ್ತು ಪಾಲಕ ಸ್ತ್ರೀದೇವತೆಗಳಿಗೆ ಸಂಬಂಧಿಸಿದ ಪಂಥಗಳು ತಾಂತ್ರಿಕ ಪರಂಪರೆಗೆ ಸೇರಿದವಾಗಿವೆ; ಅವುಗಳ ಆಚರಣಾ ವಿಧಿಗಳು ಈ ಹಿನ್ನೆಲೆಯಿರುವುದನ್ನು ಸ್ಪಷ್ಟವಾಗಿ ತೋರಿಸುತ್ತವೆ. ಆದರೆ, ಸಾಂಕೇತಿಕತೆ ಹಾಗೂ ಅರ್ಥವಿವರಣೆಗಳು ಅನೇಕ ಸಂದರ್ಭಗಳಲ್ಲಿ ವೈದಿಕ ವಿಚಾರ ವಿನ್ಯಾಸದಿಂದ ಎರವಲು ಪಡೆದವೆಂಬುದು ಬೇರೆಮಾತು.

ಶ್ರೀಚಕ್ರವು ತತ್ವಶಃ, ಲಲಿತಾ ತ್ರಿಪುರ ಸುಂದರಿ, ಷೋಡಶಿ, ರಾಜರಾಜೇಶ್ವರಿ ಅಥವಾ (ಸರಳವಾಗಿ) ದೇವಿ ಎಂದು ಕರೆಯಲ್ಪಡುವ ಮಾತೃದೇವತೆಯ ಪೂಜೆಯೇ ಆಗಿದೆ. ಅವಳ ಸಹಚರ ದೇವತೆಗಳೂ, ಸಹಾಯಕ ದೇವತೆಗಳೂ (ಯೋಗಿನಿ) ಕೂಡ

ಸ್ತ್ರೀ ದೇವತೆಗಳೇ ಆಗಿದ್ದು, ಅವರೂ, ಪರಿವಾರದೇವತೆಗಳೆಂದು ಪೂಜೆಗೊಳ್ಳುತ್ತಾರೆ. ಆಚರಣಾ ವಿಧಿಗಳ ವಿವರಗಳೂ ಕೂಡ ಸ್ತ್ರೀಪ್ರಾಧಾನ್ಯ ಲಕ್ಷಣಗಳುಳ್ಳವೇ ಆಗಿವೆ. ರೇಖಾಸಂಕೇತಗಳಲ್ಲಿ ಸ್ತ್ರೀತ್ವದ (ಯೋನಿಯ) ಸಂಕೇತವಾದ ತ್ರಿಕೋಣವು ಒಳಗೊಂಡಿದೆ. ವಿಕೃತ ಪಂಥಶಾಖೆಯೊಂದು ಪ್ರತ್ಯಕ್ಷಯೋನಿಯನ್ನೇ ಶ್ರೀಚಕ್ರದ ಜೀವಂತರೂಪವೆಂದು ಆದರ ಪೂಜೆಯನ್ನು ಪ್ರತಿಪಾದಿಸುತ್ತದೆ.

ಭಾರತದಲ್ಲಿ ಮಾತೃದೇವತಾಪಂಥ ಅಥವಾ 'ಶಕ್ತಿಪಂಥ'ವು ಶಕ್ತಿಯ ಕೇಂದ್ರ ಅಥವಾ 'ಶಕ್ತಿಪೀಠ'ಗಳ ಕಲ್ಪನೆಯನ್ನೂ ಸಾಕಾರಗೊಳಿಸಿ, ಅನೇಕ ಕ್ಷೇತ್ರ(ಸ್ಥಳ)ಗಳನ್ನು ಹಾಗೆಂದು ಗುರುತಿಸಿದೆ. ಶ್ರೀಚಕ್ರದ ಅಧಿಷ್ಠಾತ್ರಳಾದ ದೇವಿಗೆ ಸಂಬಂಧಿಸಿದ ಕ್ಷೇತ್ರ(ಪೀಠ)ಗಳು ದೇಶದಾತ್ಯಂತ ಹರಡಿಕೊಂಡಿದ್ದು ಅಂಥ ಸುಮಾರು ಐವತ್ತು

ಪೀಠಗಳಲ್ಲಿ 'ಶಕ್ತಿ'ಯು ವಿವಿಧ ಸ್ವರೂಪ, ಆವಿರ್ಭಾವಗಳಲ್ಲಿ ಆರಾಧಿಸಲ್ಪಡುತ್ತಾಳೆ. ಅವುಗಳಲ್ಲಿ ಹನ್ನೆರಡು ಪ್ರಖ್ಯಾತವಾದವುಗಳು : ಕಾಂಚೀಪುರಂ(ಕಾಮಕೋಟಿ), ನೇಪಾಳ(ಕುಮಾರಿ), ಗುಜರಾತ(ಅಂಬಾ), ಮಾಳವ(ಕಾಲಿಕಾ), ಪ್ರಯಾಗ(ಲಲಿತಾ), ವಾರಣಾಸಿ(ವಿಶಾಲಾಕ್ಷಿ), ವಿಂಧ್ಯಾಚಲ(ವಿಂಧ್ಯವಾಸಿನೀ), ಗಯಾ(ಮಂಗಳಚಂಡೀ), ವಂಗ ಅಥವಾ ಬಂಗಾಲದಲ್ಲಿ(ಸುಂದರೀ), ಕರವೀರಪುರ ಅಥವಾ ಕೊಲ್ಲಾಪುರ(ಮಹಾಲಕ್ಷ್ಮಿ), ಅಸ್ಸಾಂ(ಗುಹ್ಯೇಶ್ವರೀ), ಮತ್ತು ಮಲಯ ಪರ್ವತದಲ್ಲಿ(ಭ್ರಾಮರೀ). ಏನೇ ಇರಲಿ, ಶ್ರೀಚಕ್ರ ಪಂಥವು ಅನುಸ್ಯೂತವಾಗಿ ಪ್ರಚುರವಿದ್ದಿರುವುದು ಕಾಂಚೀಪುರಂದಲ್ಲಿ. ದೇಶದ ದಕ್ಷಿಣಭಾಗದ ಎಲ್ಲ ಕಡೆಗೆ ಈ ಪಂಥವು ಪ್ರಸಾರಗೊಂಡಿದ್ದು ಇಲ್ಲಿಂದಲೇ.

ಶ್ರೀಚಕ್ರರೂಪದ ಶಕ್ತ್ಯಾರಾಧನೆಯು ಅತೀವ ಗೋಪ್ಯತೆಯುಳ್ಳದ್ದೆಂದೆನಿಸಿದ್ದರೂ, ಈ ವಿಷಯವನ್ನು ಕುರಿತು ಸಾಕಷ್ಟು ವಿಪುಲ ಸಾಹಿತ್ಯವೇ ಬೆಳೆದಿದೆ. 'ಭಾವನೋಪನಿಷತ್' 'ಅರುಣೋಪನಿಷತ್'ನಂತಹ ಕೆಲವು ಗ್ರಂಥಗಳು ಪ್ರಾಚೀನ ಶೈಲಿಯಲ್ಲಿ ಮುಳುಗಿಹೋಗಿದ್ದರೂ, ಈ ಸಾಹಿತ್ಯದ ಕಾಲವು ಆರನೆಯ ಶತಮಾನಕ್ಕಿಂತ ಹಿಂದೆ ಹೋಗುವುದಿಲ್ಲ. ಈ ಪಂಥಗಳ ಎಲ್ಲ ಅಂಶಗಳ ಕುರಿತಾಗಿ ತಾಂತ್ರಿಕ ಗ್ರಂಥಗಳಲ್ಲಿ ಅಂತರ್ಗತವಾದ ವಿವರಗಳಲ್ಲಿ ಈ ಸಾಹಿತ್ಯದ ಅಕರ ವಸ್ತುವಿನ ಬಹುಭಾಗವು ಕಾಣಸಿಗುತ್ತದೆ. (ಉದಾ : ಮುಖ್ಯವಾಗಿ ವಾಮಕೇಶ್ವರ ತಂತ್ರ, ಯೋಗಿನೀಹೃದಯ ತಂತ್ರ, ಶಕ್ತಿಸಂಗಮ ತಂತ್ರ, ಮತ್ತು ಸ್ವಚ್ಛಂದ ತಂತ್ರ). ಅವಲ್ಲದೆ ಇದೇ ವಿಷಯವನ್ನಾಧರಿಸಿದ, ಆದರೆ ನಿರ್ದಿಷ್ಟ ಸಂಗತಿಗಳನ್ನು ವಿವರಿಸುವ 'ಪ್ರಯೋಗ ಪುಸ್ತಕ'ಗಳೂ ಮತ್ತೊಂದು ಆಕರವಾಗಿ ಸಲ್ಲುತ್ತವೆ. ಉದಾಹರಣೆಗೆ, ರುದ್ರಯಾಮಲ, ತ್ರಿಪುರರಹಸ್ಯ, ಕಾಮಕಲಾ, ಸೇತುಬಂಧ, ನಿತ್ಯಾ-ಷೋಡಶಿಕಾಕಲ್ಪ, ಪರಶುರಾಮಕಲ್ಪ, ಮತ್ತು ವಾರಿವಸ್ಯರಹಸ್ಯ ಇತ್ಯಾದಿ. ತಾಂತ್ರಿಕ ಗ್ರಂಥಗಳಲ್ಲಿ ಹೆಚ್ಚಿನವು 9ನೆಯ ಮತ್ತು 10ನೆಯ ಶತಮಾನದ ಕೃತಿಗಳು. ಆದರೆ 'ಪ್ರಯೋಗ ಕೈಪಿಡಿ'ಗಳು ತುಂಬಾ ನಂತರದ ಕಾಲಾವಧಿಗೆ ಸೇರಿದವಾಗಿವೆ. ಕೆಲವಂತೂ ಹದಿನೆಂಟನೆಯ ಶತಮಾನದಷ್ಟು ಇತ್ತೀಚಿನವು.

'ತಂತ್ರ' ಪದ್ಧತಿಯಿಂದ ಎತ್ತಿಕೊಂಡ ಅನೇಕ ಪಂಥವಿಶಿಷ್ಟವಾದ ಕಲ್ಪನೆಗಳನ್ನು ವೈದಿಕ ಪರಂಪರೆಯೊಂದಿಗೆ ಸಮನ್ವಯಗೊಳಿಸುವ ಪ್ರವೃತ್ತಿಯು ಅನೇಕ ಪ್ರಯೋಗ ಕೈಪಿಡಿ ಪುಸ್ತಕಗಳಲ್ಲಿ ಎದ್ದು ಕಾಣುತ್ತದೆ. ಉದಾಹರಣೆಗೆ ಲೊಳ್ಳ-ಲಕ್ಷ್ಮೀಧರನು ಶ್ರೀವಿದ್ಯೆಯು ತೈತ್ತಿರೀಯ ಆರಣ್ಯಕ(1, 11, 54; 1, 12, 32; 1, 23; 1, 32, 127)ದಿಂದ ವ್ಯುತ್ಪತ್ತಿಯಾದುದೆಂದು ಹೇಳಿಕೊಳ್ಳುತ್ತಾನಲ್ಲದೆ, ವೈದಿಕ ಕ್ರಿಯಾವಿಧಿಗಳ ಮತ್ತು ಶ್ರೀವಿದ್ಯೆಯ ಕ್ರಿಯಾವಿಧಿಗಳ ನಡುವಿಣ ಸಮಾನಾಂತರತೆಯನ್ನು ಸಿದ್ಧಮಾಡಲು ಯತ್ನಿಸುತ್ತಾನೆ. ಋಗ್ವೇದ್ ಒಂದು ಸೂಕ್ತದಿಂದ ಶ್ರೀವಿದ್ಯೆಯೂ, ಇನ್ನೊಂದು

ಸೂಕ್ತದಿಂದ ಶ್ರೀಚಕ್ರವೂ ವ್ಯುತ್ಪನ್ನವಾಗಿವೆಯೆಂದು ಹೇಳುವ ಭಾಸ್ಕರರಾಯನು, ಇಂತಹ ಮತ್ತೊಂದು ಉದಾಹರಣೆ.[3] ಸುಪ್ರಸಿದ್ಧವಾದ 'ಗಾಯತ್ರಿ'ಮಂತ್ರದಿಂದ ಶ್ರೀವಿದ್ಯೆಯು ವಿಕಾಸಗೊಂಡಿದೆಯೆಂದೂ ಸಾಧಿಸಲು ಯತ್ನಿಸಲಾಗಿದೆ. ('ಶ್ರೀವಿದ್ಯಾಮಂತ್ರ ಭಾಷ್ಯ', 'ತ್ರಿಖಂಡ ಸಾರಾರ್ಥ ಬೋಧಿನಿ', – ವೀರರಾಘವಶಾಸ್ತ್ರಿ, ನೋಡಿ).

ವೇದಪ್ರಾಮಾಣ್ಯದ ಸುಪ್ರಸಿದ್ಧ ಪ್ರತಿಪಾದಕರಾದ 'ಶಂಕರ'ರು, ಜನಜನಿತ ಐತಿಹ್ಯದ ಪ್ರಕಾರ, ವಾರಣಾಸಿಯಲ್ಲಿ ಶ್ರೀವಿದ್ಯಾ ತಾಂತ್ರಿಕ ಪಂಥದಲ್ಲಿ ದೀಕ್ಷೆಹೊಂದಿದ್ದರು ಎಂದೂ ಹೇಳಲಾಗಿದೆ. ಈ ಪಂಥದ ಪ್ರಮುಖ ಕಾವ್ಯಕೃತಿಯಾದ 'ಸೌಂದರ್ಯಲಹರಿ'[4]ಯ ಕರ್ತೃವು ಅವರೇ ಎಂದು (ತಪ್ಪಾಗಿ) ಹೇಳಲಾಗುತ್ತದೆ, ಅವರ ಕೃತಿಯ ಒಂದು ಭಾಗವನ್ನು ಕೈಲಾಸದಿಂದ ಅವರು ಸಂಪಾದಿಸಿಕೊಂಡರು ಎಂದೂ ಹೇಳುತ್ತಾರೆ. 'ಪ್ರಪಂಚಸಾರ'ವೆಂಬ ಒಂದು ತಾಂತ್ರಿಕ ಗ್ರಂಥವನ್ನೂ, 'ತಾರಾಪ್ರಭೃತಿಕಾ' ಎಂಬ ತಾರಾಪಂಥಕ್ಕೆ ಸೇರಿದೊಂದು ಕೃತಿಯನ್ನೂ ಮತ್ತು ಭಾಸ್ಕರರಾಯನು ಹೇಳುವ ಪ್ರಕಾರ 'ಚಿಂತಾಮಣಿಸ್ತವ'ವೆಂಬ ತಾಂತ್ರಿಕ ದೇವತಾಸ್ತವವನ್ನೂ ಅವರೇ ರಚಿಸಿದರು ಎಂದೆನ್ನಲಾಗಿದೆ. ಅವರ ಹಿಂದಿನವರಾದ ಗೌಡಪಾದರು ಕೂಡ 'ಶ್ರೀವಿದ್ಯಾರತ್ನಸೂತ್ರ' (ಭಾಸ್ಕರರಾಯ ಹೇಳುವಂತೆ) ಮತ್ತು 'ಸುಭಗೋದಯ ಶ್ರುತಿ' (ಇದರ ಮೇಲೆ ಲೊಳ್ಳಲಕ್ಷ್ಮೀಧರನ ಭಾಷ್ಯವಿದೆ) ಎಂಬ ಎರಡು ಕೃತಿಗಳನ್ನು ರಚಿಸಿದರು ಎಂದು ಹೇಳಲಾಗಿದೆ. ಅಲ್ಲದೆ ನೇಪಾಳದಲ್ಲಿ ಲಭ್ಯವಾದ(ಕಂಡುಹಿಡಿದ) 'ಜಯದ್ರಥಯಾಮಲ' ಎಂಬ ಸಾರ್ವತ್ರಿಕ ತಾಂತ್ರಿಕ ಕೃತಿಯೊಂದನ್ನು, ಅವರ ಗುರುಗಳಾದ ಗೋವಿಂದಪಾದರು ರಚಿಸಿದರೆಂದೆನ್ನಲಾಗಿದೆ. 'ಶ್ರೀವಿದ್ಯಾರ್ಣವ'ದಲ್ಲಿ ದೊರೆಯುವ 'ಶ್ರೀವಿದ್ಯಾ'ಗುರುಪರಂಪರೆಯು ವೈದಿಕ ಪರಂಪರೆಯವರಾದ, ಕಪಿಲ, ಅತ್ರಿ, ವಸಿಷ್ಠ, ಸನಕ, ಸನಂದನ, ಭೃಗು, ಸನತ್ಸುಜಾತ, ವಾಮದೇವ, ನಾರದ, ಗೌತಮ, ಶೌನಕ, ಶಕ್ತಿ, ಮಾರ್ಕಂಡೇಯ, ಪರಾಶರ, ಶುಕ, ವ್ಯಾಸ, ಗೌಡಪಾದ, ಪಾರಾಶರ್ಯ, ಸತ್ಯನಿಧಿ, ರಾಮಚಂದ್ರ, ಗೋವಿಂದ, ಶಂಕರ .... ಇತ್ಯಾದಿ ಎಲ್ಲ ಪ್ರಮುಖ ಹೆಸರುಗಳನ್ನು

ಒಳಗೊಂಡಿದೆ. ಶಂಕರರರ ನಂತರ ಈ ಪರಂಪರೆಯು ಪದ್ಮಪಾದ, ಬೋಧ, ಗೀರ್ವಾಣ, ಆನಂದ, ವಿಷ್ಣುಶರ್ಮಾ, ಪ್ರಗಲ್ಭ ಮತ್ತು ವಿದ್ಯಾರಣ್ಯ - ಹೀಗೆ ಮುಂದುವರಿದಿದೆ. (ಪದ್ಮಪಾದರು, ಶಂಕರರರದೆಂದು ಹೇಳಲಾದ 'ಪ್ರಪಂಚಸಾರ'ಕ್ಕೆ 'ಸಂಬಂಧ ದೀಪಿಕಾ' ಎಂಬ ಟಿಪ್ಪಣಿಯನ್ನು ಬರೆದವರು).[5]

ಬ್ರಹ್ಮಸೂತ್ರ, ಭಗವದ್ಗೀತೆ ಮತ್ತು 'ಉಪನಿಷತ್'ಗಳ ಭಾಷ್ಯಕಾರ ಶಂಕರರ ತಾಂತ್ರಿಕ ಪಂಥಗಳೊಂದಿಗಿನ ಸಂಬಂಧವು ಬಹಳ ಸಂದೇಹಾಸ್ಪದವಾಗಿದೆ ಮತ್ತು ಮೇಲೆ ಹೇಳಿದ ಅವರ ತಾಂತ್ರಿಕ ಪರಂಪರೆಯು ನಂಬಲು ಅರ್ಹವೆನಿಸುವುದಿಲ್ಲ. ಅವರಿಗಿರುವ ಶ್ರೀವಿದ್ಯೆಯ ಪರಿಚಯವು - ಅವರಿಗೆ ಒಂದುವೇಳೆ ಎಷ್ಟು ಮಟ್ಟಿಗಾದರೂ ಇತ್ತೆಂಬುದು ನಿಜವಿದ್ದರೂ, ಅವರ ವೇದಾಂತಿಕ ಕೃತಿಗಳಲ್ಲಿ ಅದರ ಅಸ್ಪಷ್ಟ ಸುಳಿವು ಕೂಡ ಇಲ್ಲ. ಅವರ ಸುಪ್ರಸಿದ್ಧ ಕೃತಿಗಳನ್ನಾಧರಿಸಿ ಹೇಳುವುದಾದರೆ, ಶ್ರೀಚಕ್ರದ ಬಗೆಗೆ ಅವರು ಸಂಪೂರ್ಣ ಅಜ್ಞರಾಗಿದ್ದರೆಂದೇ ತೋರುತ್ತದೆ. ಹೀಗಿದ್ದರೂ, ಅವರಿಂದ ಸ್ಥಾಪಿಸಲ್ಪಟ್ಟವೆಂದು ಹೇಳಿಕೊಳ್ಳುವ ಮಠ -ಪೀಠಗಳು ಅವರನ್ನು ಶ್ರೀಚಕ್ರದ ಆರಾಧಕರನ್ನಾಗಿ ಗಣಿಸುತ್ತಾರೆಂಬುದು ಗಮನಾರ್ಹ ಸಂಗತಿ. ಅದೇನೇ ಇದ್ದರೂ, ಈ ಮಠ ಪೀಠಗಳು ಶ್ರೀಚಕ್ರ ಪರಂಪರೆಯನ್ನು ಪ್ರೋತ್ಸಾಹಿಸಿದರಷ್ಟೆ ಅಲ್ಲದೆ, ಅದರ ಪ್ರಸಾರಕ್ಕೆ ಗಮನಾರ್ಹ ಕೊಡುಗೆ ನೀಡಿದ್ದಾರೆ.

ಶಂಕರರ ಗುರುಪರಂಪರೆಯವರೆಂದು ಮಾನ್ಯರಾದ ವಿದ್ಯಾರಣ್ಯರು ಶ್ರೀಚಕ್ರ ಪಂಥದಲ್ಲಿ ನಿಷ್ಣಾತರಾಗಿದ್ದಿರುವುದು ಸಂಭವನೀಯ. 'ಶ್ರೀವಿದ್ಯಾರ್ಣವ'ವೆಂಬ ಈ ಪಂಥದ ಗ್ರಂಥವು ಅವರದೆಂದು ಹೇಳಲಾಗಿದೆ. ವಿಜಯನಗರ ಸಾಮ್ರಾಜ್ಯಸ್ಥಾಪನೆಯೊಂದಿಗೆ (ಕ್ರೀ.ಶ.1336) ಸಂಬಂಧವಿದ್ದ ಮತ್ತು ಶಂಕರ ಪರಂಪರೆಗೆ ಸೇರಿದ ಕಾಂಚೀಪುರ ಮತ್ತು ಶೃಂಗೇರಿ ಪೀಠಗಳನ್ನು ಹೊಂದಿದ ಅವರು ದಕ್ಷಿಣ ಭಾರತದಲ್ಲಿಯೇ ಒಂದು ದೊಡ್ಡ ಧಾರ್ಮಿಕ, ಸಾಮಾಜಿಕ ಹಾಗೂ ರಾಜಕೀಯ ಶಕ್ತಿಯಾಗಿದ್ದರು. 'ಶ್ರೀವಿದ್ಯಾ' ಪಂಥವು ದೇಶದ ಈ ಭಾಗದಲ್ಲಿ ಪ್ರಸಾರಗೊಂಡಿರುವುದು

ಅವರ ಪ್ರಭಾವದ ಕಾರಣದಿಂದಲೇ ಇರಬಹುದು. ವಿಜಯನಗರ ಸಾಮ್ರಾಜ್ಯದ ರಾಜಧಾನಿಯಲ್ಲಿ ಒಂದು 'ದೇವಿಯಾಗ'ವನ್ನು ಮಾಡಿದ, ಅವರಶಿಷ್ಯ ಲಕ್ಷ್ಮಣದೇಶಿಕನು 'ತಾಂತ್ರಿಕ ದೇವೀ ತತ್ವಕಲ್ಪನೆಯನ್ನು ವೇದೋಕ್ತ ಯಾಗ ವಿಧಿಗಳೊಂದಿಗೆ ಸಮನ್ವಯಗೊಳಿಸಲು ಕಠಿಣ ಪರಿಶ್ರಮ ಪಟ್ಟಿರಬೇಕು. ಸರಿಸಮಾನವಾಗಿ ತಾಂತ್ರಿಕಗ್ರಂಥವೆಂದು ಗಣನೀಯ ಪ್ರಸಿದ್ಧಿಪಡೆದ 'ಶಾರದಾ ತಿಲಕ', ಮತ್ತದರ ಅನುಬಂಧವಾದ 'ತಾರಾಪ್ರದೀಪ'ಗಳ ಕರ್ತೃವು ಅವನೇ ಆಗಿದ್ದಾನೆ. ಅವನ ಶಿಷ್ಯರು 'ಶ್ರೀವಿದ್ಯಾ' ಪಂಥವನ್ನು ದೇಶದ ವಿವಿಧ ಕಡೆಗಳಲ್ಲಿ ಜನಪ್ರಿಯಗೊಳಿಸಿದರೆಂದು ಊಹಿಸಲಾಗಿದೆ : ಮಲ್ಲಿಕಾರ್ಜುನನು ವಿಂಧ್ಯ ಪ್ರದೇಶದಲ್ಲಿ, ತ್ರಿವಿಕ್ರಮನು ಒಡಿಸಾ(ಜಗನ್ನಾಥ)ದಲ್ಲಿ, ಶ್ರೀಧರನು ಬಂಗಾಲದಲ್ಲಿ (ಗೌಡ, ಮಿಥಿಲಾ ಮತ್ತು ವಂಗ), ಮತ್ತು ಕಪರ್ದಿಯು ವಾರಣಾಸಿ ಹಾಗೂ ಅಯೋಧ್ಯೆಗಳಲ್ಲಿ ಪ್ರಚುರಪಡಿಸದರೆನ್ನಲಾಗಿದೆ.[6] ''ತಂತ್ರರಾಜ ತಂತ್ರ'', ಮಾತೃಕಾರ್ಣವ, ತ್ರಿಪುರಾರ್ಣವ ಮತ್ತು ಯೋಗಿನೀ ಹೃದಯ ಎಂಬ ನಾಲ್ಕು ಗ್ರಂಥಗಳ ಮೂಲಕ ಶ್ರೀವಿದ್ಯೆಗೆ ಒಂದು ಸಾಹಿತ್ಯಕ ಚೌಕಟ್ಟನ್ನು ಒದಗಿಸಿದವನೂ ಅವನೇ. ಈಗ ಪ್ರಚಲಿತವಿರುವ ಈ ಪಂಥದ ಸೈದ್ಧಾಂತಿಕ ಮತ್ತು ಆನುಷ್ಠಾನಿಕ ರಚನೆಗೆ ಒಂದು ಖಚಿತರೂಪವನ್ನೊದಗಿಸಿದವನೂ ಅವನೇ ಎಂದು ಸುರಕ್ಷಿತವಾಗಿ ಊಹಿಸಬಹುದು.

ವಿಜಯನಗರ ಸಾಮ್ರಾಜ್ಯವು ಕೃಷ್ಣದೇವರಾಯನ ಕಾಲದಲ್ಲಿ(ಕ್ರೀ.ಶ. 1509-1529) ತನ್ನ ವೈಭವದ ಶಿಖರವನ್ನು ತಲುಪಿತ್ತು. ಹಿಂದುಗಳ ರಾಜಕೀಯ ಸೌಭಾಗ್ಯದೊಂದಿಗೆ, ಹಿಂದೂ ಸಂಸ್ಕೃತಿಯ ಪಾರಂಪರಿಕ ಮೌಲ್ಯಗಳ ಪುನರುಜ್ಜೀವನ ಮತ್ತು ಪ್ರಸಾರಗಳೂ ನಡೆದುವು. ಶ್ರೀವಿದ್ಯಾಪಂಥವು ಪ್ರಾಚುರ್ಯವನ್ನು ಹೊಂದಿದ್ದು ಈ ಸಂದರ್ಭದಲ್ಲಿಯೇ. ಲೊಳ್ಳ ಲಕ್ಷ್ಮೀಧರನು ಕೃಷ್ಣದೇವರಾಯನ ಆಸ್ಥಾನದಲ್ಲಿ ಒಬ್ಬ ಪ್ರಮುಖ ಪಂಡಿತನಾಗಿದ್ದನು. ಅವನು ವಿಶ್ವನಾಥ ಭಟ್ಟಾರಕನ ಮಗ. 'ನೂತನವ್ಯಾಸ' ಎಂಬ ಬಿರುದು ಧರಿಸಿದ ವಿಶ್ವನಾಥ ಭಟ್ಟಾರಕನು ಒಡಿಸಾದ ವೀರರುದ್ರ ಗಜಪತಿಯ

ಆಸ್ಥಾನದಲ್ಲಿದ್ದನು. ಲಕ್ಷ್ಮೀಧರನು ಕೂಡ, ಕೃಷ್ಣದೇವರಾಯನು ವಿಜಯನಗರ ಸಿಂಹಾಸನವನ್ನೇರುವ ಪೂರ್ವದಲ್ಲಿ, ಪ್ರತಾಪರುದ್ರನ ಆಸ್ಥಾನದಲ್ಲಿಯೇ ಇದ್ದವ. ಅವನು ಶಂಕರರದೆಂದೆನ್ನಲಾದ ಸೌಂದರ್ಯಲಹರಿಗೆ ಒಂದು ಅಧಿಕಾರಯುಕ್ತವೂ, ಸ್ಪಷ್ಟವೂ ಆದ ವ್ಯಾಖ್ಯಾನವನ್ನೂ, ಮತ್ತು ಶಂಕರರ ಗುರುಗಳಾದ ಗೌಡಪಾದರ 'ಸುಭಗೋದಯಶ್ರುತಿ'ಗೆ ಟಿಪ್ಪಣಿಯನ್ನೂ ರಚಿಸಿದ್ದಾನೆ. ಮೊದಲನೆಯದು, ಆನಂತರದ ಗ್ರಂಥಕಾರರಿಗೆ ಶ್ರೀವಿದ್ಯೆಯನ್ನು ಕುರಿತ ಮುಖ್ಯ ಆಕರವಾಗಿ ಸಂದಿತು. ಇಂದಿಗೂ ಕೂಡ, ಈ ಪಂಥವನ್ನು ಅಭ್ಯಸಿಸುವವರಿಗೆ ಅದು ಒಂದು ಅನಿವಾರ್ಯವಾದ ಮಾರ್ಗದರ್ಶಿ ಗ್ರಂಥವಾಗಿದೆ.

ವಿಜಯನಗರದ ಆಸ್ಥಾನ ಹಾಗೂ ಶ್ರೀವಿದ್ಯಾಪ್ರಸಾರದೊಂದಿಗೆ ಸಂಬಂಧಿಸಿದ ಇನ್ನೊಂದು ಹೆಸರು, 'ಗಂಭೀರರಾಯ ದೀಕ್ಷಿತ್'. ಅವನು ಇಳಿವಯಸ್ಸಿನಲ್ಲಿ ವಾರಾಣಾಸಿಗೆ ಹೋಗಿ ನೆಲೆಸಿದನು. 'ಭಾಸುರಾನಂದನಾಥ'ನೆಂಬ ದೀಕ್ಷಾನಾಮ ಹೊಂದಿದ ಅವನ ಮಗನಾದ ಭಾಸ್ಕರರಾಯನು ಒಬ್ಬ ಬಹುವಿದ್ಯಾಪಂಡಿತ. ಅವನು ಆ ಕಾಲದಲ್ಲಿ ಸ್ಮೃತಿಪಥದಿಂದ ಮರೆಯಾಗಿಹೋಗಿದ್ದ ಅಥರ್ವವೇದಾಂತರ್ಗತವಾದ ತಾಂತ್ರಿಕ ಅಂಶಗಳನ್ನು ಪುನರುಜ್ಜೀವಿತಗೊಳಿಸುವ ಕಾರ್ಯವನ್ನು ಕೈಗೊಂಡನು. ಅವನು ಶ್ರೀವಿದ್ಯಾ ಅಭಿಮಾನಿಯಾಗಿದ್ದು ವ್ಯಾಪಕ ಗ್ರಂಥರಚನೆಯನ್ನು (ಸಂಸ್ಕೃತದಲ್ಲಿ) ಮಾಡಿದನು. ಅವನ ಗ್ರಂಥಗಳಲ್ಲಿ ಅತ್ಯಂತ ಮಹತ್ವವುಳ್ಳವೆಂದರೆ, 'ಸೇತುಬಂಧ' (ಕ್ರೀ.ಶ. 1733ರಲ್ಲಿ ಬರೆದ, ವಾಮಕೇಶ್ವರ ತಂತ್ರದ ಭಾಷ್ಯ), 'ಸೌಭಾಗ್ಯ ಭಾಸ್ಕರ'(ಬ್ರಹ್ಮಾಂಡ ಪುರಾಣಾಂತರ್ಗತವಾದ ಲಲಿತಾ ಸಹಸ್ರನಾಮದ ವ್ಯಾಖ್ಯಾನ), (1778), ವರಿವಸ್ಯಾ ರಹಸ್ಯ (ತನ್ನದೇ ಆದ 'ಪ್ರಕಾಶ'ಎಂಬ ಟಿಪ್ಪಣಿಯೊಂದಿಗೆ), 'ರತ್ನಾಲೋಕ' (ಪರಶುರಾಮ ಕಲ್ಪ ವ್ಯಾಖ್ಯಾನ), 'ಗುಪ್ತವತಿ' (ಮಾರ್ಕಂಡೇಯ ಪುರಾಣಾಂತರ್ಗತವಾದ 'ದುರ್ಗಾಸಪ್ತಶತಿ'ಯ ವ್ಯಾಖ್ಯಾನ), ಮತ್ತು 'ಭಾವನೋಪನಿಷತ್ ಭಾಷ್ಯ'. ಅವನು ವೈದಿಕ, ಸಾಹಿತ್ಯ, ವ್ಯಾಕರಣ, ಛಂದಃಶಾಸ್ತ್ರ,

ನ್ಯಾಯ, ಸ್ಮೃತಿ, ವೇದಾಂತ, ಮತ್ತು 'ಮೀಮಾಂಸಾ'ಗಳ ಮೇಲೂ ಗ್ರಂಥರಚನೆ ಮಾಡಿದ್ದಾನೆ. ಅಷ್ಟಲ್ಲದೆ ಅವನೊಬ್ಬ ಕವಿಯೂ ಆಗಿದ್ದನು.

ಓರ್ವ ದಾಕ್ಷಿಣಾತ್ಯನಾಗಿ ವಾರಣಾಸಿಯಲ್ಲಿ ನೆಲೆಸಿದ್ದು, ವೈದಿಕ ಮತ್ತು ತಾಂತ್ರಿಕ ವಿದ್ಯೆಗಳಲ್ಲೆರಡರಲ್ಲಿಯೂ ಪ್ರಖರ ಪಂಡಿತನಾಗಿ, ಶ್ರೀವಿದ್ಯೆಯ ಅಜೇಯ ಪ್ರತಿಪಾದಕನಾದ ಅವನಿಗೆ, ದೇಶದ ವಿವಿಧ ಭಾಗಗಳಲ್ಲಿ ರೂಢಿಯಲ್ಲಿದ್ದ ಪಂಥಗಳ ಪೂರ್ವ ಗೃಹೀತ ಕಲ್ಪನೆ ಮತ್ತು ಅನುಷ್ಠಾನ ಪದ್ಧತಿಗಳನ್ನು ಪರೀಕ್ಷಿಸಿ ನೋಡಲು, ಅವುಗಳನ್ನು ಸಮನ್ವಯಗೊಳಿಸಲು ಮತ್ತು ಪಂಥದ ಮೌಲಿಕ ಅಂಶಗಳನ್ನು ಪುನರುಜ್ಜೀವನಗೊಳಿಸಲು ವಿಪುಲ ಅವಕಾಶ ದೊರಕಿತು. ಶ್ರೀವಿದ್ಯೆಯ ತಾಂತ್ರಿಕ ದೃಷ್ಟಿಕೋನಕ್ಕೆ ಮೂರ್ತರೂಪವನ್ನು ಕೊಟ್ಟವನೇ ಅವನು. ಕೆಲವು ಉಪಾಸಕರಿಗೆ ಸ್ಥೂಲರೂಪದ ಬಾಹ್ಯ ಉಪಾಸನೆಯ ಆವಶ್ಯಕತೆಯಿದೆಯೆಂಬುದನ್ನೂ[8] ಮತ್ತು ಹೆಚ್ಚು ಮುಂದುವರಿದ ಸಾಧಕರು ಭೌತಿಕವಾದ ಬಾಹ್ಯ ದೃಷ್ಟಿಕೋನವನ್ನು ಸಂಪೂರ್ಣ ತ್ಯಜಿಸಿ, ಶ್ರೀಚಕ್ರವು ಮಾನವಶರೀರ ರಚನೆಯಲ್ಲಿಯೇ ವ್ಯಕ್ತವಾದ ರೀತಿಯಲ್ಲಿ ಉಪಾಸನೆ ಮಾಡಬೇಕೆಂಬುದನ್ನೂ ಅವನು ಮನಗಂಡು ಗುರುತಿಸಿದನು.[9] ಅವನ ಕಾಲದಲ್ಲಿ ಅಧಃಪತನಗೊಂಡ ಆಚರಣೆಗಳಿಂದ, ಅದರಲ್ಲೂ ವಾಮಾಚಾರ ಶಾಖೆಯವರಿಂದಾಗಿ, 'ತಂತ್ರ'ವೆಂಬುದೇ ಅಪಕೀರ್ತಿಗೆ ಗುರಿಯಾಗಿದ್ದಿತು. ಭಾಸ್ಕರರಾಯನು ನೈಜ ತಂತ್ರ ಪ್ರಣಾಲಿಯನ್ನು ವಿಶದಪಡಿಸಿ, ಅನೇಕ ತಪ್ಪು ಕಲ್ಪನೆಗಳನ್ನು ದೂರಮಾಡಿ ತಿಳಿಯಾಗಿಸಲು ಪ್ರಯತ್ನ ನಡೆಸಿದನು.[10]

ಲೊಳ್ಳ-ಲಕ್ಷ್ಮೀಧರ ಮತ್ತು ಭಾಸ್ಕರರಾಯ ಇವರಿಬ್ಬರೂ, ಪಂಥವು ವೈದಿಕ ಕಲ್ಪನೆಗಳನ್ನು ಒಳಗೊಳ್ಳುವಂತೆ ದಿಶಾನಿರ್ದೇಶ ಮಾಡುವುದಲ್ಲದೆ, ಈ ಪಂಥದಲ್ಲಿ ಸಹಜವೇ ಎಂಬಂತಾಗಿಹೋದ ಅಧಃಪತಿತ ಆಚರಣೆಗಳನ್ನು ಬಹಿಷ್ಕರಿಸಲು ಪ್ರಯತ್ನಪಟ್ಟರು. ಬಹಿರುಪಾಸನೆಯ ವಿಧಿ ಆಚರಣೆಗಳ ಮಹತ್ವವನ್ನು ಅವರು ಕನಿಷ್ಠ ಆವಶ್ಯಕತೆಗೆ ಕಡಿತಗೊಳಿಸಿ, ಒಮ್ಮೆ ಒಂದು ಮಟ್ಟದ ತಿಳಿವಳಿಕೆ ಮೂಡಿದಮೇಲೆ

ಅಂತರಂಗದ ಉಪಾಸನೆ (ಅಂತರ್ಯಾಗ) ಮಾತ್ರವೇ ಮಹತ್ವವುಳ್ಳದ್ದೆಂದು ಒತ್ತುಕೊಟ್ಟರು. ಅದಕ್ಕೆ ಅವರು ವಾಮಕೇಶ್ವರ ತಂತ್ರದ(51)ಪ್ರಕಾರ ವಿಧಿಸಿದ ಆದೇಶವನ್ನು ಆಧಾರವಾಗಿ ಎತ್ತಿಹಿಡಿದರು :

ಅಂತರ್ಯಾಗಾತ್ಮಿಕಾ ಪೂಜಾ ಸರ್ವಪೂಜೋತ್ತಮಾ ಪ್ರಿಯೇ ।
ಬಹಿಃಪೂಜಾ ವಿಧಾತವ್ಯಾ ಯಾವಜ್ಞ್ಜಾನಂ ನ ಜಾಯತೇ ॥

''ಪೂಜೆಯು ಅತ್ಯುತ್ತಮ ರೂಪವು ಆಂತರಂಗಿಕ ಪೂಜೆಯೇ. ಬಹಿರಂಗದ ಪೂಜೆಯು (ಕ್ರಿಯಾಚರಣೆಗಳಿಂದ ಕೂಡಿದ್ದು), ಜ್ಞಾನವು ಪ್ರಾಪ್ತವಾಗುವ ವರೆಗೆ ಮಾತ್ರ ಅನುಸರಿಸಲ್ಪಡತಕ್ಕದ್ದು''.

2. ಆದಿಮ ಮಾದರಿ (Primal Model)

ವಿಶ್ವವು ಒಂದು ಏಕಾತ್ಮತೆಯುಳ್ಳ ರಚನೆಯೆಂದೂ ಮತ್ತು ರಚನೆಯಲ್ಲಿ ಅಂತರ್ಗತವಾದ ಏಕಾತ್ಮಕತೆಯು ಅದರ ಕಾರ್ಯದ ಅಥವಾ ಉದ್ದೇಶದ ಏಕತೆಯಿಂದ ಉತ್ಪನ್ನವಾದುದೆಂದೂ, ಹಾಗೂ ಆ ಏಕತೆಯು ಜಗನ್ಮಾತೆಯಾದ ದೇವಿಯ ಶಕ್ತಿ ಹಾಗೂ ಸಾನ್ನಿಧ್ಯದ ಕಾರಣದಿಂದ ಉಂಟಾದುದೆಂದೂ ಶ್ರೀವಿದ್ಯೆಯ ಯಂತ್ರ ಹಾಗೂ ಮಂತ್ರಗಳೆರಡೂ ಒತ್ತಿ ಉದ್ಘೋಷಿಸುತ್ತವೆ. ಯಂತ್ರವು ಈ ಐಕ್ಯಸ್ವರೂಪವನ್ನು ಹೊಂದಿದ ರಚನೆಯ, ಇಡಿಯ ರಚನೆಯಲ್ಲಿರುವ ಅದರ ಅಂಗಗಳ ವ್ಯವಸ್ಥೆಯ ಮೂರ್ತರೂಪ ಮಾದರಿಯಾಗಿದೆ. ನಾನಾ ಆಕಾರ, ಪ್ರಕ್ಷೇಪಗಳಿದ್ದರೂ ಅವುಗಳ ಉಪಸ್ಥಿತಿಯಿಂದ ಭಂಗವಾಗದಂಥ ಸಮಗ್ರ ಏಕತೆ ಅದು. ಇದೇ ತತ್ವವು ಪಿಂಡಾಂಡಕ್ಕೂ, ಅಂದರೆ ವ್ಯಷ್ಟಿಯ ಅಸ್ತಿತ್ವದರಚನೆಗೂ ಅನ್ವಯವಾಗುತ್ತದೆ.

ತಂತ್ರವು ಒಂದು ಪ್ರಾಯೋಗಿಕ ಕ್ರಮವಿಧಿಯಾದ ಕಾರಣ ಅದರ ಸಂಬಂಧವು ಬ್ರಹ್ಮಾಂಡಕ್ಕಿಂತ ಹೆಚ್ಚಾಗಿ ಪಿಂಡಾಂಡದ ಜೊತೆಗೆ ಇದೆ. ಅದರ ಪ್ರಕಾರ, ಬ್ರಹ್ಮಾಂಡದ ಎಲ್ಲ ಮೌಲಿಕ ಆಯಾಮಗಳನ್ನು ಪಿಂಡಾಂಡವು ತನ್ನೊಳಗೆ ಹೊಂದಿದೆ ಮತ್ತು ವ್ಯಕ್ತಿಯ

ವಿಕಾಸದೊಂದಿಗೆ ಇಡೀ ಬ್ರಹ್ಮಾಂಡವು ತೆರೆದುಕೊಳ್ಳುತ್ತದೆ. ಬ್ರಹ್ಮಾಂಡವು ಚದುರುವಿಕೆ (ವಿಕಿರಣ) ಹಾಗೂ ಭಿನ್ನತೆಯನ್ನು ಪ್ರತಿನಿಧಿಸಿದರೆ, ಪಿಂಡಾಂಡವು ಕೇಂದ್ರಿತವಾಗಿರುವುದನ್ನು ಮತ್ತು ಸಂಘಾತವನ್ನು ಸೂಚಿಸುತ್ತದೆ. ಆದುದರಿಂದ ದೇವಿಯ ಶಕ್ತಿ ಹಾಗೂ ಸಾನ್ನಿಧ್ಯಗಳು ವ್ಯಕ್ತಿಯಲ್ಲಿಯೇ ಹೆಚ್ಚು ಸ್ಪಷ್ಟವಾಗಿ ಗುರುತಿಸಲ್ಪಡಲು ಸಾಧ್ಯ.

'ತಂತ್ರ' ಸಿದ್ಧಾಂತವು - ಸರ್ವವಿದಿತವಿರುವಹಾಗೆ ಚಕ್ರ-ವ್ಯವಸ್ಥೆಯನ್ನುಳ್ಳ ''ಮಾನವ-ನಮೂನೆ (human model) ಯೊಂದಿಗೆ ಕಾರ್ಯಗೈಯುವುದಾಗಿದೆ. 'ಮಾನವ'ನ ರಚನೆಯು ಅದರ ಸತ್ತ್ವಾಂಶದ ಹಾಗೂ ಅಮೂರ್ತ ರಚನೆಯಲ್ಲಿ ಆರು ಚಕ್ರಗಳನ್ನು, ತನ್ನ ವಿನ್ಯಾಸ ವ್ಯವಸ್ಥೆಯಲ್ಲಿ ಹೊಂದಿದೆ : 'ಮೂಲಾಧಾರ' - ಬೆನ್ನು ಹುರಿಯ ಬುಡದಲ್ಲಿ (ಮೇರುದಂಡದ ಬುಡ), ಸ್ವಾಧಿಷ್ಠಾನ (ನಾಭಿಯ ಕೆಳಗಡೆ), ಅನಾಹತ (ಹೃದಯ), ವಿಶುದ್ಧ (ಕಂಠ), ಆಜ್ಞಾ (ಭ್ರೂಮಧ್ಯ).

ಇವು ಆರು ದಿಗ್ದೇವತೆಗಳೊಂದಿಗೆ (ಆಮ್ನಾಯ ನಾಯಿಕೆಯರು) ಸಂಬದ್ಧವಾಗಿರುವುವೆಂದು ತಿಳಿಯಲಾಗಿದೆ. ಎರಡೆರಡು ಒಂದೊಂದು ಗುಂಪಾಗಿ, ದೇವಿಯ ಮೂರು ಅಂಶ (ಮುಖ) ಗಳನ್ನು ಪ್ರತಿನಿಧಿಸುತ್ತವೆ. ಅವರ ಸಾನ್ನಿಧ್ಯ (ಉಪಸ್ಥಿತಿ) ಅವುಗಳನ್ನು ಕ್ರಿಯಾಶೀಲವಾಗಿಸಿ, ಅರ್ಥಪೂರ್ಣವೂ, ಏಕತ್ವವುಳ್ಳವೂ ಆಗುವಂತೆ ಮಾಡುತ್ತದೆ : ಸೃಷ್ಟಿ (ಮೂಲಾಧಾರ ಮತ್ತು ಸ್ವಾಧಿಷ್ಠಾನ), ಸ್ಥಿತಿ (ಮಣಿಪೂರ ಮತ್ತು ಅನಾಹತ), ಮತ್ತು ಸಂಹಾರ ಅಥವಾ ಸಂಹೃತಿ (ವಿಶುದ್ಧ ಮತ್ತು ಆಜ್ಞಾ). 'ಕಾಲೀಕ್ರಮ'ವೆಂಬ ಬೇರೊಂದು ಗಣನೆಯ ಪ್ರಕಾರ, ಮೂಲಾಧಾರವು ಸೃಷ್ಟಿಚಕ್ರ, ಸ್ವಾಧಿಷ್ಠಾನವು ಸ್ಥಿತಿಚಕ್ರ, ಮಣಿಪೂರವು ಸಂಹೃತಿ ಚಕ್ರ, ಅನಾಹತವು ನಾಮಾತೀತವಾದ 'ಅನಾಖ್ಯಾ', ವಿಶುದ್ಧವು ಜ್ಞಾನ (ಪ್ರಕಾಶ) ಚಕ್ರ ಅಥವಾ 'ಭಾಷಾ' ಮತ್ತು ಆಜ್ಞಾಚಕ್ರವು ವಿಶ್ರಾಮಸ್ಥಾನ.



ಷಟ್ ಚಕ್ರಗಳು :

ಶ್ರೀವಿದ್ಯೆಯ ರೂಪಲಕ್ಷಣಗಳು ಈ ಪ್ರತೀಕದಲ್ಲಿ(model)ಅಡಕವಾಗಿವೆ. ಸುತ್ತುವರಿದಿರುವ ಚೌಕಾಕಾರ ಕ್ಷೇತ್ರ (ಭೂಪುರ) ಮತ್ತು ಮೂರು ವರ್ತುಳಗಳು (ತ್ರಿವೃತ್ತ) 'ಮೂಲಾಧಾರ', ಅದು ಸೃಷ್ಟಿಯ ಕೇಂದ್ರ ಅಥವಾ ಸೃಷ್ಟಿ ಚಕ್ರ. ಪ್ರಧಾನ ಆಕೃತಿಯ ಹೊರಗಡೆಗೆ ಇರುವ ಷೋಡಶದಳ ಪದ್ಮ ಮತ್ತು ಅಷ್ಟದಳ ಪದ್ಮಗಳು ಸ್ವಾಧಿಷ್ಠಾನ (ಸ್ಥಿತಿ), ಅವು ಯಂತ್ರದ ಮುಖ್ಯಭಾಗವನ್ನು ಸುತ್ತುವರಿದು ಒಳಗಿಟ್ಟುಕೊಂಡಿದ್ದು, ಅದನ್ನು ಕಾಪಿಡುತ್ತವೆ. ಹದಿನಾಲ್ಕು ಮೂಲೆಗಳುಳ್ಳ 'ಚತುರ್ದಶಾರ' ಮತ್ತು ಹೊರಗಣ ಹಾಗೂ ಒಳಗಣ ಹತ್ತು ಮೂಲೆಗಳುಳ್ಳ ಆಕೃತಿಗಳು (ಬಹಿರ್ದಶಾರ ಮತ್ತು ಅಂತರ್ದಶಾರ) ಮಣಿಪೂರ (ಸಂಹೃತಿ). ಎಂಟುಮೂಲೆಗಳುಳ್ಳ 'ಅಷ್ಟಾರ' ಮತ್ತು ಆದ್ಯ ತ್ರಿಕೋಣ ಕೂಡಿ ಹೃದಯದಲ್ಲಿರುವ 'ಅನಾಹತ'ಕ್ಕೆ ಸಂವಾದಿಯಾಗಿರುವುವು. ಕೇಂದ್ರದಲ್ಲಿರುವ 'ಬಿಂದು'ವಿನ ವ್ಯಕ್ತ ಅಂಶವು 'ವಿಶುದ್ಧ' (ಅನಾಖ್ಯಾ) ಚಕ್ರವನ್ನು ಪ್ರತಿನಿಧಿಸುತ್ತದೆ. ಅದರ 'ಅವ್ಯಕ್ತ' ಭಾಗವು ಆಜ್ಞಾಚಕ್ರ (ಪ್ರಕಾಶ, ಜ್ಞಾನ, ಭಾಷಾ). ಇಡೀ ಯಂತ್ರದ ಸೂಕ್ಷ್ಮ-ಅವ್ಯಕ್ತ ಸೂಚ್ಯ ತಿರುಳು ಇರುವುದು ಆಜ್ಞಾಚಕ್ರದಿಂದ ಹಿಡಿದು ಶಿರೋಗ್ರದಲ್ಲಿರುವ, ದೇವಿಯ ಪೀಠವೇ ಆದ ಗೂಢ ಸಹಸ್ರಾರದ ವರೆಗಿನ ಕ್ಷೇತ್ರದಲ್ಲಿ.

'ಸಮಯಾಚಾರ' ಪದ್ಧತಿಯಲ್ಲಿ, ಮೂಲಾಧಾರ ಮತ್ತು ಸ್ವಾಧಿಷ್ಠಾನಗಳನ್ನು ಹೊರತುಪಡಿಸಿ, ಸಹಸ್ರಾರವನ್ನೂ ಸೇರಿಸಿ ಉಳಿದ ಯಾವುದಾದರೊಂದು ಚಕ್ರದಲ್ಲಿ, ಅಮೂರ್ತ ಶ್ರೀಚಕ್ರದ ಪೂಜೆಯನ್ನು ಆದೇಶಿಸಲಾಗಿದೆ. ಚಕ್ರದಿಂದ ಚಕ್ರಕ್ಕೆ ಅದರಲ್ಲಿ ಮಾಡುವ ಪೂಜೆಯು ಹೆಚ್ಚು ಹೆಚ್ಚು ಫಲಕಾರಿ. 'ಮಣಿಪೂರ'ದಲ್ಲಿ ಪೂಜೆಯನ್ನು ಮಾಡುವುದರಿಂದ ಉಪಾಸಕನು ದೇವಿಯ ಭವನದ ಸಮೀಪವನ್ನೈದುತ್ತಾನೆ. 'ಅನಾಹತ'ದಲ್ಲಿ ಮಾಡುವ ಪೂಜೆಯಿಂದ ಅವನು ದೇವಿಯ ಭವನದಲ್ಲಿ ಪ್ರವೇಶಿಸಿ ಸ್ವಲ್ಪ ದೂರದಿಂದ ಅವಳ ದರ್ಶನವನ್ನು ಪಡೆಯಲು ನೆರವಾಗುತ್ತದೆ (ಸಾಲೋಕ್ಯ). ವಿಶುದ್ಧ ಚಕ್ರದಲ್ಲಿ ಗೈದ ಆರಾಧನೆಯು ಅವವನ್ನು ದೇವಿಯ ಹತ್ತಿರಕ್ಕೆ

ಕೊಂಡೊಯ್ಯುವುದು (ಸಾಮೀಪ್ಯ). ಆಜ್ಞಾಚಕ್ರದಲ್ಲಿ ಮಾಡುವ ಪೂಜಾಫಲವೆಂದರೆ ಅವನು ದೇವಿಯ ರೂಪವನ್ನೇ ಹೊಂದುತ್ತಾನೆ (ಸಾರೂಪ್ಯ). ಉಪಾಸನೆಯ (ಸಾಧನೆಯ) ಗುರಿಯಾದ, ದೇವಿಯೊಂದಿಗೆ ಸಹಸ್ರಾರದಲ್ಲಿ ಲೀನವಾಗಿ ಒಂದಾಗುವುದರೊಂದಿಗೆ ಹೋಲಿಸಿದರೆ, ಇವೆಲ್ಲವೂ ಅಮುಖ್ಯವಾಗಿವೆ. ದೇವಿಯೊಂದಿಗೆ 'ಸಾಯುಜ್ಯ'ವನ್ನು ಹೊಂದುವುದೇ 'ಪರಾನಂದ' ಸ್ವರೂಪವುಳ್ಳದ್ದು, ಅರ್ಥಾತ್, ಸರ್ವೋತ್ತಮ ಆನಂದ.[11]

ದೇಹದಲ್ಲಿರುವ ಕೇಂದ್ರಗಳು (ಚಕ್ರಗಳು), ಮೂರು ಗ್ರಂಥಿಗಳಾಗಿ ಗುಂಪುಮಾಡಲ್ಪಟ್ಟಿವೆ. ಒಂದು ರುದ್ರನಿಂದ ಪ್ರತಿನಿಧಿತವಾದ 'ಸ್ವಾಧಿಷ್ಠಾನ', ಮತ್ತೊಂದು ವಿಷ್ಣುವಿನಿಂದ ಪ್ರತಿನಿಧಿತವಾದ 'ಅನಾಹತ', ಇನ್ನೊಂದು 'ಬ್ರಹ್ಮ'ನಿಂದ ಪ್ರತಿನಿಧಿತವಾದ ಆಜ್ಞಾ ಹೀಗೆ ಮೂರು. ಸಹಸ್ರದಲಕಮಲವನ್ನು ಪ್ರತಿನಿಧಿಸುವ ಇನ್ನೊಂದು, ಚತುರಸ್ರದ ಒಳಗಡೆಯಿರುವ ತ್ರಿವರ್ತುಳಗಳಿಗೆ ಸಂಬಂಧಿಸಿದುದು. ಉಪಾಸಕನು ಈ ಪರಿವೃತ್ತದಲ್ಲಿರುವ ಸತ್ತೆ ಮತ್ತು ಕೇಂದ್ರದ ಬಿಂದು ಇವುಗಳ (Identification) ಏಕತ್ವವನ್ನು ಕುರಿತು ಧ್ಯಾನಮಾಡುತ್ತಾನೆ.

'ವಿಶುದ್ಧ' ಮತ್ತು 'ಆಜ್ಞಾ'ಚಕ್ರಗಳು ಶ್ರೀಚಕ್ರದ 'ಸೋಮ-ಖಂಡ'(ಚಂದ್ರನ ಭಾಗ)ಕ್ಕೆ ಸೇರಿದಂಥವು. ಮತ್ತು ಅದು ವರ್ಣಮಾಲೆಯ ಹದಿನಾರು ಸ್ವರಗಳನ್ನು ಒಳಗೊಂಡಿದೆ. 'ಮಣಿಪೂರ' ಮತ್ತು 'ಅನಾಹತ' ಚಕ್ರಗಳು ಸೇರಿ 'ಸೂರ್ಯಖಂಡ'ವಾಗುವುದು, ಮತ್ತು ಇದು 'ಕ' ದಿಂದ 'ಮ'ದ ವರೆಗಿನ ಇಪ್ಪತ್ತನಾಲ್ಕು ವ್ಯಂಜನಗಳನ್ನು ಒಳಗೊಂಡಿರುತ್ತದೆ. 'ಮೂಲಾಧಾರ' ಮತ್ತು 'ಸ್ವಾಧಿಷ್ಠಾನ' ಚಕ್ರಗಳು ಸೇರಿ 'ಅಗ್ನಿ-ಖಂಡ'ವಾಗುತ್ತದೆ. ಮತ್ತು 'ಯ'ದಿಂದ 'ಕ್ಷ'ದ ವರೆಗಿನ ಹತ್ತು ವ್ಯಂಜನಗಳನ್ನೊಳಗೊಂಡಿದೆ. ಈ ಮೂರು ಖಂಡಗಳು ದೇವಿಯ 'ಶಬ್ದರೂಪ'ವೇ ಆಗಿರುವ 'ಹ್ರೀಂ' ಎಂಬ ಬೀಜಾಕ್ಷರದ ಅಭಿವ್ಯಕ್ತಿಗಳೇ ಆಗಿವೆ. 'ಸೋಮಖಂಡ'ದ ಮೇಲುಗಡೆಗೆ ವಿಷ್ಣ್ವಾತ್ಮಕನಾದ ಚಂದ್ರನ ಪೀಠವಿದೆ, ಅಗ್ನಿಖಂಡದ

ಮೇಲುಗಡೆ ರುದ್ರನ ಪೀಠವಿದೆ. ಈ ಮೂರೂ ದೇವತೆಗಳು ದೇವಿಯ ಸೃಷ್ಟಿಶಕ್ತಿ, ಸ್ಥಿತಿಶಕ್ತಿ ಮತ್ತು ಸಂಹೃತಿಶಕ್ತಿಗಳನ್ನು ಸಂಕೇತಿಸುತ್ತವೆ.

'ಐಂ' ಎಂಬ ಸಂಕೇತಾಕ್ಷರದಿಂದ 'ಮೂಲಾಧಾರ' ಮತ್ತು 'ಸ್ವಾಧಿಷ್ಠಾನ'ಗಳೆರಡೂ ನಿರ್ದೇಶಿತವಾಗಿವೆ. 'ಮಣಿಪೂರ' ಮತ್ತು 'ಅನಾಹತ'ಗಳು 'ಕ್ಲೀಂ'ದಿಂದ ಹಾಗೂ, 'ವಿಶುದ್ಧ', 'ಆಜ್ಞಾ'ಗಳು 'ಸೌಃ' ದಿಂದ ನಿರ್ದೇಶಿಸಲ್ಪಟ್ಟಿವೆ. ಈ ಮೂರೂ ಸಂಕೇತಾಕ್ಷರಗಳು ಕ್ರಮವಾಗಿ ಅಗ್ನಿ, ಸೂರ್ಯ, ಮತ್ತು 'ಸೋಮ' ಇವರ ಪ್ರತಿನಿಧಿಗಳು. ಅವು ಕ್ರಮವಾಗಿ ವಾಕ್ಕಿನ (ಶಬ್ದದ) ಪಶ್ಯಂತೀ, ಮಧ್ಯಮಾ ಮತ್ತು ವೈಖರೀ ಈ ಮೂರು ಮುಖಗಳಿಗೆ ಹಾಗೂ, ಯಂತ್ರದ ಮೂರು ಖಂಡಗಳಿಗೆ ಸಂವಾದಿಯಾಗಿವೆ. (ತ್ರಿಕೋನ ಮತ್ತು ಅಷ್ಟಕೋನ, ದಶಾರದ್ವಯ ಮತ್ತು ಚತುರ್ದಶಾರ, ಅಷ್ಟದಲಪದ್ಮ ಮತ್ತು ಷೋಡಶದಲ ಪತ್ರಕ.) (ತ್ರಿವೃತ್ತ, ಹಾಗೂ ಚತುರಸ್ರ ಭೂಪುರವನ್ನು ಹೊರತುಪಡಿಸಿ). ಇದಲ್ಲದೆ, ಇವು ಜಾಗ್ರದವಸ್ಥೆಯಲ್ಲಿಯ ಜ್ಞಾನಗ್ರಹಣದ ಮೂರು ಅಂಗಗಳನ್ನು, ಅಂದರೆ ಪ್ರಮಾಣ (ಜ್ಞಾನಸಾಧನ), ಪ್ರಮಾತಾ (ಜ್ಞಾತೃ) ಮತ್ತು ಪ್ರಮೇಯ (ಜ್ಞೇಯ ವಸ್ತು) ಇವುಗಳನ್ನು ಸಂಕೇತಿಸುತ್ತವೆ. ಮುಂದೆ, ಜ್ಞಾನದ ಮೂರು ಸಾಧನಗಳಾದ, ಬುದ್ಧಿ, ಅಹಂಕಾರ ಮತ್ತು ಮನಸ್ಸು ಇವುಗಳನ್ನೂ, ಧರ್ಮ, ಅರ್ಥ, ಕಾಮಗಳೆಂಬ ಪುರುಷಾರ್ಥಗಳನ್ನೂ ಕೂಡ ಪ್ರತಿನಿಧಿಸುತ್ತವೆ.

ಮೂಲಾಧಾರದಿಂದ ವಿಶುದ್ಧದವರೆಗೆ ಹತ್ತು ತತ್ತ್ವಗಳಿವೆ : (ಪೃಥ್ವಿ, ಅಪ್, ತೇಜಸ್, ವಾಯು, ಆಕಾಶ ಎಂಬ ಪಂಚಭೂತಗಳು ಹಾಗೂ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ತನ್ಮಾತ್ರೆಗಳು). ಅಲ್ಲಿಂದ ಆಜ್ಞಾಚಕ್ರದವರೆಗೆ ಹನ್ನೊಂದು ಇಂದ್ರಿಯಗಳು : (ಐದು ಕರ್ಮೇಂದ್ರಿಯಗಳು, ಐದು ಜ್ಞಾನೇಂದ್ರಿಯಗಳು ಮತ್ತು ಮನಸ್ಸು). ಬಿಂದುವಿನಿಂದ ಚತುರ್ದಶಾರದವರೆಗಿನ, ಶ್ರೀಚಕ್ರದ ಪ್ರಧಾನ ಭಾಗದಲ್ಲಿ ಈ ಇಪ್ಪತ್ತೊಂದು ತತ್ವಗಳು ನಿಹಿತವಾಗಿವೆ. ಇದರಿಂದಾಚೆಗೆ ಅಂದರೆ

'ಸೋಮಖಂಡ'ದಿಂದಾಚೆಗೆ 'ತ್ರಿವೃತ್ತ'ಹಾಗೂ 'ಭೂಪುರ'ಗಳಿವೆ. ಭೂಪುರವು ಮಂಚದ ನಾಲ್ಕು ಕಾಲುಗಳು, ತ್ರಿವೃತ್ತವು ಅದರ ಮೇಲು ಹಲಗೆ, ಅದರಮೇಲೆ 'ಸತ್ತ್ವ' ಅರ್ಥಾತ್ 'ಸದಾಶಿವನು' ಆಸೀನನಾಗಿದ್ದಾನೆ. ಈ ಮಂಚದ ನಾಲ್ಕುಕಾಲುಗಳು 'ಮಾಯಾ' (ಬ್ರಹ್ಮ), ಶುದ್ಧವಿದ್ಯಾ (ವಿಷ್ಣು), ಮಹೇಶ್ವರ (ರುದ್ರ) ಮತ್ತು ಸದಾಶಿವ (ಈಶಾನ) ಎಂಬ ನಾಲ್ಕು ತತ್ತ್ವಗಳ ಸಂಕೇತ. ಒಟ್ಟಿಗೆ, ಆಕೃತಿಯು ಇಪ್ಪತ್ತೈದು ತತ್ವಗಳನ್ನು ಸಂಕೇತಿಸುತ್ತದೆ. ದೇವಿಯು ಇಪ್ಪತ್ತೈದನೆಯ ತತ್ತ್ವವಾದ 'ಸದಾಶಿವ'ನೊಂದಿಗೆ ಸಂಯೋಗ ಹೊಂದುತ್ತಾಳೆ. ಆ ಸಂಯೋಗವೇ ಇಪ್ಪತ್ತಾರನೆಯ ತತ್ತ್ವವಾಗುತ್ತದೆ. (ಶಿವ-ಶಕ್ತಿ-ಯೋಗ). ಈ ಸಂಯೋಗದ ತತ್ತ್ವವೇ ಸಕಲ ಚಿದಚಿದ್-ವಿಶ್ವವನ್ನು (ಚೈತನ್ಯ ಮತ್ತು ಜಡಭೂತಗಳಿಂದಾದ ಬ್ರಹ್ಮಾಂಡವನ್ನು) ವ್ಯಾಪಿಸಿದೆ ಮತ್ತು ನಿಯಂತ್ರಿಸುತ್ತದೆ.[12]

ದೇವಿಯು ವಿಶ್ರಮಿಸುವ ಮಂಚದ ರೂಪಕವು ಸಾಂಕೇತಿಕವಾಗಿ ಅರ್ಥಪೂರ್ಣವಾಗಿದೆ. ಅದು ಪ್ರಕಟ ಬ್ರಹ್ಮಾಂಡದ ಹಿಂದಿರುವ ನಾಲ್ಕು ತತ್ತ್ವಗಳಾದ ಸೃಷ್ಟಿ (ಬ್ರಹ್ಮ), ಸ್ಥಿತಿ (ವಿಷ್ಣು), ಉಪಸಂಹಾರ (ರುದ್ರ) ಹಾಗೂ ಗುಪ್ತಸ್ಥಿತಿ (ತಿರೋಧಾನ, ಈಶ್ವರ)ಗಳನ್ನು ಪ್ರತಿನಿಧಿಸುವುದು. ಈ ನಾಲ್ಕು ಕಾಲುಗಳಮೇಲೆ ನಿಂತ ಹಲಗೆ(ಪರ್ಯಂಕ), ಮತ್ತೊಂದು ಸೃಷ್ಟಿಕಾಲವು ಸನ್ನಿಹಿತವಾಗುವವರೆಗೂ, ಸಂಹೃತವಾದ ಬ್ರಹ್ಮಾಂಡವನ್ನು ತನ್ನೊಳಗೆ ಸ್ವೀಕರಿಸಿ ಧಾರಣೆಮಾಡಿಟ್ಟುಕೊಳ್ಳುವ ಐದನೆಯ ತತ್ತ್ವದ ಸೂಚಕ. ನಾಲ್ಕು ಕಾಲುಗಳಿಂದ ಪ್ರತಿನಿಧಿಸಲ್ಪಟ್ಟ ನಾಲ್ಕು ತತ್ತ್ವಗಳು ಐದನೆಯದರಲ್ಲಿ 'ಕಾರಣ'ರೂಪದಲ್ಲಿ ಮತ್ತು ಸುಪ್ತಸ್ಥಿತಿಯಲ್ಲಿ ಅಂತರ್ಗತವಾಗಿ ಇವೆ.

ಈ ಐದು ತತ್ತ್ವಗಳು ದೇವಿಯಿಂದ ಪ್ರಾದುರ್ಭವಿಸಿದ ಸಂತಾನವೆಂದೂ ಹೇಳಲಾಗಿದೆ : ಬ್ರಹ್ಮನು ಅವಳ ಬಲ ಕಣ್ಣಿನಿಂದ, ವಿಷ್ಣುವು ಎಡಗಣ್ಣಿನಿಂದ, ರುದ್ರನು ಅವಳ ಹಣೆಯ ಮೇಲಿರುವ ಮೂರನೆಯ ಕಣ್ಣಿನಿಂದ, ಈಶ್ವರನು ನಾಭಿಯಿಂದ ಹಾಗೂ ಸದಾಶಿವನು ಹೃದಯದಿಂದ. ಇದರ ಹಿಂದಿರುವ ಕಲ್ಪನೆಯೇನೆಂದರೆ, ಈ ಐದೂ ದೇವತೆಗಳು ಕೇವಲ ದೇವಿಯ ವಿಭಿನ್ನ ಪ್ರಕಟೀಕರಣಗಳೇ ಆಗಿವೆಯೆಂಬುದು.

ಮುಂದೆ, 'ಕಾಮಿಕಾಗಮ'ವು ಮಾನವ ಶರೀರವನ್ನು ಒಂಭತ್ತು ರತ್ನಗಳ ಅಂದರೆ, ಶ್ರೀಚಕ್ರದ ಒಂಭತ್ತು ಚಕ್ರಗಳನ್ನು ಪ್ರತಿನಿಧಿಸುವ ಕೇಂದ್ರ ಅಥವಾ ಚಕ್ರಗಳುಳ್ಳ, ದ್ವೀಪವೆಂದು ವರ್ಣಿಸಿದೆ. (ದೇಹೋ ನವರತ್ನ ದ್ವೀಪಃ).[13] ಇದರ ಸಂದರ್ಭ ಸಂಬಂಧವು ಪಾರಂಪರಿಕ ರೂಪಕವಾದ, 'ಸುಧಾಸಮುದ್ರ'ದಲ್ಲಿ(ಮಣಿದ್ವೀಪದಲ್ಲಿ), ಕಲ್ಪವೃಕ್ಷ(ಕದಂಬ)ಗಳಿಂದ ಆವೃತವಾದ, ದೇವಿಯ ವಾಸಸ್ಥಳವಾದ 'ಚಿಂತಾಮಣಿಗೃಹ'. ಕಲ್ಪವೃಕ್ಷಗಳೆಂದರೆ ಪ್ರಜ್ಞೆಯ ವಿಶಾಲ ದ್ವೀಪದಲ್ಲಿ ಮೊಳೆತು ಬೆಳೆಯುವ ಸಂಕಲ್ಪಗಳು (ಸಂಕಲ್ಪಾಃ ಕಲ್ಪತರವಃ) ಅವು ಒಳಗಿರುವ ಆತ್ಮವನ್ನು(ಜೀವ) ಅರ್ಥಾತ್ ದೇವಿಯ ಆವಾಸ ಗೃಹವನ್ನು ಸುತ್ತುವರಿದಿರುತ್ತವೆ.

ಮೇಲಿನ ವಿವರದ ಪ್ರಕಾರ ಮಾನವ ಶರೀರವು ಒಂಭತ್ತು ಘಟಕ(ಧಾತು)ಗಳುಳ್ಳದ್ದು - ಐದು 'ಶಕ್ತಿ'ಯಿಂದಲೂ, ನಾಲ್ಕು 'ಶಿವ'ನಿಂದಲೂ ಬಂದಿರುವಂಥವು. ತ್ವಚೆ, ರಕ್ತ, ಮಾಂಸ, ಮೇದಸ್ಸು ಮತ್ತು ಅಸ್ಥಿ - ಈ ಐದು 'ಶಕ್ತಿ'ಯಿಂದ, ಹಾಗೂ, ಮತ್ತು, ಮಜ್ಜ, ವೀರ್ಯ, ಪ್ರಾಣ(ಶ್ವಾಸ) ಮತ್ತು 'ಜೀವಶಕ್ತಿ' - ಈ ನಾಲ್ಕು 'ಶಿವ'ನಿಂದ.

3. ಕಾಮ-ಕಲಾ

ಶ್ರೀಚಕ್ರದಲ್ಲಿ ಅದರ ಯಂತ್ರ ಮತ್ತು ತಂತ್ರ ಅಂಗಗಳಲ್ಲಿ ಇರುವ ಮೂಲಭೂತ ವಸ್ತುವೆಂದರೆ, ಸಕಲ ಅಸ್ತಿತ್ವ ಮತ್ತು ಅನುಭವಗಳ(ಕಾಮ-ಕಲಾ ಇವುಗಳ) ಮೂಲಭೂತ ತತ್ವಗಳನ್ನು ಅಂಗೀಕರಿಸುವುದಾಗಿದೆ. ಶ್ರೀವಿದ್ಯೆಯ ಅಧಿಷ್ಠಾತೃದೇವತೆಯಾದ 'ತ್ರಿಪುರಸುಂದರೀ' (ಲಲಿತಾ, ಶ್ರೀಚಕ್ರ-ರಾಜ-ರಾಜೇಶ್ವರೀ) ಈ ತತ್ತ್ವದ ಮೂರ್ತರೂಪವಾಗಿದ್ದಾಳೆ. 'ಕಾಮ'ಎಂಬುದರ ಸಾಮಾನ್ಯ ಅರ್ಥ ಇಚ್ಛೆ, ಬಯಕೆ. ಆದರೆ ಅದರ ಶಾಸ್ತ್ರೀಯ ಪ್ರಯೋಗವು ಋಗ್ವೇದದ 'ನಾಸದೀಯ ಸೂಕ್ತ'ದಷ್ಟು ಹಿಂದೆ ಹೋಗುತ್ತದೆ.[15] 'ವೈದಿಕ' ಹಾಗೂ 'ತಾಂತ್ರಿಕ' ಸಾಹಿತ್ಯ

ಸಂದರ್ಭದಲ್ಲಿ ಅದರ ಅರ್ಥವು, ಯಾವುದೇ ಬಾಹ್ಯ ಚೋದನೆಯಿಲ್ಲದೆಯೂ ಇರುವ ಪ್ರೇರಕಶಕ್ತಿ, ಆವೇಗ ಎಂದಾಗುತ್ತದೆ. ಅದು ಸೃಷ್ಟಿಪೂರ್ವದ ಪ್ರಪ್ರಥಮವಾದ ಚಲನೆಯ ರೂಪದ ಒತ್ತಡ. ಅದೇ 'ನಾದ'ವನ್ನು ಹೊರತರುವ 'ಸ್ಪಂದ'.

ತಾಂತ್ರಿಕ ಸಿದ್ಧಾಂತವು ಈ (ಮುಂದಿನ) ವಿವರಣೆಯನ್ನು ನೀಡುತ್ತದೆ : ಮೂಲ'ಸತ್ಯ'ವಾದ 'ಶಿವ', ಕೇವಲ ಪ್ರಕಾಶರೂಪ, ಕರ್ತೃತ್ವದ ಆಧಾರವಾಗಲಿ (Subjective background), ಕರ್ಮತ್ವದ ಸನ್ನಿವೇಶವಾಗಲಿ (Objective background) ಇಲ್ಲದ ಶುದ್ಧಚೈತನ್ಯ. ಆದರೂ ಕರ್ತೃ-ಕರ್ಮ ಸಂಬಂಧ ಜನ್ಯವಾದ ಎಲ್ಲ ವ್ಯವಹಾರ-ವ್ಯಾಪಾರ ಸಾಧ್ಯತೆಯನ್ನು ತನ್ನೊಳಗೆ ಅಂತರ್ಗತವಾಗಿಟ್ಟುಕೊಂಡಿರುವುದು. ಪ್ರಜ್ಞೆಯ ಉಗಮದೊಂದಿಗೆ, ಕೇವಲ ಅದರ ಸ್ವ-ಸ್ವಭಾವದಿಂದ ಮಾತ್ರವೇ ಚೋದಿತವಾಗಿ, ಪ್ರಕಟೀಕರಣದಲ್ಲಿ ಅದರ ಪಾತ್ರವು ಆರಂಭವಾಗುತ್ತದೆ. ಶಾಸ್ತ್ರೀಯ ಪರಿಭಾಷೆಯಲ್ಲಿ ಇದು 'ಪ್ರಕಾಶ'ವೆಂದು ಕರೆಯಲ್ಪಡುತ್ತದೆ. ಈ ಪ್ರಥಮ ಪ್ರಜ್ಞಾ ಸ್ಫೋಟವು 'ಶಕ್ತಿ'ಯಲ್ಲಿ ಒಳಸೇರಿ, ವಾಸ್ತವ ಇಚ್ಛಾ ಮತ್ತು ವೇದನಾ (ಅನುಭವ) ರೂಪ ತಾಳುತ್ತದೆ. ಅದನ್ನು ಶಾಸ್ತ್ರೀಯ ಶಬ್ದದಲ್ಲಿ ''ವಿಮರ್ಶಾ'' ಎಂದೆನ್ನುವರು. (ಕೆಲವೊಮ್ಮೆ ಇದನ್ನು 'ಸ್ಫೂರ್ತಿ' ಎಂದೂ ಕರೆಯಲಾಗುತ್ತದೆ). ಈ ವಾಸ್ತವೀಕರಣ (Actualisation) ಕ್ರಿಯೆಯನ್ನು ಓರ್ವನ ಪ್ರತಿಬಿಂಬವನ್ನು ಕನ್ನಡಿಯು ಪ್ರತಿಫಲಿಸುವ ಕ್ರಿಯೆಗೆ ಹೋಲಿಸಲಾಗುತ್ತದೆ.[16] ಪ್ರಕಟರೂಪದ ಎಲ್ಲ ವಿಕಾಸಗಳಿಗೂ ಇದು ಹಿನ್ನೆಲೆಯ ಸಂನಿವೇಶವಾಗುತ್ತದೆ.

ಸುಪ್ತಪ್ರೇರಣೆಯುಳ್ಳ 'ಪ್ರಕಾಶ'ವು 'ಶುಕ್ಲ'ವರ್ಣ (ಶುದ್ಧ ಸತ್ತ್ವ ಅರ್ಥಾತ್ 'ನಿರ್ವಸ್ತು'ವಾಗಿರುವ ಪ್ರಜ್ಞೆ, ಚೇತನ) ಮತ್ತು ಇಚ್ಛಾಯುಕ್ತವಾದ ಹಾಗೂ ತತ್‌ಕ್ಷಣಜನಿತವಾದ ವಾಸ್ತವ ಪ್ರಾಕಟ್ಯ ಮತ್ತು ಅದರ ಅನುಭವ (ವೇದನೆ) ''ವಿಮರ್ಶಾ'' ಎಂಬುದು ರಕ್ತವರ್ಣ, (ರಜಸ್, ಅರ್ಥಾತ್ ಕ್ರಿಯೋದ್ಯುಕ್ತ ಸ್ಥಿತಿ). ಮೊದಲನೆಯದು ಎರಡನೆಯದರತ್ತ ಚಲಿಸಿದಾಗ, ಅಂದರೆ 'ಪ್ರಕಾಶ'ವು 'ವಿಮರ್ಶಾ' ರೂಪದತ್ತ ಚಲಿಸಿದಾಗ ಪ್ರಥಮ ''ಬಿಂದು'' ರೂಪುಗೊಳ್ಳುತ್ತದೆ. ಅದು

ಶುಕ್ಲ-ರಕ್ತವರ್ಣ ಸಂಮಿಶ್ರ. ಬ್ರಹ್ಮಾಂಡವು ರೂಪಗೊಂಡದ್ದು ಈ 'ವಸ್ತು'ವಿನಿಂದಲೇ. ನಂತರ ಮೊದಲನೆಯದರ ಚಲನೆಗೆ ಪ್ರತಿಕ್ರಿಯೆಯಾಗಿ, ಎರಡನೆಯದು ಮೊದಲಿನದರತ್ತ ಚಲಿಸಿದಾಗ, 'ಬಿಂದು'ವು ವಿಸ್ತಾರ ಹೊಂದಿ (ಉಬ್ಬಿ), ಆದ್ಯ ಅಭಿವ್ಯಕ್ತಿ ಅಥವಾ ಪ್ರಥಮಜ 'ಶಬ್ದ' ಅಥವಾ 'ನಾದ'ವಾಗುತ್ತದೆ. ಅದು 'ಬಿಂದು'ವಿನ 'ಸ್ತ್ರೀ'-ಅರ್ಧ. 'ಶಿವ'ನು 'ಬಿಂದು', ವರ್ಣಮಾಲೆಯ ಪ್ರಥಮಾಕ್ಷರ 'ಅ'ದಿಂದ ಪ್ರತಿನಿಧಿತವಾದದ್ದು. 'ಶಕ್ತಿ'ಯು 'ನಾದ'. ಕೊನೆಯ ಅಕ್ಷರವಾದ 'ಹ'ದಿಂದ ಸಂಕೇತಿಸಲ್ಪಟ್ಟದ್ದು. ಅವೆರಡರ ಮೂಲ ಸಂಯೋಗವು 'ಅಹಂ'ದಿಂದ ಸಂಕೇತಿಸಲಾಗಿದೆ. (ಅದು, 'ನಾನು' ಎಂಬ ಅರ್ಥವನ್ನು ಹೊಂದಿ, ಪ್ರಕಟ ವಾಸ್ತವ ಅನುಭವಕ್ಕೆ 'ಕರ್ತೃತ್ವ'ದ ಚೌಕಟ್ಟಾಗಿ ಸಲ್ಲುತ್ತದೆ.[17])

ಬಿಂದು ಮತ್ತು ನಾದಗಳು ಕೂಡಿದಾಗ, ಪುರುಷ 'ಶಿವ' ಮತ್ತು ಸ್ತ್ರೀ 'ಶಕ್ತಿ' ಇವೆರಡರೊಂದಿಗೆ ಶುದ್ಧ ವ್ಯುತ್ಪತ್ತಿ ಸಂಬಂಧವನ್ನು ಹೊಂದಿದ 'ಸಂಯುಕ್ತ ಬಿಂದು'ವು ಉಗಮಿಸುತ್ತದೆ. ಇದು ಪ್ರಕಟ ವಿಶ್ವವ್ಯವಸ್ಥೆಗೆ ಸಾಧ್ಯತೆಯನ್ನೊದಗಿಸುವ ಮೂಲಪ್ರೇರಣೆಯ ಪ್ರತಿನಿಧಿ. 'ಕಾಮ' ಎಂದು ಕರೆಯಲ್ಪಟ್ಟಿದ್ದು ಇದೇ ಆಗಿದೆ. ಇದು ಒಂದು 'ಮಿಶ್ರಬಿಂದು', ತನ್ನದೇ ಆದ ಇಚ್ಛಾಭೂಮಿಕೆಯಾಗಲಿ, 'ದಿಶೆ' ಅಥವಾ ಉದ್ಭವಶಕ್ತಿಯಾಗಲೀ ಅದಕ್ಕಿಲ್ಲ. ಆದರೆ ಇದರಲ್ಲಿ ಎರಡು ಭಿನ್ನ ಘಟಕಗಳಿವೆ : ಪುರುಷಾಂಶವುಳ್ಳ 'ಶುಕ್ಲಬಿಂದು' ಮತ್ತು ಸ್ತ್ರೀತ್ವಾಂಶವುಳ್ಳ ರಕ್ತಬಿಂದು, ಇವೆರಡೂ ಒಟ್ಟಾಗಿ ಸರ್ಜನ ಶಕ್ತಿಯ ಜೋಡಿ ಅಂಶಗಳು ಎಂದೆನಿಸಿಕೊಳ್ಳುತ್ತವೆ. ಉದ್ಭವವು 'ಕ' ಅಕ್ಷರದಿಂದಲೂ, 'ಸಂಹೃತಿ'ಯು 'ಲ'ದಿಂದಲೂ ಸಂಕೇತಿಸಲ್ಪಟ್ಟಿವೆ. ಪ್ರಕಟೀಕರಣ ಪ್ರಕ್ರಿಯೆಯಲ್ಲಿ ಇವೆರಡೂ ಸೇರಿಕೊಂಡಿವೆ. ಈ ರೀತಿಯಲ್ಲಿ ಈ 'ಜೋಡಿ ಬಿಂದು' 'ಕಲಾ' ಎಂದು ಕರೆಯಲ್ಪಡುತ್ತದೆ. (ಕ ಮತ್ತು ಲ).

ಈ ಮೂರು ಬಿಂದುಗಳು (ಒಂದು, ಪೃಥಕ್ಕಾಗಿದ್ದ ಪ್ರಥಮ ಬಿಂದು, ಮತ್ತು ಪುರುಷ ಹಾಗೂ ಸ್ತ್ರೀ ತತ್ತ್ವಸ್ವರೂಪದ ಎರಡು ಬಿಂದುಗಳು)ಮೂರು ಚುಕ್ಕೆಗಳಿಂದ, ಒಂದು ಮೇಲೆ, ಎರಡು ಕೆಳಗಡೆ ಒಂದು ತ್ರಿಕೋನದ ಶೃಂಗಾಗ್ರಗಳಾಗಿ ಆಗುವ ರೀತಿಯಲ್ಲಿ ಸಂಕೇತಿಸಲಾಗುತ್ತದೆ.

ಕಾಮ

○

○ ○

ಕ ಲಾ

ಮೇಲೆ ಇರುವ ಚುಕ್ಕೆಯು 'ಅನುಸ್ವಾರ'ವು(○), (ಎಲ್ಲ ಸ್ವರಗಳೂ ಅಂತರ್ಗತ), 'ಶಿವ'ನಿಗೆ ಸಂಬಂಧಿಸಿರುವುದು, ಮತ್ತು ಕೆಳಗಿನ ಎರಡು ಚುಕ್ಕೆಗಳು

'ವಿಸರ್ಗ'(ಃ), ಸೃಷ್ಟಿ, ಪ್ರಾದುರ್ಭಾವ ಮತ್ತು ಪ್ರಕ್ಷೇಪ ಸೂಚಕ. ಅಲ್ಲದೆ, ಈ ಮೂರು ಚುಕ್ಕೆಗಳು, ಸಕಲ ಬ್ರಹ್ಮಾಂಡದ ಮೂರು ಮೂಲಭೂತ ಶಕ್ತಿಗಳನ್ನು ಪ್ರತಿನಿಧಿಸುತ್ತವೆ : ಪ್ರಕಟಗೊಳ್ಳುವ 'ಪರ'ವಸ್ತುವಿನ ಆದಿಮ ಸಂಕಲ್ಪ (ಕಾಮ); ಈ ಸಂಕಲ್ಪದ ಮೂಲ ಅರಿವು - 'ಚಿತ್-ಶಕ್ತಿ', ಮತ್ತು 'ಜ್ಞಾನ'; ಮತ್ತು ಮೂರನೆಯದು, 'ಬಿಂದು'ವು ನಿಜಕ್ಕೂ ಪ್ರತಿನಿಧಿಸುವ ಪ್ರಕಟೀಕರಣ 'ಕ್ರಿಯೆ'. ಹೀಗೆ, ಶ್ರೀಚಕ್ರ ಮಂತ್ರ 'ಪಂಚದಶಿ'ಯ ಮೂರು ಖಂಡಗಳು 'ಕಾಮ-ಕಲಾ'ಎಂಬ ತ್ರಿಕೋನದಲ್ಲಿ ಮೂಲತಃ ಅಡಕವಾಗಿವೆ. 'ಕಾಮ' ಎಂಬುದು ಶಿವ (ಕಾಮೇಶ್ವರ) ಮತ್ತು ಶಕ್ತಿ (ಕಾಮೇಶ್ವರಿ) ಇವರ ಸಂಯೋಗ, ಕಲಾ ಎಂಬುದು ಅದರ ಮೂರ್ತ ಪ್ರಕಟೀಕರಣ. (Concrete Manifestation).

ಒಟ್ಟಾಗಿ ಒಂದು ತ್ರಿಕೋನದ ಕಲ್ಪನೆಯನ್ನು (ಒಂದು ವಕ್ರರೇಖೆ, ಮತ್ತು ಅದರ ಎರಡು ತುದಿಗಳನ್ನು ಜೋಡಿಸುವ ರಜ್ಜುರೇಖೆ ಇವುಗಳಿಂದಾದದ್ದು) ಕೊಡುವ ಮೂರು ಚುಕ್ಕೆಗಳ ಸಾಂಕೇತಿಕತೆಯು ತುಂಬಾ ವಸ್ತು ವಿಷಯ ಸಂಪನ್ನವೂ, ದೀರ್ಘವೂ ಆಗಿದೆ. ಈ ತ್ರಿಕೋನದಿಂದ 'ಕಾಮ-ಕಲಾ' ರಚಿಸಲ್ಪಟ್ಟಿದೆ : ಮೇಲಿನ ಚುಕ್ಕೆ 'ಕಾಮ' (ಆದಿಮ ಸೃಷ್ಟಿ ಸಂಕಲ್ಪ)ವನ್ನು ಪ್ರತಿನಿಧಿಸುತ್ತದೆ. ಕೆಳಗಿನ ಎರಡು ಬಿಂದುಗಳು (ಶೃಂಗಾಗ್ರಗಳು) ಪ್ರತ್ಯಕ್ಷ ಪ್ರಕಟೀಕರಣ(ಸೃಷ್ಟಿ) ಮತ್ತು ನಂತರದ ಸಂಹೃತಿಯನ್ನು ಪ್ರತಿನಿಧಿಸುತ್ತವೆ. 'ಕಾಮ'ವನ್ನು ಪ್ರತಿನಿಧಿಸುವ ಚುಕ್ಕೆ, ಬೀಜವೆಂದು ವರ್ಣಿಸಲ್ಪಟ್ಟಿದೆ. ಯಾಕೆಂದರೆ ಶಿವ-ಶಕ್ತಿ, ಅರ್ಥಾತ್ ಪ್ರಕಾಶ-ವಿಮರ್ಶಾ ರೂಪವನ್ನುಳ್ಳ ಅದು ವ್ಯಕ್ತ ವಿಶ್ವದ ಮೂಲ ಸ್ರೋತ ಮತ್ತು ಆವಶ್ಯಕ ಹಾಗೂ ಪರ್ಯಾಪ್ತ ಆದ್ಯ ಸ್ಥಿತಿ. ಆಲಂಕಾರಿಕವಾಗಿ 'ವಾಮಾ ದೇವತೆ'ಯೆಂದೂ ಹೇಳುತ್ತಾರೆ. (ಶಬ್ದಶಃ ವಾಮಾ ಎಂದರೆ ಉಗುಳುವವಳು, ಹೊರಹಾಕುವವಳು, (ವಮತಿ ವಿಶ್ವಂ ಇತಿ). 'ಕ' ಮತ್ತು 'ಲಾ' ದಿಂದ ಹೊರಡುವ ರೇಖೆಗಳು, ಸಂಕಲ್ಪದ ಕ್ರಿಯಾರೂಪಧರಿಸಿದ ಪ್ರತ್ಯಕ್ಷ ಸೃಷ್ಟಿಯ ಉದ್ಭವ, ಮತ್ತು ಅಂತಿಮ ಸಂಹೃತಿ ಇವುಗಳ ಯುಗಲಸ್ವರೂಪ. (ಪ್ರಕಾಶ ಮತ್ತು

ಮಿವರ್ಶಾ). ಈಯೆರಡು ರೇಖೆಗಳು ಆಲಂಕಾರಿಕವಾಗಿ ಜ್ಯೇಷ್ಠಾ (ಮೂಲಪ್ರಕೃತಿ, ಪ್ರಥಮಜಾ, ಮೊದಲು ಹುಟ್ಟಿದವಳು) ಮತ್ತು ರೌದ್ರಿ (ಸಂಹೃತಿಗೊಳಿಸುವ ದೇವತೆ) ಎಂದು ವರ್ಣಿಸಲಾಗಿದೆ. ಮೂರು ರೇಖೆಗಳು ಬ್ರಹ್ಮಾಂಡದ ಮೂರು 'ಗುಣ'ಗಳನ್ನೂ, ಮೂರು ಅಧಿಷ್ಠಾತೃ ದೇವತೆಗಳನ್ನೂ ಸಂಕೇತಿಸುವುವು : ಸತ್ತ್ವ (ಬ್ರಹ್ಮ), ರಜಸ್ (ವಿಷ್ಣು) ಮತ್ತು ತಮಸ್ (ರುದ್ರ). ತ್ರಿಕೋನದ ಶೃಂಗದಲ್ಲಿ (ಮೇಲಿನ ಚುಕ್ಕೆ) 'ಸೂರ್ಯ'ನ ಸ್ಥಾನ('ಸೂ' ಧಾತುವಿನಿಂದ ವ್ಯುತ್ಪತ್ತಿಯಾದ, 'ಸೃಜಿಸು' ಎಂಬರ್ಥದ್ದು). ಬಲ ಚುಕ್ಕೆಯಲ್ಲಿ ಚಂದ್ರ ('ಚದಿ' = ಸಂತೋಷ ಕೊಡು, ಪೋಷಿಸು) ಮತ್ತು ಎಡ ಚುಕ್ಕೆಯಲ್ಲಿ ಅಗ್ನಿ (ಭೂಮಂಡಲದಲ್ಲಿರುವ ಸೂರ್ಯ ವಿಲಯ ಮತ್ತು ಸಂಹೃತಿಗಳ ತತ್ತ್ವ), ಇವರ ಸ್ಥಾನಗಳು.[19]

ಪ್ರತಿಮಾಶಿಲ್ಪರೀತ್ಯಾ, ಮೇಲಿನ ಚುಕ್ಕೆ (ಬ್ರಹ್ಮ) ದೇವಿಯ ಮುಖ, ಮತ್ತು ಕೆಳಗಿನ ಜೋಡಿ ಚುಕ್ಕೆಗಳು (ಹರಿ-ಹರ) ಅವಳ ಸ್ತನಗಳು. ಸಾಧಕನು ಇಡೀ 'ಕಾಮ-ಕಲಾ' ತ್ರಿಕೋಣವು ತನ್ನ ಶರೀರವೆಂದು ಧ್ಯಾನಿಸಬೇಕೆಂದು ಯೋಗಿನೀ-ಹೃದಯ ತಂತ್ರವು ಆದೇಶಿಸುತ್ತದೆ[20], ಮೇಲಿನ ಚುಕ್ಕೆಯ ಶಿರಸ್ಸು ಹಾಗೂ ಕೆಳಗಿನ ಚುಕ್ಕೆಗಳು ಶರೀರದ ಎರಡು ಪಾರ್ಶ್ವಗಳು. ಕೆಳಗಿನ ಸರಳರೇಖೆಯು (ರಜ್ಜು ರೇಖೆಯು) ಅವನ ಆಸನ ಮತ್ತು ಎಡಗಡೆಯಿಂದ ಶೃಂಗದಿಂದ ಕೆಳಗೆ ಬರುವ ರೇಖೆಯು ದೇವಿಯ ಅನುಗ್ರಹವೆಂದು ಭಾವಿಸಿ ಧ್ಯಾನಿಸುವ ಸೂಚನೆ ಕೊಡಲಾಗಿದೆ.

ಈ ಮೂರು ಚುಕ್ಕೆಗಳು ತ್ರಿಕೋಣರೂಪದಲ್ಲಿ ಒಂದು ಏಕತೆಯನ್ನುಂಟುಮಾಡುತ್ತವೆ ಯೆಂಬುದು, ತಾತ್ವಿಕವಾಗಿ, ಅರ್ಥಪೂರ್ಣವಾಗಿದೆ: ''ಅವ್ಯಕ್ತ ಶಕ್ತಿಯು 'ಬಿಂದು', 'ನಾದ' ಮತ್ತು 'ಬೀಜ' (ಸ್ರೋತ) ಹೀಗೆ ಮೂರು ರೀತಿಯಲ್ಲಿ ತಾನೇ ವಿಭಜಿತಗೊಳ್ಳುತ್ತದೆ'' ಎಂದು ''ಶಾರದಾ-ತಿಲಕ ತಂತ್ರ''ವು ಹೇಳುತ್ತದೆ.

ಈ ಕಾರಣದಿಂದಲೇ, 'ತ್ರಿಪುಟಿ'ಯ ಕಲ್ಪನೆಯು ಶ್ರೀವಿದ್ಯೆಯಲ್ಲಿ ಬಹಳ ಮಹತ್ವವುಳ್ಳದ್ದಾಗಿದೆ.[21] ದೇವಿಯ ಹೆಸರು 'ತ್ರಿಪುರಾ'[22] ಮತ್ತು ಅವಳು ಮೂರು ರೂಪಗಳಲ್ಲಿ ಪೂಜಿಸಲ್ಪಡುತ್ತಾಳೆ. (1) ಸ್ಥೂಲ, ಕಾಯಿಕ, ಮಾನವ ರೂಪದಲ್ಲಿ (2) ಸೂಕ್ಷ್ಮ ಅಥವಾ ಶಬ್ದರೂಪ, ವಾಚಿಕ, ಪಂಚದಶೀ ಅಥವಾ ಮಂತ್ರ ರೂಪದಲ್ಲಿ (3) ಅವ್ಯಕ್ತವಾದ ಮಾನಸ, ಪರಾ, ಸರ್ವಾವೃತವಾದ ಶಕ್ತಿಯ ರೂಪದಲ್ಲಿ. ಮೊದಲನೆಯದರಲ್ಲಿ ಬಾಹ್ಯ ಪೂಜಾಕ್ರಿಯೆ, ವಿಧಿಗಳಿಂದ ಪೂಜಿಸಲ್ಪಡುವಳು (ಬಹಿರ್ಯಾಗ). ಇದನ್ನು ತನ್ನ ಲಾಭಕ್ಕಾಗಿ ಸ್ವಗೃಹದಲ್ಲಿ ನಡೆಸದು ಅಥವಾ ಸಾರ್ವತ್ರಿಕ ಕಲ್ಯಾಣ (ಪರಾರ್ಥ)ಕ್ಕಾಗಿ ದೇವಸ್ಥಾನ ಇತ್ಯಾದಿ ಸಾರ್ವಜನಿಕ ಸ್ಥಳಗಳಲ್ಲಿ ನಡೆಸಬಹುದು. ಎರಡನೆಯದರಲ್ಲಿ, ಯಾವುದೇ ಬಾಹ್ಯ ಪೂಜಾಕ್ರಿಯೆಗಳಿಲ್ಲದೆ, ಮಂತ್ರಜಪ ಮತ್ತು ಅದರ ಸಂಕೇತದ ಧ್ಯಾನದ ಮೂಲಕ ಆಂತರಂಗಿಕವಾಗಿ ದೇವಿಯು ಆರಾಧಿಸಲ್ಪಡುತ್ತಾಳೆ. ಇದು ಅಂತರ್ಯಾಗ. ಮೂರನೆ ರೀತಿಯಲ್ಲಿ ಶರೀರವೇ ದೇವಿಯ ಆವಾಸ (ದೇವಸ್ಥಾನ)ವೆಂದು ಆತ್ಮವೇ ಅದರಲ್ಲಿ ಪ್ರತಿಷ್ಠಿತಳಾದ ದೇವಿಯೆಂದೂ ಕೇವಲ ಮಾನಸಿಕವಾಗಿ ಕಲ್ಪಿಸಿ, ಪೂಜಿಸಲಾಗುತ್ತದೆ - (ಭಾವನಾ).

ನಮ್ಮದೇಶದಲ್ಲಿ ಶ್ರೀಚಕ್ರವನ್ನು ಪೂಜಿಸುವ ಎರಡು ಪ್ರಮುಖ ಪರಂಪರೆಗಳಿವೆ. ಶ್ರೀಚಕ್ರವು ಆಕಾಶ(Space)ದಲ್ಲಿ ಸ್ಥಿತವಾಗಿರುವುದೆಂದು (ವಿಯತ್-ಚಕ್ರ) ಸೂಚಿಸಲಾಗುತ್ತದೆ ಮತ್ತು ಆ ಆಕಾಶವು ಎರಡು ರೀತಿಯದು - ಬಾಹ್ಯಾಕಾಶ, ಮತ್ತು ಚಿದಾಕಾಶ. ಶ್ರೀಚಕ್ರವು ಭೌತಿಕರೂಪದಲ್ಲಿ 'ಕೌಲ'ವೆಂದು ಕರೆಯಲಾದ ಉಪಾಸಕರಿಂದ ಪೂಜಿಸಲ್ಪಡುತ್ತದೆ. 'ಕುಲ' ಎಂದರೆ ಮನೆ, ಸಮೂಹ, ಕುಟುಂಬ, ಊರು ಅಥವಾ ಅಡವಿ. ಅದರ ಅರ್ಥವು 'ಶಕ್ತಿ' ಎಂದೂ ಆಗುತ್ತದೆ. 'ಶಿವ'ನು 'ಅಕುಲ'. ಇವೆರಡರ ಸಾಂಗತ್ಯಪೂರ್ಣ ಸಂಬಂಧವು 'ಕೌಲ'ವೆಂದು ಒಕ್ಕಣಿಸಲ್ಪಟ್ಟಿದೆ. ಶಬ್ದದ ಅರ್ಥವು ಏನೇ ಇರಲಿ, ಇಲ್ಲಿ ಮುಖ್ಯವಾಗಿ ವಿಸ್ತಾರವಾದ ಕ್ರಿಯಾವಿವರಗಳೊಂದಿಗೆ, ಸಮೂಹದಲ್ಲಿ ಮತ್ತು ತ್ರಿಪುರಸುಂದರಿಯ ಮೂರ್ತ ಪ್ರಾತಿನಿಧಿಕ ಪ್ರತಿಕೃತಿಯೊಂದಿಗೆ,

ಭೌತರೂಪದಲ್ಲಿರುವ ಶ್ರೀಚಕ್ರಯಂತ್ರವನ್ನು ಇಟ್ಟು ಪೂಜೆ ನಡೆಸಲಾಗುತ್ತದೆ. ಪ್ರಾಚೀನ ಕೌಲರು ಬಿಂದುಯುಕ್ತವಾದ ಪ್ರಥಮ ತ್ರಿಕೋಣ(ಯೋನಿ)ಯಂತ್ರವನ್ನು ಮಾತ್ರ ಪೂಜಿಸುತ್ತಿದ್ದರು, ನಂತರ ಅಧಃಪತಿತ ಕೌಲರು ಓರ್ವ ಕುಮಾರಿಯ ಪ್ರತ್ಯಕ್ಷ ಯೋನಿಯನ್ನು ಪೂಜಿಸುತ್ತಿದ್ದರೆಂದು ಲಕ್ಷ್ಮೀಧರನು ಹೇಳುತ್ತಾನೆ.[23]

'ಸಮಯ' ಪದ್ಧತಿಯನ್ನನುಸರಿಸುವ ಗುಂಪಿನ ಸಾಧಕರು 'ಹೃದಯಾಕಾಶ'ದಲ್ಲಿ ಮಾಡುವ ಪೂಜೆಗಿಂತ ಇದು (ಕೌಲ ಪದ್ಧತಿ) ಕನಿಷ್ಠತರದ್ದೆಂದು ಪರಿಗಣಿಸಲಾಗಿದೆ. 'ಸಮಯ' ಎಂಬ ಶಬ್ದವು ಮೂರು ರೀತಿಯ ಸಾಂಕೇತಿಕತೆಯನ್ನು ಹೊಂದಿದೆ : ಯಂತ್ರ ಸಂಕೇತ (ಚಕ್ರ ರಹಸ್ಯ), ಮಂತ್ರ ಸಂಕೇತ (ಪಂಚದಶೀ ರಹಸ್ಯ) ಮತ್ತು ಪೂಜಾ-ರಹಸ್ಯ. ಶರೀರದಲ್ಲಿಯೇ ಇರುವ ಚಕ್ರಗಳ ಸಾಮರಸ್ಯ (ಸಾಮ್ಯ)ವನ್ನು ಧ್ಯಾನಿಸುತ್ತ ಪೂಜೆಯನ್ನು ಸಾಧಕನು ತನ್ನ ಶರೀರದ ಮೇಲೆಯೇ ಮಾಡುತ್ತಾನೆ. 'ಸಾಮ್ಯ'ವು ನಾಲ್ಕುರೀತಿಯದು : ಯಂತ್ರದ ಅಂಗಗಳ ಮತ್ತು ಶರೀರದಲ್ಲಿರುವ ಚಕ್ರಗಳ ಸಂಬಂಧ, ಬಿಂದುವಿನ ನಾಲ್ಕು ಪಾರ್ಶ್ವಗಳ ಮತ್ತು ಸಹಸ್ರಾರದ ಸಂಬಂಧ, 'ಶಿವ-ಶಕ್ತಿ' ಮತ್ತು 'ಬಿಂದು'ಗಳ ಐಕ್ಯ ಮತ್ತು ಶಿವ-ಶಕ್ತಿ ಸಂಯೋಗ ಹಾಗೂ ಸಾಧಕನ ಶರೀರ ಇವುಗಳ ಸಾಮರಸ್ಯ. ಈ ನಾಲ್ಕು ಸಾಮರಸ್ಯ ಸಂಬಂಧಗಳ ಮೇಲಿನ ಚಿಂತನೆ (ಧ್ಯಾನ) 'ಸಮಯಾಚಾರ'ದ ಪೂಜೆಯಲ್ಲಿ ಮುಖ್ಯ ವಿಧಾನ.

ಈ ಪೂಜಾಪದ್ಧತಿಯು (ಸಮಯಾಚಾರ) ಭೌತಿಕಮೂರ್ತಿಗಳನ್ನು ಮತ್ತು ಬಾಹ್ಯ ವಿಧಿವಿಧಾನಗಳನ್ನು ನಿರಾಕರಿಸುತ್ತದೆ. (ತ್ಯಜಿಸುತ್ತದೆ). ಸಂಪೂರ್ಣ ಏಕಾಂತದಲ್ಲಿ ಉಗ್ರ ನಿಯಮನಿಷ್ಠೆಯಿಂದ ಸಾಧಕನು ಈ ನಾಲ್ಕು ರೀತಿಯ ಸಾಮರಸ್ಯ (ಸಾಮ್ಯ)ವನ್ನು ಧ್ಯಾನಿಸುತ್ತಾನೆ. ಈ ಪೂಜಾಪದ್ಧತಿಯ ನಿಯಮಗಳ ತಳಹದಿಯನ್ನು ಶುಭಾಗಮ ಪಂಚಕ ('ಐದು ಶುಭಾಗಮ') ದಲ್ಲಿ ಕೊಡಲಾಗಿದೆ. ಇವು ವಸಿಷ್ಠ, ಶುಕ, ಸನಕ, ಸನಂದನ ಮತ್ತು ಸನತ್ಕುಮಾರ ಈ ಋಷಿಗಳಿಂದ ರಚಿತವಾದವುಗಳು.

ಈ ಪದ್ಧತಿಯೇ ಯುಕ್ತವಾದುದೆಂದು ವೈದಿಕ ಪರಂಪರೆಯಿಂದಲೂ ಮಾನ್ಯವಾಗಿದೆ. ವೈದಿಕ ಪರಂಪರೆಯು ಕೌಲ ಪದ್ಧತಿ ಅಥವಾ (ಕೌಲಾಚಾರ)ವನ್ನು, ಕೇವಲ ಭೌತಿಕ ಸಿದ್ಧಿಗಳು ಹಾಗೂ ಐಹಿಕ ಲಾಭಗಳಿಗೆ ಸಂಬಂಧಿಸಿದ್ದು ಅಸಭ್ಯ ಹಾಗೂ ಕಾಮುಕ ಆಚಾರಗಳನ್ನು ವಿಧಿಸುವ ಕಾರಣದಿಂದ, ಅದು 'ಅಸಂಸ್ಕೃತ ಹಾಗೂ ಕೀಳಾದುದೆಂದು ತಿರಸ್ಕರಿಸುತ್ತದೆ.[24] (ಕೌಲ ಪದ್ಧತಿಯು, 'ಮಾಯಾ ಸಂಹಾರ', 'ಯೋಗಿ-ನಿರ್ಜಲಾ', 'ಮಾಲಿನೀವಿದ್ಯಾ' ಇತ್ಯಾದಿ ಅರುವತ್ತನಾಲ್ಕು ತಂತ್ರಗಳಿಂದ ಸ್ಥಾಪಿಸಲ್ಪಟ್ಟಿದೆ). 'ಕೌಲ' ಮತ್ತು 'ಸಮಯ' ಎರಡೂ ಪದ್ಧತಿಗಳ ಅಂಶಗಳನ್ನು ಒಳಕೊಂಡ ಮಿಶ್ರಪದ್ಧತಿಯೂ ಒಂದಿದೆ, (ಮಿಶ್ರಕಮ್). ಚಂದ್ರಕಲಾವಿದ್ಯಾಷ್ಟಕವೆಂಬ ಎಂಟು ಗ್ರಂಥಗಳ ಸಮೂಹವು ಈ ಪದ್ಧತಿಯನ್ನು ಪ್ರತಿನಿಧಿಸುತ್ತದೆ. ಅವೆಂದರೆ, ಚಂದ್ರಕಲಾ, ಜ್ಯೋತ್ಸ್ನಾವತೀ, ಕಲಾನಿಧಿ, ಕುಲಾರ್ಣವ, ದಕ್ಷಿಣಾಮೂರ್ತಿ ಸಂಹಿತಾ, ಬಾರ್ಹಸ್ಪತ್ಯಮ್, ಭುವನೇಶ್ವರೀ ತಂತ್ರ ಮತ್ತು ದುರ್ವಾಸಮತ.

ಲಕ್ಷ್ಮೀಧರನು ಹೇಳುವ ಪ್ರಕಾರ, ಶ್ರೀಚಕ್ರವು ವಾಸ್ತವವಾಗಿ ಪ್ರತಿಯೊಬ್ಬ ಮನುಷ್ಯನ ಶಿರಸ್ಸಿನಲ್ಲಿಯೂ ಇರುವ ಸಹಸ್ರದಳ ಕಮಲದೊಳಗೆ ಸ್ಥಿತವಾದ ಚಂದ್ರಮಂಡಲವೇ ಎಂಬುದು 'ಸಮಯಾಚಾರ' ದೃಷ್ಟಿ.[25] ಚಂದ್ರಮಂಡಲ ಮಧ್ಯದಲ್ಲಿರುವ ದೇವಿಯು ಸಮಗ್ರ ಚಿದ್ಭೌತಿಕ ಶರೀರವನ್ನು ತುಂಬಿ (ತೋಯಿಸಿ), ಸುಷುಮ್ನಾನಾಡಿಯ ಮೂಲಕ ಪ್ರವೇಶಿಸಿ ಮೂಲಾಧಾರ ಕುಂಡದಲ್ಲಿ, ಸರ್ಪರೂಪದಲ್ಲಿ ಸುಪ್ತವಾಗಿರುವಳು. ತಾಂತ್ರಿಕ ಸಿದ್ಧಾಂತ ಮತ್ತು ಆಚರಣೆಗಳ ಮುಖ್ಯ ಕೇಂದ್ರವಸ್ತುವಾಗಿರುವ ಕುಂಡಲಿನೀ ಶಕ್ತಿಯೇ ಇದು.[26]

ಶ್ರೀವಿದ್ಯೆಯು ವಾಸ್ತವದಲ್ಲಿ, 'ಚಂದ್ರಕಲಾವಿದ್ಯೆ'ಯೆಂದು ಕರೆಯಲ್ಪಟ್ಟಿದೆ. ಚಂದ್ರನು 'ಸೂರ್ಯನಿಂದ ಹೊರಗೆಬರುವ' ಪ್ರತಿಪದೆಯಿಂದಾರಂಭಿಸಿ, ಹದಿನೈದನೇದಿನ ಕೊನೆಗೊಳ್ಳುವ, ಪ್ರತಿಯೊಂದು ಪಕ್ಷದ ಚಂದ್ರನ 'ಕಲೆ'ಗಳು ಮಂತ್ರದ

ಹದಿನೈದು ಅಕ್ಷರಗಳೊಂದಿಗೆ ಸಂಬಂಧಿತವಾಗಿವೆ(ಸಂವಾದಿಯಾಗಿವೆ)ಯೆಂಬುದನ್ನು 'ಸಮಯ' ಸಿದ್ಧಾಂತವನ್ನು ರೂಪಿಸುವ 'ಶುಭಮಂಗಳ ಪಂಚಕ'ವು ಬಹಳ ವಿಸ್ತೃತವಾಗಿ ವಿವರಿಸುತ್ತದೆ. (ಚಂದ್ರನ ಎಲ್ಲ ಕಲೆಗಳೂ ಹೊರಗೆ ಬರುವಾಗ ಶುಕ್ಲಪಕ್ಷ ಮತ್ತು ಅವು ಸೂರ್ಯನಲ್ಲಿ ತಿರುಗಿ ಸೇರಿಹೋಗುವುದು ಕೃಷ್ಣಪಕ್ಷ). ಹದಿನೈದೂ ಚಂದ್ರ-ಕಲೆಗಳು ಸೂರ್ಯನಿಂದ ಹೊರಗೆ ಬರುವುದು ''ಪೌರ್ಣಮಾಸಿ'' ಮತ್ತು ಎಲ್ಲ ಕಲೆಗಳೂ ಸೂರ್ಯನಲ್ಲಿ ಏಕವಾಗಿ (ಸೇರಿ) ಹೋಗುವುದು ''ಅಮಾವಾಸ್ಯಾ''. ಹದಿನಾರನೆಯ ಕಲೆ (ಷೋಷಶೀಕಲಾ ಅಥವಾ ಶ್ರೀ)ಯು, 'ನಿತ್ಯಾ'ಎಂದು ಕರೆಯಲ್ಪಡುವ ಹದಿನೈದೂ ಕಲೆಗಳಲ್ಲಿಯೂ ನಿಹಿತವಾಗಿದೆ. 'ಸಮಯ'ಪದ್ಧತಿಯಲ್ಲಿ ಪೂಜೆಯು ಈ ಹದಿನೈದೂ ಕಲೆಗಳಿಗೆ, ಪ್ರತಿದಿನವೂ ಸಲ್ಲಿಸಲಾಗುತ್ತದೆ. ಆದರೆ, 'ಕೌಲ'ರು ಪಕ್ಷದ ನಿರ್ದಿಷ್ಟ ದಿನದ 'ಕಲೆ'ಗೆ ಮಾತ್ರ ಪೂಜೆಯನ್ನು ಸೀಮಿತಗೊಳಿಸುತ್ತಾರೆ.

ದೇವಿಯ ರೂಪಗಳಾಗಿ ಕಲೆಗಳನ್ನು ಆವಾಹಿಸಲಾಗುತ್ತದೆ. ಮೊದಲನೆಯಕಲೆಗೆ 'ಮಹಾತ್ರಿಪುರ ಸುಂದರೀ' ಎಂದು ಹೆಸರು. ಎರಡನೆಯದು ಕಾಮೇಶ್ವರೀ, ಮತ್ತು ಮೂರನೆಯದು 'ಭಗಮಾಲಿನೀ', ಈ ಮೂರು ಸೇರಿ ಬಿಂದುವಿನ ಮುಂದಿನ ವಿಕಸನವಾದ ಆದ್ಯ ತ್ರಿಕೋಣವಾಗುತ್ತದೆ. ಉಳಿದ ಕಲೆಗಳು ನಿತ್ಯಕ್ಲಿನ್ನಾ (ನಾಲ್ಕನೆಯದು), ಭೇರುಂಡಾ(ಐದನೆಯದು), ವಹ್ನಿವಾಸಿನೀ (ಆರನೆಯದು), ಮಹಾವಿದ್ಯಾ ಅಥವಾ ವಜ್ರೇಶ್ವರೀ (ಏಳನೇದು), ರೌದ್ರೀ (ಎಂಟನೆಯದು), ತ್ವರಿತಾ (ಒಂಭತ್ತನೆಯದು), ಕುಲಸುಂದರೀ (ಹತ್ತನೆಯದು), ನೀಲ ಪತಾಕಾ (ಹನ್ನೊಂದನೆಯದು), ವಿಜಯಾ (ಹನ್ನೆರಡನೆಯದು), ಸರ್ವಮಂಗಳಾ (ಹದಿಮೂರನೆಯದು), ಜ್ವಾಲಾ (ಹದಿನಾಲ್ಕನೆಯದು), ಮತ್ತು ಮಾಲಿನೀ (ಹದಿನೈದನೆಯದು). ಇವೆಲ್ಲವುಗಳಲ್ಲಿ ಅಡಕವಾಗಿ, ಸೂಕ್ಷ್ಮವಾಗಿರುವವಳು 'ಷೋಡಶೀ' (ಹದಿನಾರನೇದು). ಅವಳೇ ಎಲ್ಲ ಕಲೆಗಳ ಬೆಳಕಿನ ಸ್ರೋತ, ಅವಳೇ 'ಮೂಲ ವಿದ್ಯಾ'.

ಈ ಚಂದ್ರಕಲೆಗಳನ್ನು ಶ್ರೀಚಕ್ರಯಂತ್ರದ ವಿವಿಧ ಅಂಶಗಳೊಂದಿಗೆ ಏಕೀಭೂತಗೊಳಿಸಲಾಗಿದೆ. ಮತ್ತು ಇದುವೇ ಮೇರು ಪ್ರಸ್ತಾರದ ವಿಶಿಷ್ಟ ಲಕ್ಷಣ ಎಂಬುದನ್ನು ಹಿಂದೆಯೇ ಹೇಳಿದೆ. ಅವುಗಳನ್ನು ಷೋಡಶದಳ ಪದ್ಮದ ಒಂದೊಂದು ದಳದಲ್ಲಿ, ಒಂದಕ್ಕೆ ಒಂದು ಸ್ವರಾಕ್ಷರವೆಂಬಂತೆ ಸ್ಥಿತಗೊಳಿಸಲಾಗಿದೆ ಮತ್ತು ಅಷ್ಟದಳ ಕಮಲದಲ್ಲಿ ಒಂದು ದಳಕ್ಕೆ ಎರಡು ಅಕ್ಷರದಂತೆ, ಪಕ್ಷದ ದಿನಗಳನ್ನು ಪ್ರತಿನಿಧಿಸುವಹಾಗೆ, ಸ್ಥಿತಗೊಳಿಸಲಾಗಿದೆ. ಕೇಂದ್ರದ ಬಿಂದುವನ್ನು ರೂಪಿಸುವ ಮೊದಲೆರಡು ಕಲೆಗಳನ್ನುಳಿದ ಹದಿನಾಲ್ಕು ಕಲೆಗಳನ್ನು 'ಚತುರ್ದಶಾರ' (ಹದಿನಾಲ್ಕು ಮೂಲೆಗಳ ಕೃತಿ)ದಲ್ಲಿ ಅಡಕಗೊಲಿಸಲಾಗಿದೆ. ಹದಿನಾರು ಕಲೆಗಳನ್ನು ಪ್ರತಿನಿಧಿಸುವ ಹದಿನಾರು ಸ್ವರಗಳನ್ನು 'ಏ' ಮತ್ತು 'ಸ' ಎಂಬ ಪಂಚದಶಿಯ ಅಕ್ಷರಗಳಲ್ಲಿ ಸಂಕ್ಷಿಪ್ತಗೊಳಿಸಲಾಗಿದೆ. (ಏ-ಅಕ್ಷರದ ಮೊದಲ ಅಂಶ 'ಅ', ಮತ್ತು 'ಸ' ಎಂಬುದು ಸ್ವರವರ್ಗದಲ್ಲಿ ಕೊನೆಯದಾದ ವಿಸರ್ಗದ ಸಂಕೇತ). ಈ ಎರಡು (ಏ, ಸ) ಅಕ್ಷರಗಳು 'ಜೀವಕಲೆ'ಗಳೆಂದು ಪರಿಗಣಿಸಲಾಗಿದೆ ಮತ್ತು ಕೇಂದ್ರದ 'ಬಿಂದು'ವಿನಲ್ಲಿ ಸಂಯುಕ್ತಗೊಳಿಸಲ್ಪಟ್ಟಿವೆ. 'ಕ' ದಿಂದಾರಂಭಿಸಿ 'ಮ' ದಿಂದ ಕೊನೆಗೊಳ್ಳುವ ವರೆಗಿನ ವ್ಯಂಜನಗಳು ಅಷ್ಟಕೋಣ ಮತ್ತು ಎರಡು ದಶಕೋಣಾಕೃತಿಗಳಲ್ಲಿ ಸ್ಥಿತಗೊಳಿಸಲ್ಪಟ್ಟಿವೆ. 'ಯ' ದಿಂದಾರಂಭಿಸಿ ಒಂಭತ್ತು ಅಕ್ಷರಗಳು (ಎರಡುಸಾರಿ ಆವರ್ತಿತವಾಗಿ) ಚತುರ್ದಶಾರದಲ್ಲಿ ಇಡಲಾಗಿದೆ. ಮತ್ತು ಉಳಿದ ನಾಲ್ಕು ಅಕ್ಷರಗಳು, ನಾಲ್ಕು 'ಶಿವ-ಕ್ಷೇತ್ರ'ಗಳಲ್ಲಿವೆ. ಇದು ಕೈಲಾಸ ಪ್ರಸ್ತಾರ.

ಶ್ರೀಚಕ್ರದಲ್ಲಿ ಚಂದ್ರನನ್ನು ಅಂತರ್ಗತಗೊಳಿಸಿರುವ ವಿವರವನ್ನು 'ಸಮಯ' ಪರಂಪರೆಯ ಸನತ್ಕುಮಾರ ಸಂಹಿತೆಯಲ್ಲಿ 'ಕುಂಡಲಿನೀ' ಜ್ಞಾನ ವಿಷಯ ಸಂಬಂಧದಲ್ಲಿ ವಿವೇಚನೆ ಮಾಡಲಾಗಿದೆ. (ಲಕ್ಷ್ಮೀಧರನ 'ಸೌಂದರ್ಯ ಲಹರಿ 32, ಕೂಡ ನೋಡಿ). ದೇವತೆಗಳ ಮಾರ್ಗ (ದೇವಯಾನ) ಮತ್ತು ಪಿತೃಗಳಮಾರ್ಗ (ಪಿತೃಯಾನ) ಗಳ ಅಧಿಷ್ಠಾತೃಗಳಾದ ಸೂರ್ಯ ಮತ್ತು ಚಂದ್ರರು ಮಾನವ ಶರೀರದಲ್ಲಿ ಇಡಾ ಮತ್ತು

ಪಿಂಗಳಾ ನಾಡಿಗಳಲ್ಲಿ ಕ್ರಮವಾಗಿ ಹಗಲು ಮತ್ತು ರಾತ್ರಿಗಳಲ್ಲಿ ಚಲಿಸುತ್ತಾರೆ. ಎಡಭಾಗದ ನಾಡಿಯಲ್ಲಿ ಚಲಿಸುವ ಚಂದ್ರನು 72,000(ಎಪ್ಪತ್ತೆರಡು ಸಾವಿರ)ನಾಡಿಗಳ ಮೇಲೆ ಜೀವದಾಯಿಯಾದ ಅಮೃತ ಸಿಂಚನಮಾಡುತ್ತಾನೆ. ಆದರೆ ಬಲ ನಾಡಿಯಲ್ಲಿ ಚಲಿಸುವ ಸೂರ್ಯನು ಹಾಗೆ ಸಿಂಚಿಸಿದ ಅಮೃತವನ್ನು ಒಣಗಿಸಿಬಿಡುತ್ತಾನೆ. ಸೂರ್ಯ ಮತ್ತು ಚಂದ್ರರು 'ಆಧಾರಕುಂಡ'ದಲ್ಲಿ(ಮೂಲಾಧಾರದಲ್ಲಿ)ಒಂದಾದಾಗ ಅದು ಅಮಾವಾಸ್ಯೆ. ಕೃಷ್ಣಪಕ್ಷದ 'ಎಲ್ಲ ಚಂದ್ರಕಲೆಗಳು ಇಲ್ಲಿಂದಲೇ ಉಗಮವಾಗುತ್ತವೆ. ಕುಂಡಲಿನೀ ಶಕ್ತಿಯು ಕೃಷ್ಣಪಕ್ಷದಲ್ಲಿ ಮೂಲಾಧಾರದಲ್ಲಿ ನಿದ್ರಿಸಿರುತ್ತದೆ.

ಆದರೆ, ಯೋಗಿಯಾದವನು ವಾಯುವಿನ ಸಹಾಯದಿಂದ ಚಂದ್ರನನ್ನು ಚಂದ್ರಮಂಡಲದಲ್ಲಿಯೂ, ಸೂರ್ಯನನ್ನು ಸೂರ್ಯಮಂಡಲದಲ್ಲಿಯೂ ನಿಲ್ಲಿಸಿ ಇಡಬಹುದು. ಹೀಗೆ ನಿಯಂತ್ರಿತರಾದಾಗ ಅವರು ಅಮೃತಸಿಂಚನಮಾಡಲು (ಚಂದ್ರ) ಮತ್ತು ಅದನ್ನು ಆರಿಹೋಗುವಂತೆ ಮಾಡಲು (ಸೂರ್ಯ) ಅಸಮರ್ಥರಾಗುತ್ತಾರೆ. ಆಗ ಶರೀರದಲ್ಲಿರುವ ವಾಯುವಿನಿಂದ 'ಸ್ವಾಧಿಷ್ಠಾನದಲ್ಲಿರುವ ಅಗ್ನಿಯು ಭುಗಿಲೆದ್ದು 'ಆಧಾರಕುಂಡ' (ಮೂಲಾಧಾರ)ದಲ್ಲಿರುವ ಸುಧಾಸಂಚಯವನ್ನು ಆರಿಸಿ (ಒಣಗಿಸಿ) ಬಿಡುತ್ತದೆ. ಹೀಗೆ ಆಹಾರವಿಲ್ಲದಂತಾಗಿ, ಕುಂಡಲಿನಿಯು ಒಂದು ಸರ್ಪದಂತೆ ಮೇಲೆದ್ದು 'ಗ್ರಂಥಿ'ಗಳನ್ನು ಭೇದಿಸುತ್ತ 'ಸಹಸ್ರಾರ'ವನ್ನು ತಲುಪಿ ಅದರ ಮಧ್ಯದಲ್ಲಿರುವ ಚಂದ್ರನ್ನು ಕಚ್ಚುತ್ತದೆ. ಹೀಗೆ ದಂಶನಕ್ಕೊಳಗಾದ ಚಂದ್ರನಿಂದ ಅಮೃತವು ಸೂಸಿ, 'ಆಜ್ಞಾ'ಚಕ್ರದ ಮೇಲೆ ಇರುವ ಚಂದ್ರಮಂಡಲವನ್ನು ತೋಯಿಸುತ್ತದೆ. ಆಗ ಇಡೀ ಶರೀರವು ಅಮೃತಪ್ರವಾಹದಲ್ಲಿ ಮುಳುಗಿ ಹೋಗುತ್ತದೆ.

ಆಜ್ಞಾಚಕ್ರದ ಮೇಲ್ಭಾಗದಲ್ಲಿರುವ ಚಂದ್ರಮಂಡಲದಲ್ಲಿ ಚಂದ್ರನ ಹದಿನೈದು ಕಲೆಗಳು (ಪಂಚದಶ ನಿತ್ಯಾಃ) ಇರುತ್ತವೆ. ಸಹಸ್ರದಲ ಕಮಲದ ಮಧ್ಯದಲ್ಲಿರುವ ಚಂದ್ರನು ಶುದ್ಧಚೈತನ್ಯ (ಚಿತ್-ಕಲಾ), ಶುದ್ಧ ಆನಂದ (ಆನಂದರೂಪ), ಮತ್ತು 'ಆತ್ಮ'ರೂಪದ ತ್ರಿಪುರಸುಂದರೀ.

'ಆಧರಕುಂಡ'ವು ಗಾಢಕತ್ತಲೆಯು(ಅಂಧತಾ ಮಿಶ್ರ)ತುಂಬಿದ್ದು, ಅದು ಮಿಶ್ರಲೋಕ. 'ಮಣಿಪೂರ'ವೂ ಅಂತೆಯೇ ಇದೆ. ಅದು 'ಅಗ್ನಿಸ್ಥಾನ'ವಾಗಿದ್ದಾಗ್ಯೂ, ಜಲವನ್ನೂ ಹೊಂದಿದ್ದು, ಆ ಜಲವು ಹಿಂದಿನ ಕೇಂದ್ರದಲ್ಲಿರುವ ಸೂರ್ಯನನ್ನು ಪ್ರತಿಫಲಿಸುತ್ತದೆ. ಹೃದಯ ಭಾಗದಲ್ಲಿದ್ದ 'ಅನಾಹತ' ಕೇಂದ್ರವು ಬೆಳಕಿನಿಂದ ತುಂಬಿದ 'ಜ್ಯೋತಿರ್ಲೋಕ'. ಅದರ ಮೇಲುಗಡೆ ಇರುವ 'ವಿಶುದ್ಧ' ಕೇಂದ್ರವು(ಕಂಠದಲ್ಲಿ) ಚಂದ್ರಲೋಕ. ಆದರೂ, ಸೂರ್ಯನ ಸಂಸರ್ಗವಿರುವ ಕಾರಣ ಈ ಎರಡೂ ಕೇಂದ್ರಗಳಲ್ಲಿ ಚಂದ್ರಪ್ರಭೆ ಇರುವುದಿಲ್ಲ. ಶಿರೋಗ್ರದಲ್ಲಿ ಎಲ್ಲಕ್ಕಿಂತ ಮೇಲಿರುವ 'ಸಹಸ್ರದಳ ಕೇಂದ್ರವು ಮಾತ್ರವೇ ಚಂದ್ರಪ್ರಕಾಶದಿಂದ ತುಂಬಿದ 'ಜ್ಯೋತ್ಸ್ನಾಲೋಕ'. ಅಲ್ಲಿ ಪ್ರಕಾಶಿಸುತ್ತಿರುವ ಚಂದ್ರನಿಗೆ ಕಲಾವೃದ್ಧಿಕ್ಷಯಗಳಿಲ್ಲ. ಅವನು 'ನಿತ್ಯ-ಕಲಾ'. ಇಲ್ಲಿರುವ ಚಂದ್ರಮಂಡಲವೇ ಶ್ರೀಚಕ್ರ. ಈ ಶ್ರೀ ಚಕ್ರವಿನ್ಯಾಸದಲ್ಲಿ, ಆದ್ಯತ್ರಿಕೋಣವು ಆಧಾರಕುಂಡ ಅಥವಾ ಮೂಲಾಧಾರ, ಅಷ್ಟಕೋನಾಕೃತಿಯು (ಅಂತರ್ದಶಾರವು) ಮಣಿಪೂರ, ಬಹಿರ್ದಶಾರವು 'ಅನಾಹತ ಕೇಂದ್ರ', ಚತುರ್ದಶಾರವು 'ವಿಶುದ್ಧ ಕೇಂದ್ರ', ನಾಲ್ಕು ಪುರುಷ-ತ್ರಿಕೋನಗಳು 'ಆಜ್ಞಾ' ಕೇಂದ್ರ, ಮತ್ತು ಕೇಂದ್ರದ 'ಬಿಂದು'ವು ದೇವಿಯ ಪೀಠವಾದ 'ಸಹಸ್ರದಳಕಮಲ ಕೇಂದ್ರ'.

ಶ್ರೀವಿದ್ಯೆಯಿಂದ ಉದ್ಭವವಾದ ಅನೇಕ ದೇವತೆಗಳು ಇರುವರು. ಈ ದೇವತೆಗಳಲ್ಲಿ ಒಂದೊಂದೂ ಶ್ರೀಚಕ್ರದ ಒಂಭತ್ತು ಕ್ಷೇತ್ರಗಳಲ್ಲಿ ಅಧಿಷ್ಠಿತರಾದ 'ಚಕ್ರನಾಯಿಕೆ'ಯರು, ಹಾಗೂ 'ಯೋಗಿನಿ'ಯರು. ಇವರಿಗೆ ಪ್ರತ್ಯೇಕ ಪ್ರತಿಮಾರೂಪ, ಬೀಜಾಕ್ಷರ ಮತ್ತು ಪೂಜಾಸ್ಥಾನಗಳು ನಿರ್ದೇಶಿತವಾಗಿವೆ. ಯಂತ್ರವನ್ನು ಆರಾಧಿಸುವಾಗ ಸಾಧಕನು ತನ್ನ ಗುರಿಯನ್ನು ಸಾಧಿಸಲು ಸಹಾಯಕರಾಗುವ ಮೂರು 'ತ್ರಿಪುರಾತ್ರಿವಿಧಾದೇವಿ'ಯರು ಪ್ರಧಾನವೆಂದು ಪರಿಗಣಿಸಲ್ಪಟ್ಟಿದ್ದಾರೆ. ಅವರಿಗೆ ಅವರದೇ ಆದ ಸ್ವರೂಪಗಳೂ, ಯಂತ್ರಗಳೂ ಇವೆ. ಅವರು ಕೇವಲ ಪರಿವಾರ ದೇವತೆಗಳಾಗಿದ್ದಾಗ್ಯೂ, ಸ್ವತಂತ್ರ ದೇವತೆಗಳೆಂಬಂತೆ ಪೂಜೆಗೊಳ್ಳುತ್ತಾರೆ.

ಅವರಲ್ಲಿ ಮೊದಲನೆಯವಳು, ಹಾಗೂ ಅತ್ಯಂತ ಪ್ರಮುಖಳಾದವಳು 'ಬಾಲಾ-ತ್ರಿಪುರಾ'. ಅವಳು ಮೋಹಕಳಾದ ಕನ್ಯೆಯೆಂದು ಭಾವಿಸಲ್ಪಟ್ಟಿದ್ದಾಳೆ. ಜಗತ್-ತ್ರಿತಯ ಮೋಹಿನೀ, ಅಥವಾ ದೇವಿಯ ಯೌವನಭರಿತ ಸ್ವರೂಪದಲ್ಲಿ (ಹದಿನಾರು ವರ್ಷದ) 'ಷೋಡಶೀ' ಎಂದು ಕಲ್ಪಿಸಲಾಗಿದೆ. ಶ್ರೀಚಕ್ರವನ್ನು ನೇರವಾಗಿ ತಲುಪಲಾರದವರು 'ಬಾಲಾ'ದೇವಿಯ ಆರಾಧನೆಯ ಆಶ್ರಯವನ್ನು ಪಡೆಯಬೇಕೆಂದು ಆದೇಶಿಸಲಾಗಿದೆ. 'ಬಾಲಾ'ದೇವಿಗೆ ಅವಳದೇ ಆದ 'ಯಂತ್ರ'(ಕೆಳಗೆ ಕೊಟ್ಟಿದೆ) ಮತ್ತು 'ಐಂ, ಕ್ಲೀಂ, ಸೌಃ' ಎಂಬ ತ್ರ್ಯಕ್ಷರೀ ಮಂತ್ರವು ಇದೆ. ನಿಜವಾಗಿ ದೇವಿಯ ಆರಾಧನೆಯಲ್ಲಿ ಈ ಮಂತ್ರವೇ ಹೆಚ್ಚು ವ್ಯಾಪಕವಾಗಿ ಬಳಸಲಾಗುತ್ತದೆ ಮತ್ತು 'ಪಂಚದಶೀ' ಮಂತ್ರವು, ಈ ತ್ರ್ಯಕ್ಷರಿಯ ವಿಕಸಿತರೂಪವೆಂದು ತಿಳಿಯಲಾಗಿದೆ. ಅದರ ಪ್ರತಿಯೊಂದು ಅಕ್ಷರವು ಪಂಚದಶಿಯ ಒಂದೊಂದು 'ಕೂಟ'ವಾಗಿ ಸಲ್ಲುತ್ತದೆ; ಹಾಗೂ ಪರಿಪೂರ್ಣ ಪಂಚದಶಿಯ ಈ ರೂಪವನ್ನು ಪಡೆಯುತ್ತದೆ :

ಐಂ । ಕ ಏ ಈ ಲ ಹ್ರೀಂ । ಕ್ಲೀಂ । ಹ ಸ ಕ ಹ ಲ । ಹ್ರೀಂ । ಸೌಃ । ಸ ಕ ಲ । ಹ್ರೀಂ ।

ಮತ್ತು ಶ್ರೀವಿದ್ಯಾಗಾಯತ್ರಿಯು ಈ ರೀತಿ ಇದೆ :

ಐಂ ತ್ರಿಪುರಾದೇವಿ ವಿದ್ಮಹೇ । ಕ್ಲೀಂ ಕಾಮೇಶ್ವರೀ ಚ ಧೀಮಹಿ ।
ಸೌಃ ತನ್ನಃ ಕ್ಲಿನ್ನಾ ಪ್ರಚೋದಯಾತ್ ॥

ಮೊದಲನೆಯ ಅಕ್ಷರವಾದ 'ಐಂ' ಬೀಜ ಸೂತ್ರವೆಂದು (ವಾಗ್ಭವ), ವರ್ಣಿಸಲಾಗಿದೆ. ಅದು 'ಇಚ್ಛಾ', ಎರಡನೆಯ ಅಕ್ಷರವು 'ಜ್ಞಾನ', ಮೂರನೆಯದು 'ಕ್ರಿಯಾ' ಸೂಚಕಗಳು. 'ಶಿವ'ನ ಜ್ಞಾನರೂಪಿಯಾದ 'ದಕ್ಷಿಣಾಮೂರ್ತಿ'ಯೇ ಈ ಮಂತ್ರದ ಋಷಿ, 'ಪಂಕ್ತೀ' ಎಂಬುದು ಛಂದಸ್ಸಿನ ಹೆಸರು. 'ಬಾಲಾ ತ್ರಿಪುರಸುಂದರಿ'ಯೇ ದೇವತೆ. ಜ್ಞಾನಸಂಪಾದನೆ, ವಿದ್ಯಾಕೌಶಲ, ದುಷ್ಟಶಕ್ತಿ ನಿರ್ಮೂಲನ ಮತ್ತು ಅಪಮೃತ್ಯು ನಿವಾರಣೆ ಹಾಗೂ ಸಂಪದಭಿವೃದ್ಧಿಗಳು ಈ ಮಂತ್ರದ ಉದ್ದೇಶ.

ಬಾಲಾ ಯಂತ್ರವು ಶ್ರೀಚಕ್ರದ ಒಂದು ಸಂಕ್ಷಿಪ್ತ ರೂಪ. ಒಂದಕ್ಕೊಂದು ಸೇರುವ ಮೂರು ತ್ರಿಕೋಣಗಳಿಂದ ಉಂಟಾದದ್ದು. ಎರಡು ತ್ರಿಕೋಣಗಳು 'ಶಕ್ತಿ' ಹಾಗೂ ಒಂದು 'ಶಿವ'. ಅಷ್ಟದಳಪದ್ಮದಿಂದ ಪರಿವೃತವಾಗಿದೆ, ಒಂದೊಂದು ದಳವೂ ಒಂದೊಂದು ಶಕ್ತಿಪೀಠವನ್ನು ಪ್ರತಿನಿಧಿಸುತ್ತದೆ:

ಕಾಮರೂಪ(ಸುಭಗಾ), ಮಲಯ(ಭಗಾ), ಕೊಲ್ಲಗಿರಿ(ಕೊಲ್ಲೂರು) (ಭಗಸರ್ಪಿಣಿ), ಚೌಹಾರ(ಭಗಮಾಲಿನಿ), ಕುಲಾಂತಕ(ಅನಂಗಾ), ಜಾಲಂಧರ(ಅನಂಗಾದ್ಯಾ, ಕುಸುಮಾ), ಒಡ್ಡೀಯಾನ(ಅನಂಗಮೇಖಲಾ), ಮತ್ತು ಕೊದ್ಧ(ಅನಂಗ ಮದನಾ).[27] ಇಡೀ ಆಕೃತಿಯು ಒಂದು ಚತುಷ್ಕೋಣದಲ್ಲಿ ಇಡಲ್ಪಟ್ಟಿದ್ದು, ಅದರ ಮೇಲೆ ಇನ್ನೊಂದು ಚತುಷ್ಕೋಣವನ್ನು, ಅಷ್ಟಕೋಣಾಕೃತಿಯುಂಟಾಗುವಂತೆ ಇಡಲಾಗಿದೆ. ಎಂಟೂ ಕೋನಗಳು ಎಂಟು ದೇವತೆಗಳಿಂದ ರಕ್ಷಿಸಲ್ಪಟ್ಟಿವೆ : ವೇತಾಳ, ಅಗ್ನಿಜಿಹ್ವಾ, ಕಾಲಾಂತಕ, ಕಪಾಲಿನ್, ಏಕಪಾದ, ಭೀಮ, ಮಲಯ ಮತ್ತು ಹಾಟಕ.

'ಬಾಲಾ' ಒಂದು ಮೂರ್ತವ್ಯಕ್ತಿರೂಪದಲ್ಲಿ ಕಲ್ಪಿಸಲ್ಪಟ್ಟಿದ್ದಾಳೆ: ಮೂರು ಕಣ್ಣುಗಳು, ಅರ್ಧಚಂದ್ರನನ್ನು ಧರಿಸಿದವಳು, ಯುವತಿ, ಉದಯರವಿಯಂತೆ ಪ್ರಭಾಯುಕ್ತಳು,

ರಕ್ತವಸನಧಾರಿಣಿ, ಅಕ್ಷಮಾಲೆ(ಜಪಮಾಲೆ)ಯನ್ನೂ, ರಜ್ಜುವನ್ನೂ ಹಸ್ತದಲ್ಲಿ ಧರಿಸಿಕೊಂಡವಳು.

ರಕ್ತಾಂಬರಾಂ ಚಂದ್ರಕಲಾವತಂಸಾಂ,
ಸಮುದ್ಯತಾದಿತ್ಯನಿಭಾಂ ತ್ರಿಣೇತ್ರಾಮ್ ।
ವಿದ್ಯಾಕ್ಷಮಾಲಾಭಯದಾಮ ಹಸ್ತಾಂ,
ಧ್ಯಾಯಾಮಿ ಬಾಲಾಂ ಅರುಣಾಂಬುಜಸ್ಥಾಮ್ ॥

ಎರಡನೆಯದೇವತೆಯು 'ಮಂತ್ರಿಣೀ' - ಜ್ಞಾನ(ವಿವೇಕ)ದ ಮೂರ್ತರೂಪ. ಅವಳು ಶ್ಯಾಮಲಾ (ಕಪ್ಪುವರ್ಣದವಳು) ಮತ್ತು ಮಾತಂಗೀ (ಅಥವಾ ರಾಜಮಾತಂಗೀ) ಎಂದೂ ಕರೆಯಲ್ಪಡುತ್ತಾಳೆ. (ಶ್ರೀವಿದ್ಯೆಗೆ ಅವಳು ರಾಜದ್ವಾರದಂತೆ ಕಾರ್ಯನಿರ್ವಹಿಸುವವಳಾದ್ದರಿಂದ ರಾಜಮಾತಂಗೀ). ಅವಳ ಮಂತ್ರವು ಈ ರೀತಿ ಇದೆ.

ಐಂ ಕ್ಲೀಂ ಸೌಃ ಐಂ ಹ್ರೀಂ ಶ್ರೀಂ ಅಂ

ಅಥವಾ, ಪರ್ಯಾಯವಾಗಿ-

ಹ್ರೀಂ ಶ್ರೀಂ ಕ್ಲೀಂ ಐಂ ।

ಅಥವಾ ಮತ್ತೊಂದು ಪರ್ಯಾಯ: ಐಂ ಹ್ರೀಂ ಶ್ರೀಂ ಐಂ ಕ್ಲೀಂ ಸೌಃ ಓಂ ನಮೋ ಭಗವತಿ ರಾಜಮಾತಂಗೀಶ್ವರಿ ಐಂ ॥

ಅವಳು ಪಂಚದಶಿಯ ಎರಡನೆಯ 'ಕೂಟ'ವನ್ನು ಸಂಕೇತಿಸುತಾಳೆ. ಆದ್ದರಿಂದ ಅವಳ ಮಂತ್ರರೂಪವು ಈ ರೀತಿ ಇದೆ:

ಹ್‌ಸ್ತ್ರೈಂ। ಹ। ಸ। ಕ। ಹ। ಲ। ಹ್ರೀಂ। ಹಸ್ರೌ।

ಅವಳ ಯಂತ್ರವನ್ನು ಕೆಳಗೆ ಕೊಡಲಾಗಿದೆ:

ಅವಳು ಎರಡು ಭುಜಗಳನ್ನುಳ್ಳ ಯುವತಿಯ ರೂಪದಲ್ಲಿದ್ದು, ಒಂದು ಕೈಯಲ್ಲಿ ವೀಣೆಯನ್ನೂ, ಇನ್ನೊಂದು ಕೈಯಲ್ಲಿ ಮಧುಪಾತ್ರೆಯನ್ನು (ಜ್ಞಾನದಿಂದ ಉದ್ಭವಿಸಿದ ಮುಕ್ತಿಕಾರಕ ಆನಂದವನ್ನು ಸಂಕೇತಿಸುವ) ಹಿಡಿದಿದ್ದಾಳೆಂದು ಕಲ್ಪಿಸಲಾಗಿದೆ. ಈ ರೂಪದಲ್ಲಿ ಅವಳು 'ಸಂಪತ್‌ಪ್ರದಾ ಭೈರವಿ'ಯೆಂದು ಕರೆಯಲ್ಪಡುತ್ತಾಳೆ.

ಮೂರನೆಯ ದೇವತೆಯು ''ದಂಡ-ನಾಥಾ'' (ಸೇನಾನಾಯಕಿ, ಶ್ರೀವಿದ್ಯೆಯ ಬಲದ ಸಂಕೇತ). ಅವಳು ''ವಾರಾಹಿ''ಯೆಂದೂ ಕರೆಯಲ್ಪಡುತ್ತಾಳೆ (ಎಲ್ಲವನ್ನೂ ತಿಂದು ಹಾಕುವವಳು). ಅವಳು ಸಾಧಕನ ಸಾಧನೆಗೆ ಅಡ್ಡಿಯನ್ನುಂಟುಮಾಡುವ ಎಲ್ಲ ದುಷ್ಟ ಶಕ್ತಿಗಳನ್ನೂ ನಾಶಮಾಡಿ, ಅವನನ್ನು 'ಶ್ರೀವಿದ್ಯೆ'ಯತ್ತ ಕೊಂಡೊಯ್ಯುವವಳು. ಅವಳ ಮಂತ್ರವು ಈ ರೀತಿ ಇದೆ:

''ಐಂ, ಗ್ಲೌಂ, ಐಂ ಓಂ ನಮೋ ಭಗವತಿ ವಾರ್ತಾಲಿ ವಾರಾಹಿ ವರಾಹಮುಖಿ''



ಅವಳು ಪಂಚದಶಿಯ ಮೂರನೆಯ ಕೂಟವನ್ನು ಪ್ರತಿನಿಧಿಸುವವಳಾದ್ದರಿಂದ, ಅವಳ ಸೂತ್ರವು ಈ ರೀತಿ ಇದೆ:

ಷ್ಣೌಂ। ಸ। ಕ। ಲ। ಹ್ರೀಂ। ಹ್ಸ್ರೌಃ।

ಅವಳು ತ್ರಿಣೇತ್ರೆ, ಅಷ್ಟಭುಜವುಳ್ಳವಳು, ವರಾಹಮುಖಿ, ಕದಂಬವೃಕ್ಷದ ಕೆಳಗೆ ಕುಳಿತಿರುವವಳು ಮತ್ತು ದೇವಿಯ ಆಜ್ಞಾನುವರ್ತಿ. (ದೇವೀಚಿತ್ತಾನುಸಾರಿಣೀ). ಈ ರೂಪದಲ್ಲಿ ಅವಳು ಚೈತನ್ಯ ಭೈರವಿಯೆಂದು ಕರೆಯಲ್ಪಡುತ್ತಾಳೆ.

(ಉಪಾಸಕನ ಸಹಚರಿಯಾದ ಶಕ್ತಿ).

ಶ್ರೀಚಕ್ರದೊಂದಿಗೆ ಸಂಬಂಧಿಸಿದ ಇನ್ನೊಂದು ದೇವತೆ 'ಪ್ರತ್ಯಂಗಿರಾ' ಮುಖ್ಯವಾಗಿ ಯಕ್ಷಿಣೀ ಮತ್ತು ಭೂತೋಚ್ಚಾಟನೆಗಳಲ್ಲಿ ಒಳಗೊಂಡ ದೇವತೆ : ಅವಳು ಯಕ್ಷಿಣೀ ಪ್ರಯೋಗ ಇತ್ಯಾದಿಗಳಿಂದಾದ ದುಷ್ಪ್ರಭಾವವನ್ನು ದೂರಮಾಡುವವಳು. ಶ್ರೀಚಕ್ರರಾಧನೆಯಲ್ಲಿ ಅವಳ ಸಾಧಕನನ್ನು ಎಲ್ಲ ಅಡೆತಡೆಗಳಿಂದ ರಕ್ಷಿಸಿ, ಸರಿದಾಯಲ್ಲಿ ಕರೆದೊಯ್ಯುತ್ತಾಳೆ.

ಅವಳು ಕಪ್ಪು ವರ್ಣದ, ಕರಾಳ ಮುಖಮುದ್ರೆಯುಳ್ಳವಳು, ಸಿಂಹವಾಹಿನಿ. ಪೂರ್ಣದಿಗಂಬರಿ ಅಥವಾ ಕಪ್ಪುವಸ್ತ್ರಧರಿಸಿದವಳು. ತ್ರಿಶೂಲಧಾರಿಣೀ. ಅವಳ ಮಂತ್ರವು ಹೀಗಿದೆ :

ಹ್ರೀಂ। ಕ್ಷಂ। ಪ್ರತ್ಯಂಗಿರೇ ಕ್ಲೀಂ। ಹ್ರೀಂ। ಕ್ಷಂ। ಹುಂ। ಫಟ್ ಸೌಃ।

ಅಥವಾ ಪರ್ಯಾಯವಾಗಿ :

ಓಂ ಹ್ರೀ ನಮಃ ಕೃಷ್ಣವಾಸಸೇ ಶತಸಹಸ್ರಹಿಂಸಿನಿ ಸಹಸ್ರವದನೇ ಮಹಾಬಲೇ ಅಪರಾಜಿತೇ ಪ್ರತ್ಯಂಗಿರೇ ಪರ ಸೈನ್ಯ ವಿಧ್ವಂಸಿನಿ ಪರ ಮಂತ್ರೋತ್ಸಾದಿನಿ ಸರ್ವಭೂತದಮನಿ।

ಸರ್ವದೇವಾನ್ ಬಂಧ ಬಂಧ ಸರ್ವಾವಿದ್ಯಾಶ್ಚಿಂದಿಭಿಂದಿ, ಕ್ಷೋಭಯ ಕ್ಷೋಭಯ, ಪರ ಯಂತ್ರಾಣಿ ಸ್ಫೋಟಯ ಸ್ಫೋಟಯ ಲಾಸ್ರೋ ಸರ್ವಶೃಂಖಲಾಂಸ್ತ್ರೋಟಯ ತ್ರೋಟಯ ಜ್ವಲಜ್ಜ್ವಾಲಾಜಿಹ್ವೇ ಕರಾಲವದನೇ ಪ್ರತ್ಯಂಗಿರೇ ಹ್ರೀಂ ನಮಃ॥

ಅನೇಕ ರೂಪಗಳಲ್ಲಿ ಅವಳನ್ನು ಪ್ರತಿನಿಧಿಸಲಾಗುತ್ತದೆ. ಎಲ್ಲವೂ ವೈರಿಗಳ ಗುಂಪನ್ನೂ, ಪಾಪಗಳನ್ನು, ದುಷ್ಟ ಪ್ರಯೋಗಗಳನ್ನೂ ದೂರಮಾಡುವಲ್ಲಿ ಸಮಾನ ಮಹತ್ವವನ್ನು ಹೊಂದಿವೆ.

★ ★ ★

ಆಕರ ಸೂಚಿಕೆ

1. **ಶ್ರುತಿಶ್ಚ ದ್ವಿವಿಧಾ ವೈದಿಕೀ ತಾಂತ್ರಿಕೀ ಚೇತಿ ।**
   (ಮನುಸಂಹಿತಾ 2, 1) ಮತ್ತು ಭಾಗವತ 11ನೇ ಸ್ಕಂಧವನ್ನು ನೋಡಿ
   ವೈದಿಕೀ, ತಾಂತ್ರಿಕೀ, ಮಿಶ್ರ ಇತಿ ತ್ರಿವಿಧೋಮಖಃ ॥
   ಮತ್ತು ಅಗ್ನಿ ಪುರಾಣ 372, 34
2. **ಚತ್ವಾರ ಈಂ ವಿಭ್ರತಿ ಕ್ಷೇಮವಂತ :** ಋಗ್ವೇದ 5, 47, 4
3. **ತ್ರ್ಯರ್ಯಮಾ ಮನುಷೋ ತೇವತಾತಾ ರೋಚನಾ ದಿವ್ಯಾಧಾರಯಂತ.** 5.29.1
4. **(ed. by J. ಜಾನ್ ವುಡ್ರಫ್ : ತಾಂತ್ರಿಕ್ ಟೆಕ್ಸ್ಟ್ ಸಿರೀಸ್ Vol. 3.18; 19 ಮತ್ತು Works on Shankara Series, Vanivalas Vol. 19 & 20)**
5. ಶ್ರೀವಿದ್ಯಾರ್ಣವ ತಂತ್ರ 1, 52–60
6. ಶ್ರೀವಿದ್ಯಾರ್ಣವ ತಂತ್ರ 1, 96, 97
7. ಅದೇ 1, 99
8. ತ್ರಿಪುರ-ಸುಂದರೀ-ಭಾಷ್ಯ-ವಾರಿವಸ್ಯ
9. ಭಾವನೋಪನಿಷತ್ ಭಾಷ್ಯ
10. ಕೌಲೋಪನಿಷತ್ ಭಾಷ್ಯ
11. ಸೌಂದರ್ಯಲಹರಿ, ಶ್ಲೋ 99.
    ಜಕ್ಕಣ್ಣಾಮಾತ್ಯನ ಟಿಪ್ಪಣಿ

ಮತ್ತು

ಆಧಾರ ಸ್ವಾಧಿಷ್ಠಾನ ಮಣಿಪೂರಾನಹತ ವಿಶುದ್ಧಾಜ್ಞಾಚಕ್ರಾತ್ಮಕಂ ಶ್ರೀಚಕ್ರಂ ತ್ರಿಖಂಡಂ ಸೋಮಸೂರ್ಯಾನಲಾತ್ಮಕಂ ।

ಏವಂ ಸೋಮಸೂರ್ಯಾನಲಾಃ ಪಿಂಡಾಂಡ ಬ್ರಹ್ಮಾಂಡೇ ಆವರ್ತವರ್ತಂತೇ ।

ಪಿಂಡಾಂಡ ಬ್ರಹ್ಮಾಂಡಯೋರೈಕ್ಯಾತ್ ಪಿಂಡಾಂಡ ವೃತ್ತಿರೇವ ಬ್ರಹ್ಮಾಂಡ ವೃತ್ತಿರಿತಿ ರಹಸ್ಯಮ್ । .... ಪಿಂಡಾಂಡಮತೀತ್ಯವರ್ತತೇ ಕಮಲಮ್ । ತತ್ರ ಜ್ಯೋತ್ಸ್ನಾಮಯೋಲೋಕಃ । ತತ್ರತ್ಯಶ್ಚಂದ್ರಮಾ ನಿತ್ಯಕಲಃ । ಷೋಡಶಕಲಾನಾಂ ಷೋಡಶ ನಿತ್ಯಾತ್ಮಕತ್ವಾತ್ ॥ (ಸುಭಗೋದಯೇ-ಲಕ್ಷ್ಮೀಧರ).

12. ಶಿವಶಕ್ತ್ಯಾತ್ಮಕಂ ಸಿದ್ಧಂ ಜಗದೇವ ಚರಾಚರಮ್ ।
(ಚರ=ಪಿಂಡಾಂಡ, ಅಚರ=ಬ್ರಹ್ಮಾಂಡ)

13. ಡಿಂಡಿಮಭಾಷ್ಯ - ಸೌಂದರ್ಯಲಹರಿ, 24

14. ತ್ವಗಸೃಙ್ಮಾಂಸ ಮೇದೋಽಸ್ಥಿಧಾತವ- ಶಕ್ತಿಮೂಲಕಾಃ ।
ಮಜ್ಜಾಶುಕ್ಲಪ್ರಾಣಜೀವಧಾತವಃ ಶಿವಮೂಲಕಾಃ ।
ನವಧಾತುರಯಂದೇಹೋ ನವಯೋನಿ ಸಮುದ್ಭವಃ ।
ದಶಮೋಯೋನಿರೇಕೈವ ಪರಾಶಕ್ತಿಸ್ತದೀಶ್ವರೀ ।
ಯತ್ಪಿಂಡಾಂಡ ಸಮುತ್ಪನ್ನಂ ತದ್ಬ್ರಹ್ಮಾಂಡಮುದ್ಭವೌ ।
ಪಂಚಭೂತಾನಿ ಶಕ್ತೀನಿ ಮಾಯಾದೀನಿ ಶಿವಸ್ಯ ತು ॥
ಮಾಯಾ ಚ ಶುದ್ಧವಿದ್ಯಾ ಚ ಮಹೇಶ್ವರ ಸದಾಶಿವೌ ।
ಪಂಚವಿಂಶತಿ ತತ್ವಾನಿ ತಥೈವಾಂತರ್ಭವಂತಿ ತೇ ।
ಶಿವಶಕ್ತ್ಯಾತ್ಮಕಂ ವಿದ್ಧಿ ಜಗದೇತಚ್ಚರಾಚರಮ್ ॥

(ಕಾಮಿಕಾಗಮ)

15. ಋಗ್ವೇದ 10, 129

16. ಕಾಮ-ಕಲಾ ವಿಲಾಸ, 2

17. ಶಿವ ಸೂತ್ರ :

ಅತೋಽಕಾರ ಹಕಾರಾಭ್ಯಾಂ ಅಹಮಿತ್ಯಪೃಥಕ್ತಯಾ ।
ಪ್ರಪಂಚ ಶಿವ ಶಕ್ತಿಭ್ಯಾಂ ಕ್ರೋಡೀಕೃತ್ಯ ಪ್ರಕಾಶತೇ ॥

ಮತ್ತು ಕಾಮಕಲಾ ವಿಲಾಸ :

ಅಹಂಕಾರೌ ಶಿವಶಕ್ತಿ ಶೂನ್ಯಾಕಾರೌ ಪರಸ್ಪರಾಶ್ಲಿಷ್ಟೌ ।

18. ತತ್ರ ಕಾಮೇಶ್ವರಾಖ್ಯಸ್ಯ ಕಾಮೇಶ್ವರ್ಯಾಶ್ಚ ಪಾರ್ವತಿ ।
ಕಲಾಖ್ಯಾ ಸವಿಲಾಸಾಖ್ಯಾ ಚ ಖ್ಯಾತಾ ಕಾಮಕಲೇತಿ ಯಾ ॥

19. ರವಿರೂಪಬಿಂದುಂ ಮುಖಂ ಕೃತ್ವಾ ತಸ್ಯಾಧೋ ದಹನಶೀತಾಂಶೂ ಬಿಂದುದ್ವಯಂ ಸ್ತನಯುಗಂ ಕೃತ್ವಾ...... ಇತ್ಯಾದಿ.

(ಸೌಭಾಗ್ಯ ವರ್ಧನೀ - 19)

ಮತ್ತು

ನಮೋಮಹಾಬಿಂದುಮುಖೀ ಚಂದ್ರಸೂರ್ಯ ಸ್ತನದ್ವಯೀ ।

(ರುದ್ರ ಯಾಮಲ)

20. ಚತುಃ ಶತೀ :

ಬಿಂದು ಸಂಕಲ್ಪ್ಯ ವಕ್ತ್ರಂ ತು ತದಧಸ್ತಾತ್ತುಚದ್ವಯಃ ।
ತದಧಶ್ಚ ಹರಾರ್ಧಂ ತು ಚಿಂತಯೇತ್ತದಧೋಮುಖಂ ॥
ತತ್ರ ಕಾಮಕಲಾ ರೂಪಾಮರುಣಾಂ ಚಿಂತಯೇದಿಹ
ತತಸ್ತೇನೈವ ರೂಪೇಣ ನಿಜರೂಪಾಂ ವಿಚಿಂತಯೇತ್ ॥

ಮತ್ತು ಸೌಂದರ್ಯಲಹರಿ - 'ತಾತ್ಪರ್ಯದೀಪಿಣಿ - 19 ನೋಡಿ :

ಮುಖಂಬಿಂದುತಯಾ ಭಾತಿ ತದಧಸ್ತದ್ ದ್ವಿಬಿಂದುಕಃ ।
ಕುಚದ್ವಯತಯಾ ಜ್ಞೇಯಂ ಅಧಸ್ತಾಚ್ಚ ತ್ರಿಕೋಣಮಿತಿ ।

21. ತಿಸ್ರಃ ಪುರಸ್ತ್ರಿಪಥಾ ವಿಶ್ವಚರ್ಷಣೀ ಯತ್ರಾಕಥಾ ಅಕ್ಷ್ರ ಸಂನಿವಿಷ್ಟಾ ।
ಆಧಿಷ್ಠಾಯೇನಮಜರಾ ಪುರಾಣೀ ಮಹತ್ತರ ಮಹಿಮಾ ದೇವತಾನಾಮ್ ॥

22. ತ್ರಿಕೋಣ ಮಂಡಲಂ ಚಾಸ್ಯಾ ಭೂಪುರಂ ಚ ತ್ರಿರೇಖಕಮ್ ।
ಮಂತ್ರೋಽಪಿ ತ್ರ್ಯಕ್ಷರಃ ಪ್ರೋಕ್ತಃ ತಥಾರೂಪತ್ರಯಂ ಪುನಃ ॥
ತ್ರಿವಿಧಾ ಕುಂಡಲೀ ಶಕ್ತಿಃ ತ್ರಿದೇವಾನಾಂ ಚ ಸೃಷ್ಟಯೇ ।
ಸರ್ವಂ ತ್ರಯಂ ತ್ರಯಂ ಯಸ್ಮಾತ್ತಸ್ಮಾತ್ತು ತ್ರಿಪುರಾ ಮತಾ ॥

23. ಸೌಂದಯಲಹರೀ ಭಾಷ್ಯ 41

24. ವಾಮಕೇಶ್ವರ ತಂತ್ರ :

ಭುಜಂಗಾಕಾರ ರೂಪೇಣ ಮೂಲಾಧಾರಂ ಸಮಾಶ್ರಿತಾ ।
ಶಕ್ತಿಃ ಕುಂಡಲಿನೀ ನಾಮ ಬಿಸತಂತು ನಿಭಾಶುಭಾ ॥

ಕೊನೆಯ 'ಅಶುಭಾ' ಶಬ್ದದ ಅರ್ಥ 'ಕ್ಷಣಮಾತ್ರ ಮಿಂಚಿನಂತೆ ಪ್ರಕಾಶಿಸುವ' (ಕೃಷ್ಣಪ್ರಭಾ ವಿದ್ಯುನ್ನಿಭಾ)

27. ನವಯೋನ್ಯಾತ್ಮಕಂ ಯಂತ್ರಂ ಬಹಿರಷ್ಟದಲಾವೃತಮ್ ।
ಗೃಹೇಣ ಪುನರ್ವೀತಂ ಪೂಜನಾಯ ಲಿಖೇತ್ಸುಧೀಃ ॥

★ ★ ★

"ಬಾಲಾ-ತ್ರಿಪುರಾ"

- ಪೂರಕ ಟಿಪ್ಪಣಿ

'ಬಾಲಾಯಂತ್ರ'ವನ್ನು ಕುರಿತು ಈ ಹಿಂದೆ ಹೇಳಲಾಗಿದೆ. ಇದು ಶ್ರೀಚಕ್ರದ ಒಂದು ಮುಖ್ಯವಾದ ವ್ಯತ್ಯಸ್ತ ರೂಪ. ಮತ್ತು ಅನೇಕ ಸಾಧಕರಲ್ಲಿ ಬಳಕೆಯಲ್ಲಿದೆ. ಆ ಕಾರಣ, ಇನ್ನೂ ಕೆಲವು ವಿವರಗಳನ್ನು ಇಲ್ಲಿ ಕೊಡಲಾಗಿದೆ.

ಶ್ರೀವಿದ್ಯೆಯ ಬಾಲ-ಪಾಠ ಆವೃತ್ತಿಯೆಂದು ಗಣಿಸಲಾದ ಬಾಲಾ-ತ್ರಿಪುರಾ ಯಂತ್ರವು ಒಂಭತ್ತು ಮೂಲೆ(ಯೋನಿ)ಗಳುಳ್ಳ ಆಕೃತಿ. ಆರು ಸ್ತ್ರೀ ತ್ರಿಕೋಣಗಳನ್ನೂ, ಮೂರು ಪುರುಷ ತ್ರಿಕೋಣಗಳನ್ನು ಉಳ್ಳದ್ದು. ಇವು ಒಂದು ಅಷ್ಟದಲ ಕಮಲದಿಂದ ಪರಿವೃತವಾಗಿವೆ. ಇವೆಲ್ಲವೂ, ನಾಲ್ಕುಮುಖ್ಯ ದಿಕ್ಕುಗಳಲ್ಲಿ ದ್ವಾರಗಳನ್ನುಳ್ಳ ಚೌಕದಿಂದ(ಭೂಪುರ) ಸುತ್ತುವರೆಯಲ್ಪಟ್ಟಿರುತ್ತದೆ ಅಥವಾ ಒಂದಕ್ಕೊಂದು ಛೇದಿಸುವ ಎರಡು ಚೌಕಗಳಿಂದ ಪರಿವೃತವಾಗಿರುತ್ತದೆ.

'ಬಾಲಾ'ದೇವಿಯ ಪೀಠವಾದ ಕೇಂದ್ರದ ಸ್ತ್ರೀ-ತ್ರಿಕೋಣವು 'ಐಂ' ಎಂಬ ಬೀಜಾಕ್ಷರದಿಂದ ಅಂಕಿತವಾಗಿರುತ್ತದೆ. ಬುಡದ ತ್ರಿಕೋಣವು (ಅದೂ ಸ್ತ್ರೀ-ತ್ರಿಕೋಣವೇ), ಮುಂದಿನ ಬೀಜಾಕ್ಷರವಾದ 'ಕ್ಲೀಂ'ದಿಂದ ಮತ್ತು ಅದರ ಬಲಕ್ಕಿರುವ (ಪುರುಷ)ತ್ರಿಕೋಣವು ಮೂರನೆಯ ಬೀಜಾಕ್ಷರವಾದ 'ಸೌಃ'ದಿಂದ ಅಂಕಿತವಾಗಿರುತ್ತದೆ. ಐಂ ಕ್ಲೀಂ ಸೌಃ ಎಂಬ ಬಾಲಾಮಂತ್ರವು ಅದೇ ಕ್ರಮದಲ್ಲಿ ಇತರ ತ್ರಿಕೋನಗಳ ಮೇಲೆಯೂ ಪುನರಾವರ್ತಿತವಾಗುತ್ತದೆ. ಮೂರು ಪುರುಷ ತ್ರಿಕೋಣಗಳು ಮಂತ್ರದ ಪುರುಷ ಭಾಗವಾದ 'ಸೌಃ' ಒಳಗೊಂಡಿರುವುದ ಕಂಡುಬರುವುದು. ಅಲ್ಲದೆ ಒಟ್ಟಿನಲ್ಲಿ ಮಂತ್ರವು ಮೂರುಬಾರಿ ಪುನರಾವರ್ತಿತವಾಗುತ್ತದೆ.

ಅಷ್ಟದಳಪದ್ಮದ ಎಸಳುಗಳು ಬಾಲಾಮಂತ್ರದ 'ಗಾಯತ್ರಿ' ಪಾಠವನ್ನೊಳಗೊಳ್ಳುತ್ತವೆ.

ಕ್ಲೀಂ ತ್ರಿಪುರಾದೇವಿ ವಿದ್ಮಹೇ । ಕಾಮೇಶ್ವರೀ ಚ ಧೀಮಹಿ ।

ತನ್ನಃ ಕ್ಲಿನ್ನಾ ಪ್ರಚೋದಯಾತ್ ।

ಈ ಅಷ್ಟದಳಗಳು ಎಂಟು ಶಕ್ತಿಪೀಠಗಳನ್ನು ಪ್ರತಿನಿಧಿಸುತ್ತವೆ : ಕಾಮರೂಪ, ಮಲಯ, ಕೊಲ್ಲಗಿರಿ, ಚೌಹಾರ, ಕುಲಾಂತಕ, ಜಾಲಂಧರ, ಒಡ್ಡೀಯಾನ ಮತ್ತು ಕೊದ್ದ. ದೇವಿಯ ಎಂಟು ರೂಪಗಳಿಗೆ ಈ ದಳಗಳಲ್ಲಿ ಪೂಜೆಯನ್ನು ಸಲ್ಲಿಸಲಾಗುತ್ತದೆ : ಇಚ್ಛಾ, ಜ್ಞಾನ, ಕ್ರಿಯಾ, ಕಾಮಿನೀ, ಕಾಮದಾಯಿನೀ, ರತಿ, ರತಿಪ್ರಿಯಾ, ನಂದಾ, ಮತ್ತು ಮನೋನ್ಮನೀ.

ಸುತ್ತಲಿನ ಚೌಕ (ಅಥವಾ ಪರಸ್ಪರ ಛೇದಿಸುವ ಚೌಕಗಳು) ಸಾಧಕನನ್ನು ಅಪಾಯದಿಂದ ರಕ್ಷಿಸುವ 'ದೇವಿ'ಯ ಸಹಚರ ದೇವತೆಯರ ಸ್ಥಾನಗಳು : ತ್ರಿಪುರಾಂತಕ, ವೇತಾಲ ಅಗ್ನಿಜಿಹ್ವಾ, ಕಾಲಾಂತಕ, ಕಪಾಲಿನ್, ಏಕಪಾದ, ಭೀಮರೂಪ, ಮಲಯ ಮತ್ತು ಹಾಟಕೇಶ್ವರ ಇವರು ಆ ದೇವತೆಗಳು. ಇದಲ್ಲದೆ, ಅಷ್ಟದಿಕ್ಪಾಲಕರು (ಇಂದ್ರ, ಯಮ .... ಇತ್ಯಾದಿ) ಮುಖ್ಯ ಬಿಂದುಗಳಲ್ಲಿ ನೆಲೆಸಿರುತ್ತಾರೆ.

'ಬಾಲಾ ಮಂತ್ರ'ಕ್ಕೆ ಅನೇಕ ಪಾಠಾಂತರಗಳಿವೆ. ಒಂದು ಕೇವಲ ಮೂರು ಖಂಡಗಳನ್ನುಳ್ಳದ್ದು : ಹ್ರೀಂ ಕ್ಲೀಂ ಸೌಃ; ಮತ್ತೊಂದಕ್ಕೆ ಆರು ಖಂಡಗಳಿವೆ; ಅದು ಮೂಲದ ಮಂತ್ರವನ್ನು ಮತ್ತೊಮ್ಮೆ ವಿಲೋಮ ಕ್ರಮದಲ್ಲಿ ಬರೆಯುವುದರಿಂದ ಸಿದ್ಧವಾಗುತ್ತದೆ : ಐಂ ಕ್ಲೀಂ ಸೌಃ ಸೌಃ ಕ್ಲೀಂ ಐಂ. ಮತ್ತು ಇನ್ನೊಂದು ಒಂಭತ್ತು ಖಂಡಗಳುಳ್ಳದ್ದು : ಶ್ರೀಂ ಕ್ಲೀಂ ಹ್ರೀಂ ಐಂ ಕ್ಲೀಂ ಸೌಃ ಹ್ರೀಂ ಕ್ಲೀಂ ಶ್ರೀಂ : ಮತ್ತೊಂದು ಹತ್ತು ಅಕ್ಷರಗಳನ್ನುಳ್ಳ ಮಂತ್ರವೂ ಇದೆ : ಐಂ ಕ್ಲೀಂ ಸೌಃ ಬಾಲಾ ತ್ರಿಪುರೇ ಸ್ವಾಹಾ ।

ಹದಿನಾಲ್ಕು ಖಂಡಗಳ ಮಂತ್ರವು ಈ ರೀತಿ ಇದೆ :

ಐಂ ಕ್ಲೀಂ ಹ್‌ಸೌಃ ಬಾಲಾ ತ್ರಿಪುರೇ ಸಿದ್ಧಿಂ ದೇಹಿ ನಮಃ ।

ಇದು ಉದ್ದೇಶದ ಹೇಳಿಕೆಯನ್ನು ಒಳಗೊಂಡಿದೆ. ಮೊದಲ ಖಂಡವು 'ವಾಕ್ಕ'ನ್ನು, ಎರಡನೆಯದು 'ಕಾಮ'ವನ್ನು ಮೂರನೆಯದು 'ವ್ಯೋಮ' ಅಥವಾ ಅನಂತ ಚೈತನ್ಯವನ್ನು ಸಂಕೇತಿಸುತ್ತಿದೆ.

ಹದಿನೇಳು ಖಂಡಗಳುಳ್ಳ ಮಂತ್ರವು ಇದರ ವಿಸ್ತೃತರೂಪವಾಗಿದೆ :

ಕ್ಲೀಂ । ಕ್ಷ್ರ್ಮ್ಯೂಂ । ಐಂ । ತ್ರಿಪುರೇ ಸರ್ವವಾಂಛಿತಂ ದೇವಿ ನಮಃ ಸ್ವಾಹಾ ।

ಮೊದಲ ಸಂಯುಕ್ತ ಖಂಡವು 'ಭೃಗು' ಮಹರ್ಷಿಯನ್ನು(ಸ), ಸೃಷ್ಟಿಕರ್ತೃ ಬ್ರಹ್ಮ(ಕ), ಕ್ರಿಯೆ(ಲ), ಅಗ್ನಿ(ರ), ಶಾಂತಿ(ಈ) ಮತ್ತು ಚಂದ್ರ(ಂ). ಎರಡನೆಯ ಖಂಡವು ವರ್ಣಮಾಲೆಯ ಕೊನೆಯ ಅಕ್ಷರವಾದ 'ಕ್ಷ' (ಎಲ್ಲ ವಾಕ್ಕುಗಳ ಸಂಕೇತ), ಅಗ್ನಿ(ರ), ಸಂಹಾರಕರ್ತ ಮಹಾಕಾಲ 'ಮ', ಕುಂಡಲಿನಿ 'ಈ', ಸ್ಥಿತಿಕಾರಕ ವಿಷ್ಣು 'ಯ', ಚಂದ್ರ'(ಂ)' (ಮ್). ಮೂರನೆಯ ಖಂಡವು 'ವಾಗ್ಬೀಜ'ವಾಗಿದೆ.

ಇದೇ ರೀತಿಯಲ್ಲಿ ಈ ಕೆಳಗಿನವು ಇತರ ಪಾಠಭೇದಗಳು :

ಹ್ರೀಂ ಹ್ರೀಂ ಹ್ರೀಂ ಪ್ರೌಢ ತ್ರಿಪುರೇ ಆರೋಗ್ಯಮೈಶ್ವರ್ಯಂದೇಹಿ ಸ್ವಾಹಾ ।

ಹ್ರೀಂ ಶ್ರೀಂ ಕ್ಲೀಂ ತ್ರಿಪುರಾ ಮದನೇ ಸರ್ವಂ ಶುಭಂ ಸಾಧಯ ಸ್ವಾಹಾ ।

ಹ್ರೀಂ ಶ್ರೀಂ ಕ್ಲೀಂ ಪರಾಪರೇ ತ್ರಿಪುರೇ ಸರ್ವೇಪ್ಸಿತಂ ಸಾಧಯ ಸ್ವಾಹಾ ।

'ಬಾಲಾ' ದೇವಿಯ ಮೂರ್ತರೂಪವನ್ನು ಧ್ಯಾನಾನುಕೂಲಕ್ಕೋಸ್ಕರ ಈ ಕೆಳಗಿನ ಸ್ತವವು ಕೊಡುತ್ತದೆ. ಅವಳು ರಕ್ತವರ್ಣದ ಮೂರು ಕಣ್ಣುಗಳನ್ನುಳ್ಳ, ಶಿರದಲ್ಲಿ

ಚಂದ್ರನನ್ನು ಧರಿಸಿದ, ಚತುರ್ಭುಜಳಾದ, ಅಂಕುಶ, ಪಾಶ, ಪುಸ್ತಕ ಮತ್ತು ಅಕ್ಷಮಾಲೆಯನ್ನು ಧರಿಸಿದ ಯುವತಿಯಂತೆ ವರ್ಣಿಸಲಾಗಿದೆ :

ಪಾಶಾಂಕುಶೌ ಪುಸ್ತಕಮಕ್ಷ ಸೂತ್ರಂ
ಕರೈರ್ದಧಾನಾ ಸಕಲಾಮರಾರ್ಚ್ಯಾ
ರಕ್ತಾ ತ್ರಿಣೇತ್ರಾ ಶಶಿಶೇಖರೇಽಯಂ
ಧ್ಯೇಯಾಖಿಲಧ್ಯೈಂ ತ್ರಿಪುರಾತ್ರ ಬಾಲಾ ॥





Bālā-yantra





Bāla-Yantra








ॐह्रींयां

ಶ್ರೀಯಂತ್ರವಿನಿರ್ಮಾಣಮ್

ಶ್ರೀಚಕ್ರಯಂತ್ರವನ್ನು ರಚಿಸುವ ಕ್ರಮವನ್ನು ಕುರಿತ ವಿವರವನ್ನು ಕೊಡುವ 'ಗಂಧರ್ವ ತಂತ್ರ' (ಐದನೆಯ ಪಾತಾಲ, ಶ್ಲೋಕ 2-16) ದಿಂದ ಆಯ್ದ ಶ್ಲೋಕಗಳನ್ನು ಈ ಕೆಳಗೆ ಕೊಡಲಾಗಿದೆ.

ಸೈವ ಮಾಲೇಚ್ಯ ಸರ್ಗಾದೌ ಸಚ್ಚಿದಾನಂದ ರೂಪಿಣೀ ।
ಸಮಸ್ತ ತತ್ತ್ವ ಸಂಯೋಗಾತ್ ಸ್ಮೃತ್ಯಧಿಷ್ಠಾನ ರೂಪಿಣೀ ॥
ವ್ಯಕ್ತೀಕರೋತಿ ನಿತ್ಯಾ(ಯಾ)ಪ್ರಕೃತಿ : ಪರಮಃ ಪುಮಾನ್ ।
ಸಾ ತತ್ತ್ವ ಸಂಜ್ಞಾ ಚಿನ್ಮಾತ್ರಾಜ್ಯೋತಿಷಃ ಸಂನಿಧೇಸ್ತಥಾ ॥
ವಿಚಿಕೀಷುರ್ಯೋರ್ಘನಿಭೂತಾ ಕ್ವಚಿದ್ಭ್ಯೇತಿ ಬಿಂದುನಾ ।
ಅತಿವ್ಯಕ್ತಾ ಪರಾಶಕ್ತಿರವಿನಾಭಾವ ಲಕ್ಷಣಾ ॥
ಅಖಂಡಪರ ಚಿಚ್ಛಕ್ತಿರ್ವ್ಯಾಪ್ತಾ ಚಿದ್ರೂಪಿಣೀ ವಿಭುಃ ।
ಸಮಸ್ತ ತತ್ತ್ವಭಾವೇನ ವಿವರ್ತೇಚ್ಛಾ ಸಮನ್ವಿತಾ ॥
ಪ್ರಯಾತಿ ಬಿಂದು ಭಾವಂ ಚ ಕ್ರಿಯಾ ಪ್ರಾಧಾನ್ಯ ಲಕ್ಷಣಮ್ ।
ಬೈಂದವಂ ಮಾತೃಚಕ್ರಸ್ಯ ತ್ರಿರೂಪತ್ವಂ ಪುನರ್ಭವೇತ್ ॥
ಬಿಂದುಃಶಿವಾತ್ಮಕಸ್ತತ್ರ ಬೀಜಂ ಶಕ್ತ್ಯಾತ್ಮಕಮಂಸ್ಮೃತಮ್ ।
ತಯೋರ್ಯೋಗೇ ಭವೇನ್ನಾದಸ್ತೇಭ್ಯೋ ಯಚ್ಚಿಂತಯಾಮ್ಯಹಮ್ ॥
ತಸ್ಮಾತ್ತಾನಿ ಚ ಚಕ್ರಾಣಿ ತತ್ಪ್ರಕಾರಃ ಪ್ರಕಥ್ಯತೇ ।
ತತಃ ಪ್ರಾಙ್ಮುಖ ಆಸೀನಶ್ಚ ಕ್ರೋದ್ಧಾರಂ ಸಮಾರಭೇತ್ ॥
ಹೇಮರೂಪ್ಯಾದಿ ತಾಮ್ರಾಣಾಂ ಪಟ್ಟೇ ಚಾತಿ ಮನೋಹರೇ ।
ಚತುರಸ್ರೇ ಸಮೇಶುದ್ಧೇ ಮಧ್ಯೇಚ್ಛೂನ ವಿಭೂಷಿತೇ ॥

ಯುಗ್ಮಾಂಗ ಮಿಲಿತಂ ದೇವಿ ಪಟ್ಟಸ್ಯೇಹ ಸಮೀರಿತಮ್ ।
ಅಥಮಾ ಪರಮೇಶಾನಿ ಬಭೌ ಚಕ್ರಂ ಸಮಾಲಿಖೇತ್ ॥

ಹಸ್ತಮಾತ್ರಮಿತೇ ಶುದ್ಧೇ ಗೋಮಯೇನೋಪಲೇಪಿತೇ ।
ಸಿಂಧೂರ ರಜಸಾ ತತ್ರ ಕುಂಕುಮೇನಾಽಥವಾ ಪ್ರಿಯೇ ॥

ಆಲಿಖೇಚ್ಚಕ್ರರಾಜಂ ಚ ಲೇಖನ್ಯಾ ಹೈಮಯಾ ತಥಾ ।
ಅಥವಾ ಕುಶಮೂಲೇನ ದರ್ಭಪಾಣಿಃ ಸಮಾಹಿತಃ ॥

ನೇತ್ರರಮ್ಯಂ ಯಥಾ ಚಕ್ರಂ ತಥಾ ಕುರ್ಯಾದ್ವಿಚಕ್ಷಣಃ ।
ಪ್ರತೀಚ್ಯಗ್ರಂ ಲಿಖೇದೇಕಂ ತ್ರಿಕೋಣಂ ತದುಪರ್ಯಥ ॥

ಪೂರ್ವತ್ರಿಕೋಣ ಮಧ್ಯಾಗ್ರಂ ತ್ರಿಕೋಣ ತದುಪರ್ಯಥ ।
ಪೂರ್ವತ್ರಿಕೋಣ ಮಧ್ಯಾಗ್ರಂ ತ್ರಿಕೋಣಾಂತರಮಾಲಿಖೇತ್ ॥

ಅಥ ಸಂಧಿದ್ವಯಂಭಿತ್ವಾ ಪ್ರಾಗಗ್ರಂ ವಿಲಿಖೇತ್ಪರಮ್ ।
ತ್ರಿಕೋಣಮಧ್ಯಗಂ ಚಕ್ರಮಷ್ಟಕೋಣಂ ತಥಾ ಭವೇತ್ ॥

ತತೋ ದಶಾರ ಚಕ್ರಸ್ಯ ನಿರ್ಮಾಣಂ ಶ್ರುಣು ಪಾರ್ವತಿ ।
ದಕ್ಷಿಣೋತ್ತರಗಾ ರೇಖಾಸ್ತಿಸ್ರೋಯಾಸ್ತತ್ರ ತಾಸ್ವಪಿ ॥

ಮಧ್ಯರೇಖಾಂ ಪರಿತ್ಯಜ್ಯ ರೇಖೇ ದ್ವೇ ಪರಿವರ್ಧಯೇತ್ ।
ತೇನ ಷಟ್ಕೋಣಕಂ ಕೃತ್ವಾ ಸಂಧಿ ಭೇದೇ ಚತುಷ್ಟಯಮ್ ॥

ಕೃತ್ವಾ ರೇಖಾ ದ್ವಯಂ ಕುರ್ಯಾದ್ ದಶಕೋಣಂ ಯಥಾ ಭವೇತ್ ।
ತಥಾನ್ಯದ್ದಶಕೋಣಸ್ಯ ನಿರ್ಮಾಣಂ ಪರಿಕೀರ್ತ್ಯತೇ ॥

ದಕ್ಷಿಣೋತ್ತರಗಾಸ್ವೇವಂ ರೇಖಾಃ ಪಂಚ ಭವಂತಿ ಯಾಃ ।
ತಾಸಾಂ ರೇಖಾತ್ರಯಂ ಮಧ್ಯೇ ಹಿತ್ವಾ ಪೂರ್ವಾಪರಂ ತು ತತ್ ॥

ಬಾಹ್ಯ ರೇಖಾದ್ವಯಂ ದೇವಿ ಪೂರ್ವವತ್ ಪರಿವರ್ಧಯೇತ್ ।
ತೇನ ಷಟ್ಕೋಣಕಂ ಕೃತ್ವಾ ಸಂಧಿ ಭೇದ ಚತುಷ್ಟಯಮ್ ॥

ಕೃತ್ವಾ ರೇಖಾದ್ವಯಂ ಕುರ್ಯಾದ್ ದಶಕೋಣಂ ಯಥಾ ಭವೇತ್ ।
ಚತುರ್ದಶಾರ ಚಕ್ರಸ್ಯ ನಿರ್ಮಾಣಂ ಕಥ್ಯತೇಽಧುನಾ ॥

ದಕ್ಷಿಣೋತ್ತರಗಾಸ್ತ್ವೇವಂ ರೇಖಾಃ ಸಪ್ತ ಭವಂತಿ ಯಾಃ ।
ತಾಸಾ ರೇಖಾ ತ್ರಯಂ ಹಿತ್ವಾ ಬಾಹ್ಯೇ ಪೂರ್ವಾಪರಂ ತತಃ ॥

ದೀರ್ಘಂ ರೇಖಾದ್ವಯಂ ಮಂತ್ರಿ ಪೂರ್ವವತ್ ಪರಿವರ್ಧಯೇತ್ ।
ತೇನ ಷಟ್ಕೋಣಕಂ ಕೃತ್ವಾ ಸಂಧಿ ಭೇದ ಚತುಷ್ಟಯಮ್ ॥

ದಶಾರೀ ಕೃತ್ವಾ ತೇನೈವ ಸಂಧಿ ಭೇದೇ ಚತುಷ್ಟಯಾತ್ ।
ರೇಖಾದ್ವಯಂ ಬಹಿಃ ಕುರ್ಯಾದ್ರೇಖಾಃ ಸ್ಯುರ್ನವಚೈವ ವ ॥

ಕಲ್ಪಯೇದಥ ತಸ್ಯಾಗ್ರೈರನ್ಯಕೋಣ ಚತುಷ್ಟಯಮ್ ।
ಏವಂ ಚತುರ್ದಶಾರಂ ಸ್ಯಾದ್ವಿಲೋಚನ ಮನೋಹರಮ್ ॥

ಏವಂ ನಿಷ್ಪಾದಿತೇ ಚಕ್ರೇ ಯದ್ಭವತಿ ಚ ತಚ್ಛೃಣು ।
ಮಧ್ಯೇ ತ್ರಿಕೋಣಮೇವ ಸ್ಯಾತ್ ತನ್ಮಧ್ಯೇ ಬಿಂದುರಿಷ್ಯತೇ ॥

ಚತುರ್ಣಾಮಪಿ ಚಕ್ರಾಣಾಂ ಬಹಿರಗ್ರಸ್ತ್ರಿಕೋಣಕಾಃ ।
ತ್ರಿಚತ್ವಾರಿಂಶಚ್ಚ ಗುಣಿತಾ ಯೋನಯೋಽಷ್ಟೌ ಚ ಶೋಭಿನಾಃ ॥

ಮತ್ಸ್ಯಾದ್ವಾದಶ ಸಂಪನಾಶ್ಚತುಷ್ಕೋಣೋಪ ಶೋಭಿತಾಃ ।
ಗ್ರಂಥಯೋಷ್ಟಾದಶಾಪಿ ಸ್ಯುಃ ಷಟ್ಪಥಾ ಗ್ರಂಥಯೋಽಪರೇ ॥

ಚತುರ್ವಿಂಶತಿ ಸಂಖ್ಯಿತಾಃ ಶೋಬನಾಸ್ತೇ ಚತುಷ್ಪಥಾಃ ।
ಅಷ್ಟಕೋಣಕ ಗರ್ಭಂ ತು ಚತುಷ್ಕೋಣತ್ರಯಂ ತಥಾ ॥

ದಕ್ಷಿಣೋತ್ತರ ಪೂರ್ವಾಸು ದಿಕ,ಉ ಸಂಭವತಿ ಕ್ರಮಾತ್ ।
ದಕ್ಷಿಣೋತ್ತರಗಾಸ್ತತ್ರ ನವ ರೇಖಾ ಭವಂತಿ ಹಿ ॥
ನವ ರೇಖಾಸ್ತಥೈವಾನ್ಯಾ ವಹ್ನಿವಾಯುದಿಗಾಯತಾಃ ।
ತತ್ರ ಯೇ ಪಂಚ ದೇವೇಶಿ ಸಾಧಕಾಭಿಮುಖಾಗ್ರಕಾಃ ।
ತ್ರಿಕೋಣಾಸ್ತೇ ಶಕ್ತಯ ಸ್ಯುಃ ಪಂಚ ತತ್ರ ಶುಭೋದಯಾಃ ॥
ಪೂರ್ವಾಗ್ರಾ ಯೇ ತು ಚತ್ವಾರೋ ವಹ್ನಯಸ್ತೇ ಪ್ರಕೀರ್ತಿತಾಃ ।
ಏವಂ ಚಕ್ರಂ ವಿನಿರ್ಮಾಯ ಬಾಹ್ಯೇ ವೃತ್ತಂ ವಿಲಿಖ್ಯ ಚ ॥
ತೇನಾಷ್ಟದಲಪದ್ಮಸ್ಯ ನಿರ್ಮಾಣಂ ತದ್ಬಹಿಸ್ತಥಾ ।
ವೃತ್ತೇನ ಷೋಡಶದಲಂ ಲಿಖೇತ್ ಪದ್ಮಮನೋಹರಮ್ ॥
ವೃತ್ತಯಂ ತು ತದ್ಬಾಹ್ಯೇ ತದ್ಬಾಹ್ಯೇ ಚತುರಸ್ರಕಮ್ ।
ತ್ರಿರೇಖಂ ಭೂಪುರಂ ವಿದ್ಧಿ ಚತುರ್ಷ್ವಾರೋಪಶೋಭಿತಮ್ ॥
ಏವಂ ಭವಂತಿ ಚಕ್ರಾಣಿ ಬಿಂದುನೈವ ನಮ ಕ್ರಮಾತ್ ।
ವೃತ್ತತ್ರಯಂ ಮಹೇಶಾನಿ ನ ಪೂಜಾಯಾಂ ನಿಗದ್ಯತೇ ॥

★ ★ ★

ನಮ್ಮ ಪ್ರಕಟಣೆಗಳು

1.	ಮನಸ್ಸಿಗೆ ವ್ಯಾಯಾಮ (CD ಹಾಗೂ ಕ್ಯಾಸೆಟ್ ರೂಪದಲ್ಲೂ ಲಭ್ಯ)	– 45
2.	ಓ ಮನಸೆ, ಬಾಗಿಲು ತೆಗಿ	– 30
3.	ಮುದ್ರೆಗಳು	– 35
4.	ಭಾಷಣ ಹಾಗೂ ಸಂವಹನ ಕಲೆ	– 40
5.	ರುದ್ರಾಕ್ಷ	– 65
6.	ಸ್ಫೂರ್ತಿ ಕಿರಣ (ಸ್ವಾಮಿ ವಿವೇಕಾನಂದರ ನುಡಿಗಳು)	– 15
7.	ರೋಚಕ ಕಥೆಗಳು	– 30
8.	ರಂಗೋಲಿ	– 15
9.	ಗಣಿತ ಭಾರತಿ	– 50
10.	Ganita Bharati	– 80
11.	ಚೈತ್ಯ ಪುರುಷ – ಶ್ರೀಮಾತೆ ಹಾಗೂ ಶ್ರೀ ಅರೋಬಿಂದೊ	– 35
12.	ಯಶಸ್ವೀ ಕೃಷಿ	– 40
13.	ಬೆಳಕಿನ ಪಥ	– 65
14.	ಜೀವನ ಸುಖ	– 60
15.	ಆರೋಗ್ಯಕರ ಅಡುಗೆ	– 60
16.	ಸಂತ ಹೃದಯದ ಶ್ರೀಮಂತ ನುಡಿಗಳು	– 40
17.	ಪುನರ್ಜನ್ಮ	– 15
18.	ಧ್ಯಾನಶಾಸ್ತ್ರ – ಟಿಬೇಟಿಯನ್ ತಂತ್ರಗಳು	– 10
19.	ಧ್ಯಾನ – (ಸಂಗ್ರಹ) ಎಸ್. ಕೇಶವನ್	– 20
20.	ಕೃಷಿ ಮಾದರಿ	– 10
21.	ಮಧುಗೀತ – ಲಕ್ಷ್ಮೀಕಾಂತ ಹೆಗಡೆ	– 80

ಶ್ರೀ ಅರೋಬಿಂದೊ ಕಪಾಲಿಶಾಸ್ತ್ರೀ ವೇದ ಸಂಸ್ಕೃತಿ ಸಂಸ್ಥೆ
63, 13ನೇ ಮುಖ್ಯ ರಸ್ತೆ, 4ನೇ ಬ್ಲಾಕ್, ಜಯನಗರ ಪೂರ್ವ, ಬೆಂಗಳೂರು-560 011.
☎ 2245 6315, E-mail: info@vedah.com, Web: www.vedah.org

SAKSI ಪ್ರಕಟಣೆಗಳು

1.	ಋಗ್ವೇದದ ಅಂತರಂಗ	75
2.	ಯಜುರ್‌ವೇದದ ಅಂತರಂಗ	80
3.	ಸಾಮವೇದದ ಅಂತರಂಗ	35
4.	ಅಥರ್ವ ವೇದದ ಅಂತರಂಗ	70
5.	ಕೃಷ್ಣ ಯಜುರ್‌ವೇದ ತೈತ್ತಿರೀಯ ಸಂಹಿತೆ - ಕಾಂಡ 1	190
6.	ಕೃಷ್ಣ ಯಜುರ್‌ವೇದ ತೈತ್ತಿರೀಯ ಸಂಹಿತೆ - ಕಾಂಡ 4 (ಮಂತ್ರ, ಅನುವಾದ ಹಾಗೂ ವಿವರಣೆ)	250
7.	ಋಗ್ವೇದ ಸಂಹಿತೆ : ಮಂಡಲ 4 (ಮಂತ್ರ, ಅರ್ಥ ಹಾಗೂ ಟಿಪ್ಪಣಿಗಳು)	170
8.	ಋಗ್ವೇದವನ್ನು ಯಾಕೆ ಓದಬೇಕು	50
9.	ಅಂತರ್‌ಯಜ್ಞ	12
10.	ಸರಸ್ವತಿ (ಋಗ್ವೇದ ಮಂತ್ರಗಳು)	22
11.	ಭೂ ಸೂಕ್ತ	20
12.	ಪರಮಾನಂದ ಪ್ರಾಪ್ತಿ (ಋಗ್ವೇದ ಮಂತ್ರಗಳು)	18
13.	ಆಧುನಿಕರಿಗಾಗಿ ವೇದ ಜ್ಞಾನ	30
14.	ನೆಮ್ಮದಿಯ ಬಾಳು ನಿಮ್ಮದಾಗಿಸಿಕೊಳ್ಳಿ	35
15.	ಭುವನದ ಬೆಳಕು ಶ್ರೀಮಾತಾ	60
16.	ಯಂತ್ರಗಳು	60
17.	ನಿಶ್ಚಿತ ಪ್ರಯೋಜನಗಳಿಗಾಗಿ ಪ್ರಾಣಾಯಾಮ ಹಾಗೂ ಆಸನಗಳು	40
18.	ದಿವ್ಯ ಜೀವನ	35
19.	'ಸಾವಿತ್ರಿ' ಸಾರಸಂಗ್ರಹ	20
20.	ಅಪೂರ್ವ ಆಧ್ಯಾತ್ಮಿಕ ಅನುಭವ	25
21.	ಶ್ರೀವಿದ್ಯಾ ಸಾಧನೆ	35
22.	ರುದ್ರ ಮಂತ್ರಗಳು (ನಮಕ, ಚಮಕ)	50
23.	ವೇದ ಪ್ರಕಾಶ	20

24. ವಿವಾಹದ ಸಂಕೇತ	15
25. ಪ್ರಗತಿಪರ ಜೀವನ - ದೃಢ ಸೂತ್ರಗಳು	30
26. ಆಧುನಿಕ ಮಾನವನಿಗಾಗಿ ಯೋಗ	30
27. ಶಾಂತಿ ಮಂತ್ರಗಳು	25
28. ಗಣಪತಿ , ಬ್ರಹ್ಮಣಸ್ಪತಿ, ಕುಮಾರ	30
29. ಅಗ್ನಿ - ದೈವೀ ಸಂಕಲ್ಪದ ಅಧಿದೇವತೆ	65
30. ಅಗ್ನಿ ಸಹಸ್ರನಾಮ	20
31. ಭಾರತೀಯ ನವಜನ್ಮ	22
32. ವಾಯು ಹಾಗೂ ಸೋಮ ಸಹಸ್ರನಾಮ	27
33. ಓಂ - ಪರಮಪದ	30
34. ಇಂದ್ರ ಸಹಸ್ರನಾಮ	18
35. ಆರೋಗ್ಯಮಯ ಜೀವನ	18
36. ಇಂದ್ರ - ದೈವೀ ಮನಸ್ಸಿನ ಅಧಿದೇವತೆ	15
37. ಕುಂಡಲಿನಿ ಯೋಗ	45
38. ಸೋಮ - ಅಸ್ತಿತ್ವದ ಆನಂದ	18
39. ವ್ಯಾಪಕವಾಗಿ ಬಳಕೆಯಲ್ಲಿರುವ ವೇದ ಮಂತ್ರಗಳು	60
40. ಕಾರ್ಯಸಾಧನೆಯ ರಹಸ್ಯಗಳು - ಅಗ್ನಿಯ ಮಾರ್ಗದರ್ಶನ	25
41. ಸಂಕ್ಷಿಪ್ತ ಭಗವದ್ ಗೀತೆ - 125 ಶ್ಲೋಕಗಳು ಅರ್ಥ ಸಹಿತ	20
42. ಯಜುರ್‌ವೇದ ಶಾಖೆಗಳು	35
43. ತಂತ್ರ ಸಾಧನೆ	25
44. ಕರ್ನಾಟಕ ಮಹಿಮ್ನ ಸ್ತೋತ್ರ	30
45. ವೇದ ಸುರಭಿ	25
46. ಜೀವನ ವಿಕಾಸ	40
47. ಪುರುಷ ಸೂಕ್ತ	50
48. ಗೃಹ ವಾಸ್ತು	12
49. ಮಂತ್ರಮಣಿ	70
50. ಶ್ರೀಸೂಕ್ತ	50
51. ಅಂತಃಪ್ರಕಾಶದ ಅಧಿದೇವತೆ : ಸೂರ್ಯ	40
52. ಗಣಪತಿ ಆವಾಹನೆ	10

(ಸಂಸ್ಕೃತ, ಇಂಗ್ಲೀಷ್ ಹಾಗೂ ಹಲವು ಭಾರತೀಯ ಭಾಷೆಗಳ ಪ್ರಕಟಣೆ ಪಟ್ಟಿಗಾಗಿ ನಮ್ಮನ್ನು ಸಂಪರ್ಕಿಸಿ.)

ಡಾ॥ ಸಾ. ಕೃ. ರಾಮಚಂದ್ರರಾವ್

(4.10.1927 - 2.02.2006)

ವಿದ್ಯಾಲಂಕಾರ, ಶಾಸ್ತ್ರ-ಚೂಡಾಮಣಿ, ಸಂಗೀತ ಕಲಾರತ್ನ , ವೇದ-ಕಮಲ, ಮುಂತಾದ ಬಿರುದುಳ್ಳ ಪ್ರೊ॥ ಸಾಲಿಗ್ರಾಮ ಕೃಷ್ಣ ರಾಮಚಂದ್ರ ರಾವ್ ಅವರು ಆಧುನಿಕ ಸಂಶೋಧನೆಯನ್ನು ಸಾಂಪ್ರದಾಯಿಕ ಕಲಿಕೆಯೊಂದಿಗೆ ಸಂಯೋಜಿಸಿದ್ದ ಖ್ಯಾತ ವಿದ್ವಾಂಸರು. ಸಂಸ್ಕೃತ, ಪಾಲಿ, ಅರ್ಧಮಾಗಧಿ ಹಾಗೂ ಹಲವಾರು ಆಧುನಿಕ ಭಾರತೀಯ ಭಾಷೆಗಳಲ್ಲದೇ, ಟಿಬೆಟನ್ ಮತ್ತು ಕೆಲವು ಐರೋಪ್ಯ ಭಾಷೆಗಳಲ್ಲಿ ಸಹ ಪರಿಣತೆಯನ್ನು ಸಾಧಿಸಿದ್ದ ಅವರು ವೇದಾಂತ, ಬೌದ್ಧ ಹಾಗೂ ಜೈನ ಧರ್ಮ, ಕಲೆ ಮತ್ತು ಸಾಹಿತ್ಯ, ಭಾರತೀಯ ಸಂಸ್ಕೃತಿಯ ಬಗ್ಗೆ ವ್ಯಾಪಕವಾದ ಲೇಖನಗಳನ್ನು ಬರೆದಿದ್ದಾರೆ.

ಅವರು ಕನ್ನಡದಲ್ಲಿ ಅರವತ್ತಕ್ಕೂ ಹೆಚ್ಚು ಪುಸ್ತಕಗಳನ್ನಲ್ಲದೇ, ಸಂಸ್ಕೃತದಲ್ಲಿ ಒಂದು ನಾಟಕ ಮತ್ತು ಬೌದ್ಧ ಸಾಹಿತ್ಯದ ಮೇಲೆ ಪಾಲಿ ಭಾಷೆಯಲ್ಲಿ ವ್ಯಾಖ್ಯಾನವನ್ನು ಬರೆದಿದ್ದಾರೆ. ಕನ್ನಡದಲ್ಲಿನ ಅವರ ಶಿಲ್ಪಶಾಸ್ತ್ರದ ಮೇಲಿನ ಪುಸ್ತಕವು ರಾಜ್ಯ ಸಾಹಿತ್ಯ ಅಕಾಡೆಮಿ ಪುರಸ್ಕಾರವನ್ನು ಗಳಿಸಿದೆ.

ಆಂಗ್ಲ ಭಾಷೆಯಲ್ಲಿನ ಅವರ ಕೆಲವು ಪ್ರಕಟಣೆಗಳು: ಭಾರತೀಯ ವೈದ್ಯಶಾಸ್ತ್ರದ ವಿಶ್ವಕೋಶ: ಮೂರು ಸಂಪುಟ (ಪಾಪ್ಯುಲರ್ ಪ್ರಕಾಶನ, ಮುಂಬಯಿ); ಟಿಬೆಟನ್ ತಾಂತ್ರಿಕ ಪರಂಪರೆ ಮತ್ತು ಟಿಬೆಟನ್ ಮೆಡಿಟೇಶನ್ (ಆರ್‌ನಾಲ್ಡ್ ಹೈನ್‌ಮನ್, ದೆಹಲಿ), ಅದ್ವೈತದಲ್ಲಿ ಪ್ರಜ್ಞೆ ಮತ್ತು ಭಾರತೀಯ ದೇವಾಲಯಗಳ ಮೇಲೆ 6 ಪುಸ್ತಕಗಳ ಸರಣಿ (IBH ಪ್ರಕಾಶನ, ಬೆಂಗಳೂರು) ಮತ್ತು ಭಾರತೀಯ ಚಿಂತನೆಯ ಉಗಮಗಳು (ಬೆಂಗಳೂರು ವಿಶ್ವವಿದ್ಯಾನಿಲಯ), ಕಲ್ಪತರು ಸಂಶೋಧನಾ ಅಕಾಡೆಮಿಯು ಅವರ ಪ್ರತಿಮಾ-ಕೋಶವನ್ನು ಆರು ಸಂಪುಟಗಳಲ್ಲೂ , ಆಗಮ-ಕೋಶವನ್ನು ಹನ್ನೆರಡು ಸಂಪುಟಗಳಲ್ಲೂ ಮತ್ತು ಭಾರತೀಯ ದೇವಾಲಯಗಳ ಶಿಲ್ಪ ಕುರಿತ ಬರಹಗಳನ್ನು ಮೂರು ಸಂಪುಟಗಳಲ್ಲಿ ಪ್ರಕಟಿಸಿದೆ.

ಅವರು ಋಗ್ವೇದ-ದರ್ಶನದ ಬಗ್ಗೆ 18 ಸಂಪುಟಗಳನ್ನು ಪ್ರಕಟಿಸಿದ್ದಾರೆ. ಅವರು ಸಂಗೀತ ಶಾಸ್ತ್ರಜ್ಞರೂ ಶಿಲ್ಪಿಗಳೂ ಚಿತ್ರಕಾರರೂ ಸಹ ಆಗಿದ್ದರು.

ಅರೋ
ನಾದ
ಬೆಂಗಳೂರು

ರೂ.125